ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 10 ಮಂಗಳವಾರ 2025

ಸಂಪುಟ: 46 | ಸಂಚಿಕೆ: 55 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬೆಂಗಳೂರು ಕಾಲ್ತುಳಿತ ದುರಂತವನ್ನು ಗಂಭೀರವಾಗಿ ಪರಿಗಣಿಸಿದ ಕಾಂಗ್ರೆಸ್ ಹೈಕಮಾಂಡ್

ಸಿಎಂ, ಡಿಸಿಎಂ, ಗೃಹ, ಲೋಕೋಪಯೋಗಿ ಸಚಿವರಿಗೆ

ದೆಹಲಿಗೆ ಬುಲಾವ್

ಸಮಗ್ರ ಮಾಹಿತಿಯೊಂದಿಗೆ ನಾಲ್ವರೂ ಇಂದು ದೆಹಲಿ ಯಾತ್ರೆ

- ಗೃಹ ಸಚಿವರಿಂದಲೇ ಎಲ್ಲಾ ಮಾಹಿತಿ ಪಡೆದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್; ತಮ್ಮ ನಿಸ್ಸಹಾಯಕತೆ ತೋಡಿಕೊಂಡಿರುವ ಪರಮೇಶ್ವರ್
- ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸಮ್ಮುಖದಲ್ಲಿ ಮಹತ್ವದ ಸಭೆ

ಬೆಂಗಳೂರು,ಜೂ.9(ಕೆಎಂಶಿ)– ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಐಪಿಎಲ್ ಟ್ರೋಫಿ ಗೆದ್ದ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಕಾಂಗ್ರೆಸ್ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರುಗಳನ್ನು ದೆಹಲಿಗೆ ಬುಲಾವ್ ಮಾಡಿದ್ದಾರೆ.


ಘಟನೆಗೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಪರಮೇಶ್ವರ್ ಸೇರಿದಂತೆ ಇನ್ನೂ ಕೆಲವು ಅಧಿಕಾರಿಗಳ ತಲೆದಂಡ ಆಗಬಹುದೆಂದು ಹೇಳಲಾಗುತ್ತಿದೆ. ವರಿಷ್ಠರ ಸೂಚನೆಯಂತೆ ನಾಲ್ವರೂ ನಾಳೆ ದೆಹಲಿಗೆ ತೆರಳುತ್ತಿದ್ದಾರೆ. ಶಿವಕುಮಾರ್ ದೆಹಲಿಯಲ್ಲೇ ಇರುವರಾದರೂ, ಬೆಂಗಳೂರಿಗೆ ಹಿಂತಿರುಗಿ ಮುಖ್ಯಮಂತ್ರಿ ಜೊತೆ ದೆಹಲಿಗೆ ತೆರಳಲಿದ್ದಾರೆ.

ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಈ ನಾಲ್ವರೂ ನಾಯಕರನ್ನು ಸಂಪರ್ಕಿಸಿ ನಾಳೆ ಮಧ್ಯಾಹ್ನ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಕರೆದಿರುವ ಸಭೆಯಲ್ಲಿ ಪಾಲ್ಗೊಳ್ಳುವಂತೆ ಸೂಚಿಸಿದ್ದಾರೆ.

ಸಭೆಗೆ ಬರುವುದಕ್ಕೂ ಮುನ್ನ ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ತರುವಂತೆಯೂ ಆದೇಶಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಡಾ.ಪರಮೇಶ್ವರ್ ಅವರನ್ನು ಇಂದು ಬೆಳಗ್ಗೆ ಸಂಪರ್ಕಿಸಿದ ವೇಣುಗೋಪಾಲ್, ಮಾಹಿತಿ ಕಲೆ ಹಾಕಿದ್ದಾರೆ. ಸಂಭ್ರಮಾಚರಣೆ ಮತ್ತು ನಂತರ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ ಸರ್ಕಾರ ಮತ್ತು ಪೊಲೀಸರು ಮಾಹಿತಿ ನೀಡದೆ ನನ್ನನ್ನೂ ಕತ್ತಲೆಯಲ್ಲಿ ಇಟ್ಟಿದ್ದರು. ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಹಾಗೂ ಸರ್ಕಾರದ ಮುಖ್ಯಕಾರ್ಯದರ್ಶಿ ಅವರೇ ವಿಧಾನ ಸೌಧದ ಮುಂದೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಇದು ಸಹ ನನಗೆ ಅಂದು ಮಧ್ಯಾಹ್ನದವರೆಗೂ ಯಾವುದೇ ಮಾಹಿತಿ ಇರಲಿಲ್ಲ, ಆ ನಂತರವಷ್ಟೇ ಡಿಪಿಆರ್ ▶ 6ನೇ ಪುಟಕ್ಕೆ


ಸಿದ್ದರಾಮಯ್ಯ


ಡಿ.ಕೆ.ಶಿವಕುಮಾರ್


ಡಾ.ಪರಮೇಶ್ವರ್


ಸತೀಶ್ ಜಾರಕಿಹೊಳಿ

ಖಾತೆ ಬದಲಾವಣೆಗೆ ಪಟ್ಟು ವಿಚಾರ ಸತ್ಯಕ್ಕೆ ದೂರವಾದದ್ದು

ಡಾ.ಜಿ.ಪರಮೇಶ್ವರ್ ಸ್ಪಷ್ಟನೆ

ಬೆಂಗಳೂರು: ಬೆಂಗಳೂರು ಕಾಲ್ತುಳಿತ ಘಟನೆ ಬೆನ್ನಲ್ಲೇ ಖಾತೆ ಬದಲಾವಣೆಗೆ ಪಟ್ಟು ಹಿಡಿದಿದ್ದೇನೆಂಬ ವದಂತಿ ಸತ್ಯಕ್ಕೆ ದೂರವಾದದ್ದು ಎಂದು ಗೃಹ ಸಚಿವ ಪರಮೇಶ್ವರ್ ಸ್ಪಷ್ಟನೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹ ಖಾತೆ ಬೇಡ ಎಂಬ ಸುದ್ದಿ ಹರಡುತ್ತಿರುವ ವಿಚಾರಕ್ಕೆ ಮಾಧ್ಯಮಗಳ ಮೇಲೆ ಗರಂ ಆದರು. ನಿಮಗೆ ಏನು ಹೇಳಬೇಕು ಗೊತ್ತಿಲ್ಲ. ಯಾರು ಇದನ್ನೆಲ್ಲಾ ಹೇಳಿದ್ದಾರೆ ಗೊತ್ತಿಲ್ಲ. ಯಾರು ಹೀಗಂತ ಹೇಳಿದ್ದಾರೆ ಅಂತ ಮೊದಲು ಹೇಳಿ ಎಂದು ಕೋಪದಲ್ಲಿ ಪ್ರಶ್ನಿಸಿದರು.

ಯಾರು ಏನೇ ಹೇಳಲಿ. ನೀವು ನನ್ನ ಬಳಿ ನೇರವಾಗಿ ಬಂದು ಕೇಳಿ. ನಾನು ಸಂಯಮದಿಂದಲೇ ನಡೆದುಕೊಂಡಿದ್ದೇನೆ. ಈ ರೀತಿ ಒಬ್ಬರ ವ್ಯಕ್ತಿತ್ವವನ್ನ ಕೊಲೆ ಮಾಡಬಾರದು, ಇದು ಸರಿ ▶ 6ನೇ ಪುಟಕ್ಕೆ

ಐಎಎಸ್–ಐಪಿಎಸ್ ನಡುವೆ ಶೀತಲ ಸಮರಕ್ಕೆ ನಾಂದಿ

ಬೆಂಗಳೂರು, ಜೂ. 9(ಕೆಎಂಶಿ) –ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ ಐಎಎಸ್ ಮತ್ತು ಐಪಿಎಸ್ ನಡುವೆ ಶೀತಲ ಸಮರಕ್ಕೆ ಕಾರಣವಾಗಿದೆ.

ಸಮಾರಂಭ ಹಮ್ಮಿಕೊಳ್ಳಲು ಸಾಧ್ಯವಿಲ್ಲ ಎಂದು ನಗರ ಪೊಲೀಸರು ತಿಳಿಸಿದ್ದರೂ, ಇಬ್ಬರು ಐಎಎಸ್ ಅಧಿಕಾರಿಗಳು ಪೊಲೀಸರ ಸಲಹೆಯನ್ನು ತಳ್ಳಿ ಹಾಕಿ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ನಡೆಸಲು ಕಾರಣರಾದರು ಎಂದು ಐಪಿಎಸ್ ದೂರುತ್ತಿದೆ.

> ಐಪಿಎಸ್ ಅಧಿಕಾರಿಗಳ ತಲೆದಂಡವಾದ ಮೇಲೆ ಐಎಎಸ್ ಅಧಿಕಾರಿಗಳ ಮೇಲೇಕೆ ಕ್ರಮವಿಲ್ಲ!

ಮೂರನೇ ವ್ಯಕ್ತಿ ಒಬ್ಬರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇಬ್ಬರು ಅಧಿಕಾರಿಗಳು ಅಂದಿನ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಅವರನ್ನು ಬಳಕೆ ಮಾಡಿಕೊಂಡು ವಿಧಾನ ಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮ ಆಯೋಜಿಸುವಲ್ಲಿ ಯಶಸ್ವಿಯಾದರು. ಕಾಲ್ತುಳಿತ ಪ್ರಕರಣವನ್ನು ಪೊಲೀಸ್ ಇಲಾಖೆ ಮೇಲೆ ಹೊರಿಸಿ, ▶ 6ನೇ ಪುಟಕ್ಕೆ

ಮೋದಿ ಸರ್ಕಾರಕ್ಕೆ 11 ವರ್ಷ; ಸಾಧನೆ ಶೂನ್ಯ

ಸಿಎಂ ಸಿದ್ದರಾಮಯ್ಯ ಟೀಕೆ

ಮೈಸೂರು, ಜೂ. 9(ಬಿಎಲ್‌ಯು)– ಹನ್ನೊಂದು ವರ್ಷಗಳನ್ನು ಪೂರೈಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರಕ್ಕೆ 10ಕ್ಕೆ ಝೀರೋ ಮಾರ್ಕ್ಸ್ ನೀಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಟಿ.ಕೆ.ಬಡಾವಣೆಯ ತಮ್ಮ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹನ್ನೊಂದು ವರ್ಷದ ನರೇಂದ್ರ ಮೋದಿ ಆಡಳಿತ ಶೂನ್ಯ ಸಾಧನೆ ಮಾಡಿದೆ. ಜನರಿಗೆ ಕೊಟ್ಟ ಭರವಸೆ ಈಡೇರಿಸಿಲ್ಲ, ನುಡಿದಂತೆ ನಡೆದಿಲ್ಲ. ಇದರಿಂದ ಯಾವುದೇ ಯೋಜನೆಗಳು ಸಾಕಾರಗೊಂಡಿಲ್ಲ ಎಂದರು.

ನೋಟು ಅಮಾನ್ಯೀಕರಣದಿಂದ ಯಾರಿಗೆ ಅನುಕೂಲವಾಯಿತು, ಅಚ್ಛೇ ದಿನ್ ಯಾರಿಗೆ ಬಂದಿತು, ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಯಾರಿಗೆ ಲಭಿಸಿತು ಎಂದು ಪ್ರಶ್ನೆಗಳ ಸುರಿಮಳೆಗೈದ ಸಿದ್ದರಾಮಯ್ಯ, ಮೋದಿ ಕೊಟ್ಟ ಯಾವುದೇ ಭರವಸೆ ಈಡೇರಲಿಲ್ಲ. ಇದರಿಂದ ಮೋದಿ ಸರ್ಕಾರಕ್ಕೆ ನಾನು 10ಕ್ಕೆ ಶೂನ್ಯ ಅಂಕ ನೀಡುತ್ತೇನೆ ಎಂದರು.

14ನೇ ಹಣಕಾಸು ಆಯೋಗದಿಂದ ರಾಜ್ಯಗಳಿಗೆ ಹಣ ನೀಡುವುದಾಗಿ ಆಶ್ವಾಸನೆ ನೀಡಿದರು. ಆದರೆ ನಯಾಪೈಸೆ ಹಣ ಬರಲಿಲ್ಲ. ಕ್ರಾಂತಿಕಾರಕ ತೆರಿಗೆ ಸಂಗ್ರಹ ಮಾಡುತ್ತೇವೆ ಎಂದರು. ಇವರ ಅವಧಿಯಲ್ಲಿ ಸಂಗ್ರಹವಾದ ತೆರಿಗೆ ಎಷ್ಟು ▶ 6ನೇ ಪುಟಕ್ಕೆ

ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯವರ 11 ವರ್ಷಗಳ ಅಧಿಕಾರಾವಧಿಯನ್ನು ಶ್ಲಾಘಿಸಿದ ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಮೋದಿ ನಾಯಕತ್ವದಲ್ಲಿ ಸರ್ಕಾರ ಮಾಡಿದ ಕೆಲಸಗಳನ್ನು ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡಬೇಕು ಎಂದರು.


ಜೆ.ಪಿ.ನಡ್ಡಾ

ಪ್ರಧಾನಿ ಮೋದಿ ಅವರು ದೇಶದ ರಾಜಕೀಯ ಸಂಸ್ಕೃತಿಯನ್ನು ಬದಲಾಯಿಸಿದರು. ಜವಾಬ್ದಾರಿಯುತ ಸರ್ಕಾರವನ್ನು ಒದಗಿಸುವ ಮೂಲಕ ಉತ್ತಮ ಆಡಳಿತದ ರಾಜಕೀಯವನ್ನು ಪ್ರಾರಂಭಿಸಿದರು. ಆದರೆ ಕಾಂಗ್ರೆಸ್ ನೇತೃತ್ವದ ಹಿಂದಿನ ಯುಪಿಎ ಸರ್ಕಾರ ಭ್ರಷ್ಟಾಚಾರ, ಹಗರಣಗಳು ಮತ್ತು ಸಮಾಧಾನದ ರಾಜಕೀಯಕ್ಕೆ ಹೆಸರುವಾಸಿಯಾಗಿತ್ತು ಎಂದರು.

ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ನಡ್ಡಾ, ಪ್ರಧಾನಿ ನರೇಂದ್ರ ಮೋದಿ ಜವಾಬ್ದಾರಿಯುತ ಮತ್ತು ಬಲಿಷ್ಠ ▶ 6ನೇ ಪುಟಕ್ಕೆ

ಚಿನ್ನಸ್ವಾಮಿ ಸ್ಟೇಡಿಯಂ ಸ್ಥಳಾಂತರಕ್ಕೆ ಚಿಂತನೆ



ಸಿಎಂ ಸಿದ್ದರಾಮಯ್ಯ ಮೈಸೂರಲ್ಲಿ ಹೇಳಿಕೆ

ಮೈಸೂರು, ಜೂ.9(ಬಿಎಲ್‌ಯು)– ಸಿಲಿಕಾನ್ ಸಿಟಿ ಬೆಂಗಳೂರಿನ ಪ್ರಸಿದ್ಧ ಎಂ.ಚಿನ್ನಸ್ವಾಮಿ ಕ್ರಿಕೆಟ್ ಸ್ಟೇಡಿಯಂ ಅನ್ನು ಬೇರೆಡೆ ಸ್ಥಳಾಂತರ ಮಾಡುವ ಬಗ್ಗೆ ಗಂಭೀರ ಚಿಂತನೆ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತ ದುರ್ಘಟನೆ ನಂತರ ಸ್ಟೇಡಿಯಂ ಅನ್ನು ಬೇರೆ ಕಡೆ ಸ್ಥಳಾಂತರ ▶ 6ನೇ ಪುಟಕ್ಕೆ

ಕ್ರಿಮಿನಲ್ ಪ್ರಕರಣ ರದ್ದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ ಆರ್‌ಸಿಬಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ತನ್ನ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸುವಂತೆ ಕೋರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೋಮವಾರ ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಕಾರ್ಯಕ್ರಮದ ಆಯೋಜಕರಾದ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕೂಡ ತನ್ನ ವಿರುದ್ಧದ ಎಫ್‌ಐಆರ್ ಅನ್ನು ಪ್ರಶ್ನಿಸಿ ಪ್ರತ್ಯೇಕ ಅರ್ಜಿ ಸಲ್ಲಿಸಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಾಲೀಕರಾದ ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಲಿಮಿಟೆಡ್, ಈ ಪ್ರಕರಣದಲ್ಲಿ ತನ್ನನ್ನು ತಪ್ಪಾಗಿ ಸಿಲುಕಿಸಲಾಗಿದೆ. ಆರ್‌ಸಿಬಿ ಸಂಭ್ರಮಾಚರಣೆಗೆ ಸೀಮಿತ ಪಾಸ್‌ಗಳು ಮಾತ್ರ ಲಭ್ಯವಿದೆ ಎಂದು ಆರ್‌ಸಿಎಸ್‌ಎಲ್ ಸಾಮಾಜಿಕ ಮಾಧ್ಯಮದಲ್ಲಿ ಸ್ಪಷ್ಟವಾಗಿ ತಿಳಿಸಿತ್ತು ಎಂದು ಅರ್ಜಿಯಲ್ಲಿ ಹೇಳಿದೆ. ಉಚಿತ ಪಾಸ್‌ಗಳಿಗೂ ಸಹ ಪ್ರವೇಶಕ್ಕೆ ಪೂರ್ವ ನೋಂದಣಿ ಕಡ್ಡಾಯ ಎಂದು ಹೇಳಲಾಗಿತ್ತು. ಮಧ್ಯಾಹ್ನ 1.45ಕ್ಕೆ ತೆರೆಯಬೇಕಿದ್ದ ಕ್ರೀಡಾಂಗಣದ ಗೇಟ್‌ಗಳನ್ನು ಮಧ್ಯಾಹ್ನ 3 ಗಂಟೆಗೆ ತೆರೆಯಲಾಗಿದ್ದು, ಇದರಿಂದಾಗಿ ಜನಸಂದಣಿ ಹೆಚ್ಚಾಗಿದೆ ಎಂದು ಅದು ಆರೋಪಿಸಿದೆ.

ಆ.15ರಿಂದ ಪ್ಲಾಸ್ಟಿಕ್ ಮುಕ್ತ ದೇವಾಲಯ

- ಮುಜರಾಯಿ ದೇವಾಲಯಗಳಲ್ಲಿ ನೀರಿನ ಬಾಟಲ್ ಸೇರಿ ಪ್ಲಾಸ್ಟಿಕ್ ಬಳಕೆ ನಿಷಿದ್ಧ
- 2 ತಿಂಗಳ ಒಳಗಡೆ ಇರುವ ಎಲ್ಲಾ ಪ್ಲಾಸ್ಟಿಕ್ ಪದಾರ್ಥಗಳನ್ನು ಖಾಲಿ ಮಾಡಬೇಕು
- ಚಾಮುಂಡೇಶ್ವರಿ ಸೇರಿದಂತೆ ಹಲವು ದೇವಾಲಯಗಳ ಆಸ್ತಿ ಭದ್ರತೆಗೆ ಸಚಿವರ ಸೂಚನೆ






ಬೆಂಗಳೂರು, ಜೂ.9– ಮುಂದಿನ ಆಗಸ್ಟ್ 15ರಿಂದ ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಾಲಯಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲಾ ಬಗೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಲಾಗುತ್ತದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಮುಜರಾಯಿ ಇಲಾಖೆ ಪ್ರಗತಿ ಪರಿಶೀಲನಾ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಆ.15ರಿಂದ ಪ್ಲಾಸ್ಟಿಕ್ ಮುಕ್ತ ದೇವಾಲಯ ಪ್ರಾರಂಭ ಮಾಡುತ್ತಿದ್ದೇವೆ. ದೇವಾಲಯಗಳಲ್ಲಿ ಯಾವುದೇ ಕಾರಣಕ್ಕೂ ಪ್ಲಾಸ್ಟಿಕ್ ಬಳಕೆ ಮಾಡಬಾರದು ಎಂದು ಸೂಚಿಸಿದರು.

ಈ ಆದೇಶ ಜಾರಿಗೆ ಎರಡು ತಿಂಗಳು ಸಮಯ ಕೊಡಲಾಗಿದ್ದು, ಈಗಾಗಲೇ ಪ್ಲಾಸ್ಟಿಕ್ ಪದಾರ್ಥಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದರೆ ಅದನ್ನು ಬಳಕೆ ಮಾಡಬಹುದು. ಆ.15 ರಿಂದ ದೇವಾಲಯಗಳಲ್ಲಿ ಪ್ಲಾಸ್ಟಿಕ್ ಬಳಕೆಗೆ ಅವಕಾಶ ಇರುವುದಿಲ್ಲ ಎಂದರು. ಹೊಸ ಪ್ರಾಧಿಕಾರಗಳ ಸಮಗ್ರ ಯೋಜನೆಗೆ ಕ್ರಮ ವಹಿಸಲಾಗಿದೆ. ಹುಲಿಗೆಮ್ಮ, ಮಲೆ ಮಹದೇಶ್ವರ, ಘಾಟಿ ಸುಬ್ರಮಣ್ಯ, ರೇಣುಕಾ ಎಲ್ಲಮ್ಮ, ಚಾಮುಂಡೇಶ್ವರಿ ದೇವಾಲಯ ಅಭಿವೃದ್ಧಿ ಪ್ರಾಧಿಕಾರ ಮಾಸ್ಟರ್ ಪ್ಲ್ಯಾನ್ ಮಾಡಲು ನಿರ್ಧಾರ ಮಾಡಲಾಗಿದೆ. ಈ ನಿಟ್ಟಿನಲ್ಲಿ ಚಾಮುಂಡೇಶ್ವರಿ ಬೆಟ್ಟದಲ್ಲಿ ಒತ್ತುವರಿ ಆಗಿದ್ದ 11 ಎಕರೆ ಜಾಗವನ್ನು ತೆರವು ಮಾಡಲಾಗಿದೆ. ಉಳಿದ ಜಾಗ ತೆರವುಗೊಳಿಸಲು ಸೂಚಿಸಲಾಗಿದೆ. ▶ 6ನೇ ಪುಟಕ್ಕೆ

> “ 31 ಜಿಲ್ಲೆಗಳಲ್ಲೂ ಧಾರ್ಮಿಕ ಪರಿಷತ್ ರಚನೆಗೆ ಕ್ರಮಕ್ಕೆ ಸೂಚನೆ ನೀಡಲಾಗಿದ್ದು, 8 ಜಿಲ್ಲೆಯಲ್ಲಿ ಮಾತ್ರ ಧಾರ್ಮಿಕ ಪರಿಷತ್ ರಚನೆಯಾಗಿದ್ದು, ಉಳಿದ ಕಡೆ ಶೀಘ್ರವೇ ಮಾಡಬೇಕು. ಬೇರೆ ಬೇರೆ ರಾಜ್ಯದಲ್ಲಿ ಇರುವ ಮುಜರಾಯಿ ಇಲಾಖೆ ವಸತಿ ಭವನಗಳಲ್ಲಿ 3 ಸ್ಟಾರ್ ಸೌಲಭ್ಯಗಳನ್ನು ನೀಡಲು ನಿರ್ಧರಿಸಲಾಗಿದೆ. ತಿರುಪತಿ, ತುಳಜಾಪುರ, ಪಂಢರಾಪುರ ಸೇರಿ ಹಲವು ಕಡೆ ಭವನಗಳ ನಿರ್ಮಾಣಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಬೇರೆ ರಾಜ್ಯದಲ್ಲಿ ಇರುವ ಭವನಗಳ ರೂಮ್ ಬುಕ್ಕಿಂಗ್‌ಗೆ ಆನ್‌ಲೈನ್ ವ್ಯವಸ್ಥೆ ಜಾರಿ ಮಾಡಲು ಸೂಚನೆ ನೀಡಲಾಗಿದೆ.

ಸಿದ್ದರಾಮಯ್ಯನವರೇ... ನೀವು ರಾಜ್ಯದ ಮುಖ್ಯಮಂತ್ರಿಯೋ ಇಲ್ಲ ವಿಧಾನಸೌಧದ ಮೆಟ್ಟಿಲುಗಳಿಗಷ್ಟೇ ಸೀಮಿತವೋ...!?



ಬೆಂಗಳೂರು, ಜೂ. 9(ಕೆಎಂಶಿ)– ಸಿದ್ದರಾಮಯ್ಯ ನೀವು ಕರ್ನಾಟಕದ ಮುಖ್ಯಮಂತ್ರಿಯೋ ಅಥವಾ ವಿಧಾನ ಸೌಧದ ಮೆಟ್ಟಿಲುಗಳಿಗಷ್ಟೇ ಮುಖ್ಯಮಂತ್ರಿಯೋ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಐಪಿಎಲ್ ಟ್ರೋಫಿ ಗೆದ್ದ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಣೆ ವೇಳೆ ಕೆಎಸ್‌ಸಿಎ ಕ್ರೀಡಾಂಗಣ ಬಳಿ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನಡುವಿನ ವಾಗ್ವಾಳಿ ಇನ್ನೂ ಮುಂದುವರೆದಿದೆ. ಕಾಲ್ತುಳಿತದಿಂದ 11 ಮಂದಿ ಕ್ರೀಡಾಭಿಮಾನಿಗಳು ಮೃತಪಟ್ಟ ಹಿನ್ನೆಲೆಯಲ್ಲಿ ಸರ್ಕಾರ ಏರ್ಪಡಿಸಿದ್ದ ಸಮಾರಂಭವನ್ನು ಕುಮಾರಸ್ವಾಮಿ ಟೀಕಿಸಿದ್ದರು.

ಇದಕ್ಕೆ ಉತ್ತರಿಸಿದ ಸಿದ್ದರಾಮಯ್ಯ, ಕ್ರೀಡಾಭಿಮಾನಿಗಳು ಮೃತಪಟ್ಟಿದ್ದು ಸರ್ಕಾರ ಏರ್ಪಡಿಸಿದ್ದ ವಿಧಾನಸೌಧದ ಮೆಟ್ಟಿಲುಗಳ ಮೇಲಿನ ಸಮಾರಂಭದಲ್ಲಿ ಅಲ್ಲ, ಕೆಎಸ್‌ಸಿಎ ಕ್ರೀಡಾಂಗಣದ ಬಳಿ ಸಂಭವಿಸಿದ ದುರಂತದಲ್ಲಿ ಎಂದಿದ್ದರು. ವಿಧಾನಸೌಧ ಮೆಟ್ಟಿಲುಗಳ ಮೇಲೆ ಸರ್ಕಾರ ವಿಜಯೋತ್ಸವ ಆಚರಿಸಿತು, ಅಲ್ಲಿ ಯಾರೂ ಸಾಯಲಿಲ್ಲ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿಯಷ್ಟೇ ಕಾಲ್ತುಳಿತ ಸಂಭವಿಸಿ ಜನ ಸತ್ತಿದ್ದಾರೆ ಎಂದಿದ್ದರು. ಇದಕ್ಕೆ ಟ್ವೀಟ್ ಮೂಲಕ ತೀಕ್ಷ್ಣವಾಗಿ ತಿರುಗೇಟು ನೀಡಿರುವ ಕುಮಾರಸ್ವಾಮಿ, ಸಿದ್ದರಾಮಯ್ಯ ನೀವು ವಿಧಾನಸೌಧದ ಮೆಟ್ಟಿಲುಗಳಿಗೆ ಮಾತ್ರ ಮುಖ್ಯಮಂತ್ರಿಯೇ, ದಯವಿಟ್ಟು ಹೇಳುವಿರಾ. ಕಾಲ್ತುಳಿತ ದುರಂತದ ಹೊಣೆಯನ್ನು ಪೊಲೀಸರ ಮೇಲಷ್ಟೇ ಎತ್ತಿಹಾಕಿ 'ಕೈ' ತೊಳೆದುಕೊಳ್ಳುವುದು ಎಷ್ಟು ಸರಿ, ಪ್ರತಿಪಕ್ಷಗಳನ್ನು ದೂರಿ ಪಾರಾಗುವ ಹುನ್ನಾರವೇಕೆ, ಮೆಟ್ಟಿಲುಗಳ ಮುಖ್ಯಮಂತ್ರಿಗಳೇ ಎಂದು ಮಾತುಗಳಿಂದ ಕುಟುಕಿದ್ದಾರೆ.

ಹಠಾತ್ ಹೃದಯಾಘಾತಕ್ಕೆ ತ್ವರಿತ ಚಿಕಿತ್ಸೆಗೆ ಡಾ.ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ ವರದಾನ

ಮೈಸೂರು,ಜೂ.9(ಪಿಎಂ)– ಹಠಾತ್ ಹೃದಯಾಘಾತಕ್ಕೆ ತ್ವರಿತ ಚಿಕಿತ್ಸೆ ಒದಗಿಸಿ ಜೀವ ಉಳಿಸುವಲ್ಲಿ ರಾಜ್ಯ ಸರ್ಕಾರದ 'ಡಾ.ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ' ಮಹತ್ವದ ಪಾತ್ರ ವಹಿಸುತ್ತಿದೆ.

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ 2023ರ ಮಾ.20ರಿಂದ 2025ರ ಮೇ 31ರವರೆಗೆ ಒಟ್ಟು 1,00,617 ಮಂದಿಗೆ ಇಸಿಜಿ ಮಾಡಿದ್ದು, ಇದರಲ್ಲಿ ಒಟ್ಟು 644 ಮಂದಿಗೆ ಹೃದಯಾಘಾತ ಕಂಡುಬಂದಿದೆ. ಈ ಪೈಕಿ ತೀವ್ರತರ ಸಮಸ್ಯೆ ಕಾಣಿಸಿಕೊಂಡಿದ್ದ 49 ಮಂದಿಗೆ ಸದರಿ ಯೋಜನೆಯಡಿ 'ಟೆನೆಕ್ಟ್‌ಪ್ಲೇಸ್' ಲಸಿಕೆಯನ್ನು ಉಚಿತವಾಗಿ ನೀಡಿದ್ದು, ಹಲವರ ಜೀವ ಉಳಿಸಲು ಸಾಧ್ಯವಾಗಿದೆ. ಹೃದಯಾಘಾತಕ್ಕೊಳಗಾದವರಿಗೆ ಗೋಲ್ಡನ್ ಅವರ್ ಒಳಗೆ ಚಿಕಿತ್ಸೆ ಕೊಡುವುದು ಬಹುಮುಖ್ಯ. ಇದರಿಂದ ಸಾಕಷ್ಟು ಜೀವಗಳನ್ನು ಉಳಿಸಬಹುದು. ಹಾಗಾಗಿ ಗೋಲ್ಡನ್ ಟೈಮ್ ಒಳಗೆ ಸಮೀಪದಲ್ಲೇ ಸೂಕ್ತ ಚಿಕಿತ್ಸೆ ಕಲ್ಪಿಸಬೇಕೆಂಬ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಈ ನಿಟ್ಟಿನಲ್ಲಿ ತಾಲೂಕು ಆಸ್ಪತ್ರೆಗಳಲ್ಲೇ ಸಮರ್ಪಕ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಲಾಗಿದೆ.

ಸದರಿ ಯೋಜನೆಯು ಮೈಸೂರು ಜಿಲ್ಲೆಯಲ್ಲಿ 2023ರ ಮಾರ್ಚ್‌ನಲ್ಲಿ ಪ್ರಾರಂಭಗೊಂಡಿತು. ಪಿಪಿಪಿ ಹಾಗೂ ಹಬ್ ಮತ್ತು ಸ್ಪೋಕ್ ಮಾದರಿ ಈ ಯೋಜನೆ ಅನುಷ್ಠಾನಗೊಂಡಿದೆ. ಮೈಸೂರು ಜಯದೇವ ಆಸ್ಪತ್ರೆಯು ಹಬ್ ಕೇಂದ್ರವಾಗಿ ಕಾರ್ಯನಿರ್ವಹಿಸಲಿದ್ದು, ಜಿಲ್ಲೆಯ ಎಲ್ಲಾ ತಾಲೂಕುಗಳ 6 ಸಾರ್ವಜನಿಕ ಆಸ್ಪತ್ರೆಗಳು ಸ್ಪೋಕ್ ಕೇಂದ್ರಗಳಾಗಿ ಕಾರ್ಯನಿರ್ವಹಿಸಲಿವೆ. ಜಿಲ್ಲೆಯಲ್ಲಿ ನಂಜನಗೂಡು, ಟಿ.ನರಸೀಪುರ, ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ ಮತ್ತು ಹೆಚ್‌ಡಿ ಕೋಟೆ ತಾಲೂಕು ಆಸ್ಪತ್ರೆಗಳು ಸ್ಪೋಕ್ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಈ 6 ತಾಲೂಕು ಆಸ್ಪತ್ರೆಗಳಲ್ಲಿ ಟ್ರೈಕಾಗ್ ಸಂಸ್ಥೆಯಿಂದ ಒದಗಿಸಲಾದ ಸ್ಟೆಮಿ ಇಸಿಜಿ ಯಂತ್ರದ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಇಸಿಜಿ ಸಾಧ್ಯವಿದ್ದು, ಆ ಮೂಲಕ ರೋಗನಿರ್ಣಯ ತ್ವರಿತಗತಿಯಲ್ಲಿ ನಡೆಯಲು ಸಾಧ್ಯವಾಗಿದೆ.



> ಸಕಾಲಿಕವಾಗಿ ರೋಗ ನಿರ್ಣಯ ಮೂಲಕ ತ್ವರಿತವಾಗಿ ಚಿಕಿತ್ಸೆ ಕಲ್ಪಿಸುವುದು ಈ ಯೋಜನೆ ಮುಖ್ಯ ಉದ್ದೇಶ. ಡಾ.ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯು ಕರ್ನಾಟಕ ಸರ್ಕಾರದಿಂದ ಆರಂಭಿಸಲಾದ ಪ್ರಮುಖ ಆರೋಗ್ಯ ಕಾರ್ಯಕ್ರಮವಾಗಿದೆ. 2021ರಲ್ಲಿ ಹೃದಯಾಘಾತದಿಂದ ನಿಧನರಾದ ಡಾ.ಪುನೀತ್ ರಾಜ್‌ಕುಮಾರ್ ಅವರ ಗೌರವಾರ್ಥ ಅವರ ಹೆಸರಿನಲ್ಲಿ ಈ ಯೋಜನೆ ರೂಪಿಸಲಾಗಿದೆ.

ಜೀವರಕ್ಷಕ ಲಸಿಕೆ: ಹೃದಯಾಘಾತಕ್ಕೆ ಒಳಗಾದವರಿಗೆ ರಕ್ತ ಹೆಪ್ಪುಗಟ್ಟುವಿಕೆಯನ್ನು ಕರಗಿಸಲು 'ಟೆನೆಕ್ಟೆಪ್ಲೇಸ್' ಜೀವರಕ್ಷಕ ಲಸಿಕೆ ನೀಡಲಾಗುತ್ತದೆ. ಉಚಿತವಾಗಿ ನೀಡುವ ಈ ಲಸಿಕೆಯು ಗಂಭೀರ ಸ್ಥಿತಿಯಿಂದ ರೋಗಿಯನ್ನು ಪಾರು ಮಾಡಲು ಮಹತ್ವದ ಪಾತ್ರ ವಹಿಸಲಿದೆ. ಬಳಿಕ ಹಬ್ ಆಸ್ಪತ್ರೆಯಲ್ಲಿ ಮುಂದುವರೆದ ಚಿಕಿತ್ಸೆ ಪಡೆಯಲು ಸಹಕಾರಿಯಾಗಲಿದೆ. ಜೊತೆಗೆ ಇದರಿಂದ ಗ್ರಾಮೀಣ, ಪಟ್ಟಣ, ನಗರ ಪ್ರದೇಶಗಳ ಜನರಿಗೆ ಉಚಿತವಾಗಿ ಇಸಿಜಿ ತಪಾಸಣೆ ದೊರೆಯುತ್ತಿದೆ.

> “ ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಜಯದೇವ ಆಸ್ಪತ್ರೆ ಹಾಗೂ ಆರೋಗ್ಯ ಇಲಾಖೆ ಒಪ್ಪಂದದಡಿ ಹೃದಯ ಜ್ಯೋತಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆ ಇಲ್ಲದಿದ್ದಾಗ 'ಟೆನೆಕ್ಟೆಪ್ಲೇಸ್' ಜೀವರಕ್ಷಕ ಲಸಿಕೆ ನೀಡುವ ವ್ಯವಸ್ಥೆ ಇರಲಿಲ್ಲ. ಈಗ ಈ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ. ರೋಗಿಯೊಬ್ಬರು ತಾಲೂಕು ಆಸ್ಪತ್ರೆಗೆ ಬರುತ್ತಿದ್ದಂತೆ ಟ್ರೈಕಾಗ್ ಸಂಸ್ಥೆಯ ವಿಶಿಷ್ಟ ಇಸಿಜಿ ಯಂತ್ರದಿಂದ ತಪಾಸಣೆ ನಡೆಯಲಿದ್ದು, ಅಂತೆಯೇ ರೋಗಿಯ ಇಸಿಜಿ ವರದಿಯು ಅಂತರ್ಜಾಲದ ಮೂಲಕ ತಜ್ಞವೈದ್ಯರು ಇರುವ ಕಾಲ್ ಸೆಂಟರ್‌ಗೆ ರವಾನೆಯಾಗಲಿದೆ. ಹೀಗೆ ಸೂಕ್ತ ಚಿಕಿತ್ಸೆ ವ್ಯವಸ್ಥೆ ಸಾಧ್ಯವಾಗುತ್ತದೆ. ಪ್ರತಿಯೊಂದು ಇಸಿಜಿ ಮಾಹಿತಿಯು ಅಂತರ್ಜಾಲ ವ್ಯವಸ್ಥೆಯ ಮೂಲಕ ಕಾಲ್‌ಸೆಂಟರ್‌ಗೆ ತಲುಪಲಿದೆ. ಕಾಲ್‌ಸೆಂಟರ್‌ನಲ್ಲಿರುವ ತಜ್ಞವೈದ್ಯರು ಇಸಿಜಿ ಪರಿಶೀಲಿಸುತ್ತಿದ್ದಂತೆ ಅವರಿಗೆ 'ಟೆನೆಕ್ಟೆಪ್ಲೇಸ್ ಜೀವರಕ್ಷಕ ಲಸಿಕೆ' ಅಗತ್ಯತೆ ಬಗ್ಗೆಯೂ ನಿರ್ಣಯಿಸಲಿದ್ದಾರೆ. ಬಳಿಕ ತಜ್ಞವೈದ್ಯರ ಸಲಹೆ ಪಡೆದು ಅಗತ್ಯವಿದ್ದಲ್ಲಿ ಲಸಿಕೆ ನೀಡಿ ಮುಂದುವರೆದ ಚಿಕಿತ್ಸೆಗೆ ಜಯದೇವ ಆಸ್ಪತ್ರೆಗೆ ಕಳುಹಿಸಿಕೊಡಲಾಗುತ್ತದೆ.
>
> –ಡಾ.ಡಿ.ಜಿ.ನಾಗರಾಜ್, ಹೃದಯ ಜ್ಯೋತಿ ಯೋಜನೆಯ ಜಿಲ್ಲಾ ನೋಡಲ್ ಅಧಿಕಾರಿ, ಆರೋಗ್ಯ ಇಲಾಖೆ ಜಿಲ್ಲಾ ಸರ್ವೇಕ್ಷಣಾ ಘಟಕದ ಅಧಿಕಾರಿ

ಮೈಸೂರು ಮಿತ್ರ
ಮಂಗಳವಾರ 10 ಜೂನ್ 2025

ತಿಲಕ್‌ನಗರದಲ್ಲಿ ಓವರ್‌ಹೆಡ್ ಟ್ಯಾಂಕ್ ಉದ್ಘಾಟನೆ



ಮೈಸೂರಿನ ತಿಲಕ್‌ನಗರದ ವಾರ್ಡ್ ನಂ.25ರಲ್ಲಿ ನಿರ್ಮಿಸಿರುವ 10 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ(ಓವರ್ ಹೆಡ್ ಟ್ಯಾಂಕ್) ಅನ್ನು ಶಾಸಕ ಕೆ.ಹರೀಶ್‌ಗೌಡರು ಸೋಮವಾರ ಉದ್ಘಾಟಿಸಿದರು.

ಮೈಸೂರು, ಜೂ.9(ಜಿಎ)–ಮೈಸೂರಿನ ತಿಲಕ್‌ನಗರದ ವಾರ್ಡ್ ನಂ.25ರಲ್ಲಿ ನಿರ್ಮಿಸಿರುವ 10 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ(ಓವರ್ ಹೆಡ್ ಟ್ಯಾಂಕ್) ಅನ್ನು ಶಾಸಕ ಕೆ.ಹರೀಶ್ ಗೌಡ ಸೋಮವಾರ ಉದ್ಘಾಟಿಸಿದರು.

ಈ ವೇಳೆ ತಿಲಕ್‌ನಗರದ ನಿವಾಸಿಗಳು ನೀರಿನ ಸಮಸ್ಯೆ ಬಗ್ಗೆ ಹರೀಶ್‌ಗೌಡರಿಗೆ ದೂರು ಸಲ್ಲಿಸಿ, ನೀರು ಸಮಯಕ್ಕೆ ಸರಿಯಾಗಿ ಬಿಡುತ್ತಿಲ್ಲ. ಬೆಳಗ್ಗೆ ಮಕ್ಕಳನ್ನು ಶಾಲೆಗೆ ತಯಾರು ಮಾಡಬೇಕು, ಅಡುಗೆ ಕೆಲಸ ಮಾಡಬೇಕು. ಈ ಸಮಯದಲ್ಲಿ ನೀರಿನ ಅವಶ್ಯಕತೆ ಹೆಚ್ಚಿರುತ್ತದೆ. ಆದರೆ, ಈ ಸಮಯದಲ್ಲಿಯೇ ನಿತ್ಯ ನೀರಿನ ಸಮಸ್ಯೆ ಹೆಚ್ಚಿರುತ್ತದೆ ಎಂದು ವಿವರಿಸಿದರು.

ಸಮಸ್ಯೆಗಳನ್ನು ಆಲಿಸಿದ ಶಾಸಕ ಹರೀಶ್‌ಗೌಡ, ಸ್ಥಳದಲ್ಲಿಯೇ ಇದ್ದ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮೊಹಮ್ಮದ್ ಮುಸ್ತಫಾ ಕರೆದು ಸಮಸ್ಯೆ ಬಗ್ಗೆ ಮಾಹಿತಿ ಕೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ಮುಸ್ತಫಾ, ಕಳೆದ ವರ್ಷದಿಂದ ನೀರಿನ ಸಮಸ್ಯೆ ಆಗುತ್ತಿದೆ. ಸದ್ಯದಲ್ಲಿಯೇ ಬೇರೆ ಸಂಪರ್ಕ ನೀಡಿ, ನೀರಿನ ಸಮಸ್ಯೆಗೆ ಪರಿಹಾರ ನೀಡುತ್ತೇವೆ ಎಂದರು.

ಇವರ ಮಾತನ್ನು ಕೇಳಿದ ನಿವಾಸಿಗಳು, ಹೀಗೆ ಹೇಳುತ್ತಾರೆ. ಆದರೆ ಸಮಸ್ಯೆ ಬಗೆಹರಿಯುತ್ತಿಲ್ಲ ಎಂದು ಅಳಲು ತೋಡಿಕೊಂಡರು. ಶಾಸಕ ಹರೀಶ್‌ಗೌಡ ಮಾತನಾಡಿ, ಈ ವಾರ್ಡ್‌ನಿಂದ ನನಗೂ ಕರೆ ಬರುತ್ತಿದೆ. ವಾಣಿವಿಲಾಸ ವಾಟರ್ ವರ್ಕ್ಸ್‌ನ ಅಧಿಕಾರಿಗಳು ತಕ್ಷಣ ಸಮಸ್ಯೆಯನ್ನು ಬಗೆಹರಿಸಿ ಎಂದ ಅವರು, ನಿವಾಸಿಗಳಿಗೂ ಶೀಘ್ರವಾಗಿ ನಿಮ್ಮ ನೀರಿನ ಸಮಸ್ಯೆ ಬಗೆಹರಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಬೆಂಗಳೂರು ದೇವನಹಳ್ಳಿಯಲ್ಲಿ ಜೈಲು ನಿರ್ಮಾಣಕ್ಕೆ 626 ಮರಗಳಿಗೆ ಕೊಡಲಿ!



ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮವು ದೇವನಹಳ್ಳಿಯಲ್ಲಿ ಹೊಸ ವಸತಿ ರಹಿತ ಕಟ್ಟಡ ಮತ್ತು ರಸ್ತೆ ನಿರ್ಮಾಣಕ್ಕಾಗಿ 626 ಮರಗಳನ್ನು ಕಡಿಯಲು ರಾಜ್ಯ ಅರಣ್ಯ ಇಲಾಖೆಯಿಂದ ಅನುಮತಿ ಕೋರಿದೆ.

ಇದು 600 ಕೈದಿಗಳಿಗೆ ಸ್ಥಳಾವಕಾಶ ಕಲ್ಪಿಸಲು ವಿನ್ಯಾಸಗೊಳಿಸಲಾದ ಪ್ರಸ್ತಾವಿತ ಕೇಂದ್ರ ಜೈಲು ಸಂಕೀರ್ಣದ ಭಾಗವಾಗಿದೆ. ರೈಲ್ವೆ ಸಚಿವಾಲಯದ ಅಡಿಯಲ್ಲಿ ಬರುವ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರವು 368 ಮರಗಳನ್ನು ಕಡಿಯಲು ಪ್ರಸ್ತಾಪಿಸಿರುವ ಮತ್ತೊಂದು ವಿವಾದಾತ್ಮಕ ಯೋಜನೆಗೆ ಸಾರ್ವಜನಿಕ ವಿರೋಧ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ವಿನಂತಿ ಬಂದಿದೆ, ಇದು ನಾಗರಿಕರಿಂದ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ.

ಏಪ್ರಿಲ್ 2025ರಲ್ಲಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಜೈಲು ಯೋಜನೆಯ ಕುರಿತು ಸಾರ್ವಜನಿಕ ಪ್ರತಿಕ್ರಿಯೆ ಆಹ್ವಾನಿಸಿತು. ಈಗ, ಕರ್ನಾಟಕ ಮರ ಸಂರಕ್ಷಣಾ ಕಾಯ್ದೆ, 1976 ರ ಪ್ರಕಾರ, ಅರಣ್ಯ ಇಲಾಖೆಯು ಮೇ 31, 2025ರಂದು ಸಾರ್ವಜನಿಕ ಸೂಚನೆಯನ್ನು ಹೊರಡಿಸಿದ್ದು, ಪ್ರಸ್ತಾವಿತ ಮರ ಕಡಿಯುವಿಕೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಲು ನಾಗರಿಕರಿಗೆ ಹತ್ತು ದಿನಗಳ ಕಾಲಾವಕಾಶ ನೀಡಿದೆ.

ಮರಗಳನ್ನು ಸ್ಥಳಾಂತರಿಸುವ ಆಯ್ಕೆ ಬಗ್ಗೆ ನಾವು ಜೈಲು ಅಧಿಕಾರಿಗಳನ್ನು ಕೇಳಿದ್ದೇವೆ ಎಂದು ಹೆಸರು ಬಹಿರಂಗಪಡಿಸದ ಷರತ್ತಿನ ಮೇಲೆ ಮಾತನಾಡಿದ ಹಿರಿಯ ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಯಲಹಂಕದ ಮಾದಪನಹಳ್ಳಿಯಲ್ಲಿ 153 ಎಕರೆ ವಿಸ್ತೀರ್ಣದ ಹೊಸ ಮರಗಳ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಗುತ್ತಿದೆ, ಅಲ್ಲಿ ಈಗಾಗಲೇ ಇರುವ ನೀಲಗಿರಿ ತೋಟವನ್ನು ತೆರವುಗೊಳಿಸಲಾಗುತ್ತಿದೆ. ನಮಗೆ ಅಲ್ಲಿ ಸಾಕಷ್ಟು ಸ್ಥಳವಿದೆ. ಮರ ಕಡಿಯುವ ಬದಲು ಅಲ್ಲಿರುವ ಜಾಗದಲ್ಲಿ ಜೈಲು ನಿರ್ಮಾಣ ಮಾಡುವ ಆದ್ಯತೆ ಪರಿಗಣಿಸುವಂತೆ ತಿಳಿಸಿದ್ದೇವೆ. ಮರ ಕತ್ತರಿಸುವುದು ಸುಲಭ, ಆದರೆ ಸಂರಕ್ಷಣೆ ಈಗ ಕಡ್ಡಾಯವಾಗಿದೆ ಎಂದಿದ್ದಾರೆ.

ಪ್ರಸ್ತಾವಿತ ದೇವನಹಳ್ಳಿ ತೆರೆದ ಜೈಲು 100 ಎಕರೆಗಳಿಗಿಂತ ಹೆಚ್ಚು ವಿಸ್ತಾರವಾಗಲಿದೆ. ಕಾರಾಗೃಹ ಮತ್ತು ತಿದ್ದುಪಡಿ ಸೇವೆಗಳ ಇಲಾಖೆಯು ಸುಮಾರು 4 ತಿಂಗಳ ಹಿಂದೆ ಮರ ಕಡಿಯಲು ಅನುಮತಿಗಾಗಿ ತನ್ನ ಮನವಿ ಸಲ್ಲಿಸಿತ್ತು. ಸಾರ್ವಜನಿಕ ಸೂಚನೆ ನೀಡುವ ಮೊದಲು ಅರಣ್ಯ ಅಧಿಕಾರಿಗಳ ತಂಡವು 2 ವಾರಗಳ ಹಿಂದೆ ಸ್ಥಳವನ್ನು ಪರಿಶೀಲಿಸಿತು.

ಆವರಣದಲ್ಲಿರುವ ಹೆಚ್ಚಿನ ಮರಗಳು ಮೆಲಿಂವಾ ದುಬಿಂವಾ (ಸಾಮಾನ್ಯವಾಗಿ ಮಲಬಾರ್ ಬೇವು ಎಂದು ಕರೆಯಲಾಗುತ್ತದೆ), ಇವು ಕ್ಯಾನ್ಸರ್ ಚಿಕಿತ್ಸೆ ಸೇರಿದಂತೆ ಔಷಧೀಯ ಗುಣಗಳಿಗೆ ಹೆಚ್ಚು ಉಪಯುಕ್ತವಾಗಿದೆ. 2014ರಲ್ಲಿ ನೆಡಲಾದ ಈ ಮರಗಳು ಈಗ ಸುಮಾರು 20 ಸೆಂ.ಮೀ ಸುತ್ತಳತೆಯನ್ನು ತಲುಪಿವೆ. ಸ್ಥಳದಲ್ಲಿ ತೇಗದ ತೋಟವೂ ಇದೆ, ಇದಕ್ಕಾಗಿ ಕಡಿಯಲು ಅನುಮತಿ ನಿರಾಕರಿಸಲಾಗಿದೆ ಎಂದು ಬೆಂಗಳೂರು ಗ್ರಾಮೀಣ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್‌ಕುಮಾರ್ ಜಿ ತಿಳಿಸಿದ್ದಾರೆ.

ಪ್ರಸ್ತುತ ಕೈದಿಗಳು ಮತ್ತು ಸಿಬ್ಬಂದಿಗಳು ಬಾಳೆ, ಮಾವು ಮತ್ತು ಕಬ್ಬು ಮತ್ತು ಇತರ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಭೂಮಿ ಬಳಸುತ್ತಿದ್ದಾರೆ. ಈ ಆವರಣದಲ್ಲಿ ಜಾನುವಾರು ಮತ್ತು ಕೋಳಿ ಸಾಕಣೆಯೂ ಇದೆ. ಪ್ರಸ್ತುತ ಸುಮಾರು 15 ಕೈದಿಗಳು ಇಲ್ಲಿ ವಾಸಿಸುತ್ತಿದ್ದಾರೆ. ವಿವರವಾದ ಭೂ ವರದಿ ಸಿದ್ಧಪಡಿಸಲಾಗಿದೆ. ಆದರೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗಿಲ್ಲ ಎಂದರು.

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತ ಪ್ರಕರಣ

ಸರ್ಕಾರ ಟೀಕಿಸಿದ ಸ್ವಾಮೀಜಿಗಳು ಕ್ಷುಲ್ಲಕ ರಾಜಕೀಯದ ದಾಳಗಳಾಗಿದ್ದಾರೆ



ಹೆಚ್.ಎ.ವೆಂಕಟೇಶ್

ಮೈಸೂರು, ಜೂ.9(ಬಿಎಲ್‌ಯು)– ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ದುರಂತದ ಬಗ್ಗೆ ಕೆಲವು ಸ್ವಾಮೀಜಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಡಾ.ಪರಮೇಶ್ವರ್ ವಿರುದ್ಧ ದೂರು ನೀಡಿ ಕ್ಷುಲ್ಲಕ ರಾಜಕೀಯದ ದಾಳಗಳಾಗಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.

ಸಮಾಜದ ನೈತಿಕ ಮತ್ತು ಧಾರ್ಮಿಕ ಉನ್ನತಿಗೆ ಶ್ರಮಿಸಬೇಕಾದ ಸ್ವಾಮೀಜಿಗಳು ರಾಜಕೀಯ ವಿಚಾರದ ಬಗ್ಗೆ ಮೂಗು ತೂರಿಸಬಾರದು ಎಂದು ಸಲಹೆ ನೀಡಿದ್ದಾರೆ.

ಅಂದಿನ ಘಟನೆಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ತೋರಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆ. ಇಷ್ಟಾದರೂ ಸ್ವಾಮೀಜಿಗಳು ಸರ್ಕಾರದ ವಿರುದ್ಧ ಮುಗಿಬಿದ್ದಿರುವುದು ಏಕೆ ಎಂದು ವೆಂಕಟೇಶ್ ಪ್ರಶ್ನಿಸಿದ್ದಾರೆ.

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನ ಮಹಾಕುಂಭ ಮೇಳದಲ್ಲಿ ನಡೆದ ಕಾಲ್ತುಳಿತ ಪ್ರಕರಣದ ಕುರಿತಂತೆ ನಿರ್ಲಕ್ಷ್ಯ ತೋರಿದ ಯಾವ ಅಧಿಕಾರಿಗಳ ವಿರುದ್ಧವೂ ಅಲ್ಲಿನ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಆದರೆ ಕರ್ನಾಟಕ ಸರ್ಕಾರ ಎಡಿಜಿಪಿ ಮಟ್ಟದ ಅಧಿಕಾರಿಯನ್ನು ಅಮಾನತು ಮಾಡಿದೆ ಎಂದು ಹೇಳಿದ್ದಾರೆ.

ಆಧ್ಯಾತ್ಮಿಕತೆ ಮೂಲಕ ನೈತಿಕ ಮತ್ತು ಸಾಮಾಜಿಕ ಜಾಗೃತಿ ಮೂಡಿಸಬೇಕಾದ ಸ್ವಾಮೀಜಿಗಳು ರಾಜಕೀಯ ರಾಡಿಯಲ್ಲಿ ಬಿದ್ದು ಮನಸು ಹಾಗೂ ಮೈಯನ್ನು ಕೊಳಕು ಮಾಡಿಕೊಂಡು ಖಾವಿಯ ಪ್ರಖರತೆಗೆ ಧಕ್ಕೆ ತಂದುಕೊಳ್ಳಬಾರದು ಎಂದು ಕಿವಿಮಾತು ಹೇಳಿದ್ದಾರೆ.

ಕಾಲ್ತುಳಿತ ಪ್ರಕರಣದಲ್ಲಿ ಸರ್ಕಾರವನ್ನು ಟೀಕಿಸಿರುವ ಈ ತಂಡದ ಸ್ವಾಮೀಜಿಯೊಬ್ಬರು ಕೋಮು ಸೌಹಾರ್ದ ಹದಗೆಡಿಸುವಲ್ಲಿ ಖ್ಯಾತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿಗಳ ತಂಡದ ಹಿಂದೆ ಯಾರ ಕುಮ್ಮಕ್ಕಿದೆ ಎಂದು ಸಮಾಜ ತಿಳಿಯಬೇಕು ಎಂದು ತಿಳಿಸಿದ್ದಾರೆ. ಎಲ್ಲವನ್ನು ತ್ಯಜಿಸಿರುವ ಸ್ವಾಮೀಜಿಗಳು ಎಲ್ಲರ ಒಳಿತಿಗಾಗಿ ಶ್ರಮಿಸಬೇಕು. ಇದು ಬಿಟ್ಟು ಸಮಾಜಘಾತುಕ ವಿಭಜನಕಾರಿ ಹುನ್ನಾರಕ್ಕೆ ಆಯುಧಗಳಂತೆ ವರ್ತಿಸಬಾರದು ಎಂದು ಹೆಚ್.ಎ.ವೆಂಕಟೇಶ್ ಸಲಹೆ ನೀಡಿದ್ದಾರೆ.

ಸಂಗೀತ ಒಂದು ದೈವೀ ಕಲೆ, ಸಾಧಕರಿಗೆ ಮಾತ್ರ ಒಲಿಯುತ್ತೆ

ಸ್ವರಾಲಯ ಸಾಂಸ್ಕೃತಿಕ ವೈಭವದಲ್ಲಿ ಕಲಾವಿದೆ ಕೆ.ನಾಗರತ್ನರವರ ಮನದಾಳದ ಮಾತು



ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಿದ್ದ ಸ್ವರಾಲಯ ಸಾಂಸ್ಕೃತಿಕ ವೈಭವ–2025 ಅನ್ನು ಕಲಾವಿದೆ ಕೆ.ನಾಗರತ್ನ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜೂ.9–ನಗರದ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಾಯೋಜಕತ್ವದಲ್ಲಿ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸ್ವರಾಲಯ ಸಾಂಸ್ಕೃತಿಕ ವೈಭವ–2025 ಅನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಕಲಾವಿದೆ ಕೆ.ನಾಗರತ್ನ ಜ್ಯೋತಿ ಬೆಳಗಿಸಿ, ನಂತರ ಮಾತನಾಡಿ, ಸಂಗೀತ ಒಂದು ದೈವೀ ಕಲೆ, ಸಾಧನೆ ಮಾಡಿದವರಿಗೆ ಮಾತ್ರವೇ ಒಲಿಯುತ್ತೆ. ಸಾಧಕರನ್ನು ಸಂಗೀತ ಸರಸ್ವತಿ, ಸಂಗೀತ ಶಾರದೆ ಎಂದೆಲ್ಲಾ ಕರೆಯಲ್ಪಡುತ್ತಾರೆ. ಯಾವುದೇ ಒಂದು ಸಂಸ್ಥೆ ಹೀಗೆ 35 ವಸಂತಗಳನ್ನು ಕಳೆದಿದೆ ಎಂದರೆ ಅದರ ಬೇರು ಎಷ್ಟು ಗಟ್ಟಿಯಾಗಿದೆ, ಎಷ್ಟು ಸಮರ್ಥವಾಗಿ ಬೇರೂರಿದೆ ಎಂಬುದು ನಮಗೆ ಗೊತ್ತಾಗುತ್ತೆ ಎಂದು ತಿಳಿಸಿದರು.

ಈ ಸ್ವರಾಲಯ ಸಂಸ್ಥೆ 35 ವಸಂತಗಳನ್ನು ಪೂರೈಸಿ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಾಕಷ್ಟು ವಿದ್ಯಾರ್ಥಿಗಳನ್ನು ತಯಾರು ಮಾಡಿ, ಅವರೆಲ್ಲ ಇಂದು ಒಳ್ಳೆಯ ಹುದ್ದೆಗಳನ್ನು ಅಲಂಕರಿಸಿದ್ದಾರೆ. ವಿದುಷಿ ಹರಿನಾಥ್ ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ದೊರೆತಿರುವುದು ಅವರ ಕಾರ್ಯನಿಷ್ಠೆಗೆ ಸಂದ ಗೌರವವಾಗಿದೆ ವಿದುಷಿ ಸುಮ ಹರಿನಾಥ್, ಸಂಗೀತ ಕಲಿಸುವ ಜಾಣ್ಮೆ, ವಿಧಾನ, ಹಾಗೆ ಮಕ್ಕಳಲ್ಲಿ ಸಂಗೀತವನ್ನು ಕಲಿಯಬೇಕೆಂಬ ಹಂಬಲ, ಪೋಷಕರ ಪ್ರೋತ್ಸಾಹ ಇವೆಲ್ಲಾ ಒಟ್ಟಾಗಿ ಸೇರಿದಾಗ ಮಾತ್ರ ನಾವು ಹೀಗೆ ಇಂತಹ ಸಾಂಸ್ಕೃತಿಕ ವೈಭವದಲ್ಲಿ ಸಾಕ್ಷಿಯಾಗುವುದಕ್ಕೆ ಸಾಧ್ಯವಾಗುತ್ತದೆ.

ಹಲವಾರು ಮಕ್ಕಳು ಸಂಗೀತವನ್ನು ಕಲೀತಾರೆ, ಆದರೆ ಮಧ್ಯ ಬಿಟ್ಟುಬಿಡುತ್ತಾರೆ. ಮಕ್ಕಳಿಗೆ ಒಂದು ಕಿವಿಮಾತು, ನಿಮ್ಮ ಓದಿನ ಜೊತೆಗೆ ಸಂಗೀತವನ್ನು ಅಭ್ಯಾಸ ಮಾಡಿದರೆ ನಿಮ್ಮ ಮಾನಸಿಕ ಏಕಾಗ್ರತೆ ಹೆಚ್ಚುವುದರ ಜೊತೆಗೆ ಮಾನಸಿಕ ದುಗುಡ, ಒತ್ತಡ ನಿವಾರಣೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಂಗೀತ ಶಿಕ್ಷಕಿ ವಿದುಷಿ ರತ್ನಸೂರಪ್ಪ ಹಾಗೂ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಜೆಎಸ್‌ಎಸ್ ವಿದ್ಯಾಸಂಸ್ಥೆಯ ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಚೆಲ್ಲಂ ಲಕ್ಷ್ಮಣ್ ಮಾತನಾಡಿದರು. ಸ್ವರಾಲಯ ಸಂಸ್ಥಾಪಕ ಅಧ್ಯಕ್ಷೆ ವಿದುಷಿ ಸುಮ ಹರಿನಾಥ್ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ವಿದುಷಿ ಸುಮ ಹರಿನಾಥ್ ಅವರು ಬರೆದಿರುವ ಹಿರಿಯ ದರ್ಜೆ ಪ್ರಾಯೋಗಿಕ ವಿಭಾಗದ ಪುಸ್ತಕವನ್ನು ಜನರಲ್ ಮೆಡಿಸಿನ್ ಡಾ.ಪ್ರಶಾಂತ್ ಕಣವಿ ಬಿಡುಗಡೆಗೊಳಿಸಿದರು. ವೇದಿಕೆ ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖ್ಯಾತ ಸಂಗೀತ ಗಾಯಕಿ, ದಕ್ಷಿಣ ರೈಲ್ವೆ ಉದ್ಯೋಗಿ ಹಂಸಿನಿ ಎಸ್.ಕುಮಾರ್ ಶಾಸ್ತ್ರೀಯ ಗಾಯನ ಪ್ರೇಕ್ಷಕರ ಕಣ್ಮನ ಸೆಳೆಯಿತು. ಇವರಿಗೆ ಪಕ್ಕವಾದ್ಯದಲ್ಲಿ ಪಿಟೀಲಿನಲ್ಲಿ ವಿದ್ವಾನ್ ಸಿ.ಚೇತನ್, ಮೃದಂಗದಲ್ಲಿ ವಿದ್ವಾನ್ ವಿ.ಶ್ಯಾಂ ಸಹಕಾರ ನೀಡಿದರು. ಇದಾದ ನಂತರ ಬೆಂಗಳೂರಿನ ಫ್ಲೂಟ್ ಮತ್ತು ಫೀಟ್ ಅಕಾಡೆಮಿಯ ಕು.ವಿದುಷಿ ರಿತು ಕೈವಾರ್ ಮತ್ತು ತಂಡದವರು ಮನಮೋಹಕ ಭರತನಾಟ್ಯ ಪ್ರಸ್ತುತಪಡಿಸಿದರು.

ಕಾರ್ಯಕ್ರಮಕ್ಕೆ ಶ್ರೀಮತಿ ವೈಷ್ಣವಿ ನರಸಿಂಹನ್ ಹಾಗೂ ಶ್ರೀಮತಿ ಅಖಿಲ ಜಿ. ಪ್ರಾರ್ಥಿಸಿದರೆ, ಕಳೆದ 23 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸ್ವರಾಲಯ ಕಾರ್ಯದರ್ಶಿ ಶ್ರೀಮತಿ ಹೆಚ್.ಎಸ್. ಶ್ರೀಕಾಂತಾಮಣಿ ಸ್ವಾಗತಿಸಿ, ವಂದಿಸಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.9– ಜೂನ್ 10 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6ರರೆಗೆ ಸೌತ್ ವಿದ್ಯುತ್ ವಿತರಣಾ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಿಮಿತ್ತ ಬಂಡಿಪಾಳ್ಯ, ಹೊಸಹುಂಡಿ, ಏಳಿಗೆಹುಂಡಿ, ಗುಡುಮಾದನಹಳ್ಳಿ, ಹಡಜನ, ಎ.ಪಿ.ಎಂ.ಸಿ, ಪ್ರಶಾಂತ್ ವಾಯು, ಆಲನಹಳ್ಳಿ ರಿಂಗ್ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮೈಸೂರು,ಜೂ.9–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸೇರಿದ ಪ್ರತಿಭಾವಂತ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2024–25ನೇ ಸಾಲಿನ ರಾಜ್ಯ ಹಾಗೂ ಕೇಂದ್ರೀಯ ಪಠ್ಯ ಕ್ರಮದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿರುವ ಪ್ರತಿಭಾವಂತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಜೂ.30ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9449030588 ಸಂಪರ್ಕಿಸಬಹುದು.

ನಿಧನ

ಎಂ.ಶಿವಕುಮಾರ್



ಮೈಸೂರು,ಜೂ.9–ಕಾವೇರಿ ನೀರಾವರಿ ನಿಗಮ ನಿಯಮಿತ (ಸಿಎನ್‌ಎನ್‌ಎಲ್) ವಿಶ್ರಾಂತ ಚೀಫ್ ಇಂಜಿನಿಯರ್ ಮತ್ತು ನಂ.676, ಶಿಭಾಶ್ರೀ ನಿಲಯ, ದಟ್ಟಗಳ್ಳಿ 3ನೇ ಹಂತ, ಕನಕದಾಸ ನಗರದ ನಿವಾಸಿ ಎಂ.ಶಿವಕುಮಾರ್ (66) ಸೋಮವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಶಿವಕುಮಾರ್ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ) ಸೂಪರಿಂಟೆಂಡಿಂಗ್ ಎಂಜಿನಿಯರ್ ಆಗಿದ್ದ ಅವಧಿಯಲ್ಲಿ ಹೊರವರ್ತುಲ ರಸ್ತೆ (ರಿಂಗ್‌ರಸ್ತೆ) ಮತ್ತು ಹಿನಕಲ್ ಫ್ಲೈಓವರ್ ನಿರ್ಮಾಣ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ಭಾಗ್ಯಲಕ್ಷ್ಮಿ



ಮೈಸೂರಿನ ರೂಪಾನಗರದ ನಿವಾಸಿ ಹಾಗೂ ಖ್ಯಾತ ವಾಗ್ಮಿ ದಿವಂಗತ ಬಿ. ವೆಂಕಟರಾಮ ಶರ್ಮ ಅವರ ಪತ್ನಿ ವಿ. ಭಾಗ್ಯಲಕ್ಷ್ಮಿ (91) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಲ್.ಜಯಮ್ಮ



ಮೈಸೂರಿನ ಇಟ್ಟಿಗೆಗೂಡು ನಿವಾಸಿ ದಿವಂಗತ ಎಂ.ಎಸ್. ನೀಲಕಂಠನ್ ಅವರ ಪತ್ನಿ ಎಲ್.ಜಯಮ್ಮ (75) ಸೋಮವಾರ ನಿಧನರಾದರು. ಮೃತರು ಪುತ್ರ, ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷ ಎಂ.ಎನ್.ಮಹೇಶ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎ.ಶೇಷಾದ್ರಿ



ಪ್ರಥಮ ಮೈಸೂರ್‌ನ ಟ್ರಸ್ಟಿ ಹಾಗೂ ಚಾಮುಂಡಿಪುರಂ ನಿವಾಸಿ ಎ.ಶೇಷಾದ್ರಿ (70) ಜೂ.7ರಂದು ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಶೇಷಾದ್ರಿ ಅವರು 25 ವರ್ಷಗಳಿಗೂ ಹೆಚ್ಚು ಕಾಲ ಗ್ರಾಮೀಣ ಮಕ್ಕಳ ಶಿಕ್ಷಣಕ್ಕಾಗಿ ಸೇವೆ ಸಲ್ಲಿಸಿದ್ದರು. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಭಾನುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಲಿತಮ್ಮ



ಮೈಸೂರಿನ ಚಾಮುಂಡಿಪುರಂ ನಿವಾಸಿ ಲಲಿತಮ್ಮ(68) ಸೋಮವಾರ ನಿಧನರಾಗಿದ್ದಾರೆ. ಮೃತರು ಪತಿ ಸುಂದರೇಶ್, ಪುತ್ರರಾದ ಗಿರೀಶ್, ಕಿರಣ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜೂ.10) ಮಧ್ಯಾಹ್ನ 12 ಗಂಟೆಗೆ ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದಲ್ಲಿ ತಮ್ಮ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲೊರೆಟ್ಟಾ ಮಾರಿಯಾ ಪಿಂಟೊ



ಮೈಸೂರಿನ ರಾಮಚಂದ್ರ ಅಗ್ರಹಾರದ ಲೊರೆಟ್ಟಾ ಮಾರಿಯಾ ಪಿಂಟೊ (68) ಸೋಮವಾರ ಸಂಜೆ ನಿಧನರಾದರು.

ಮೃತರು ಪತಿ ಜಾರ್ಜ್ ವಿ.ಪಿಂಟೊ, ಪುತ್ರಿಯರಾದ ಲೀ ಜಾರ್ಜಿನಾ ಪಿಂಟೋ, ಲೀನ್ ಗ್ಲೆಂಡಾ ಪಿಂಟೊ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಜೂ.12ರ ಗುರುವಾರ ಮಧ್ಯಾಹ್ನ 12ರಿಂದ ಮಧ್ಯಾಹ್ನ 3ರವರೆಗೆ ಮೃತರ ನಿವಾಸದಲ್ಲಿ (ನಂ.ಎ605, ಬ್ರಿಗೇಡ್ ಮೌಂಟೇನ್ ವ್ಯೂ, ರಾಮಚಂದ್ರ ಅಗ್ರಹಾರ ಮೈಸೂರು) ಅಂತಿಮ ದರ್ಶನಕ್ಕಾಗಿ ಪಾರ್ಥಿವ ಶರೀರ ಲಭ್ಯವಿರಲಿದೆ. ಬಳಿಕ ಅಂದು ಮಧ್ಯಾಹ್ನ 3.30ಕ್ಕೆ ಮೈಸೂರು ದಕ್ಷಿಣದ ಸೆಂಟ್ ಥೆರೆಸಾ ಚರ್ಚ್‌ನಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಲಿದ್ದು, ನಂತರ ಮೈಸೂರು ದಕ್ಷಿಣ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.06.2025 ಮಂಗಳವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ವಿಶ್ವದ ಮೊಟ್ಟ ಮೊದಲ ವಿಶಿಷ್ಟ ಕಾರ್ಯಕ್ರಮ ವನ ದುರ್ಗಾ ವೃಕ್ಷಶಾಂತಿ ಮಹಾಯಜ್ಞ, ಸಹಸ್ರ ಚಂಡೀಯಾಗ, ಸ್ಥಳ: ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ (ಬೆಳಗ್ಗೆ 6.30ರಿಂದ 7 ರವರೆಗೆ), ಕಾರ್ನಿಯಲ್ ಒಪೇ ಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ವೆರಿಕೋಸ್ ವೇನ್ಸ್, ಉಬ್ಬಿದ ರಕ್ತನಾಳ, ಹಸಿರುಂಬು, ಇಸಬು ರೋಗ, ಬಂಗು, ಅಲರ್ಜಿ ಚರ್ಮರೋಗ ತಪಾಸಣಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಶ್ರೀ ಪದ್ಮಾವತಿ ಅಮ್ಮನವರ ವರ್ಧಂತಿ, ಸಂಜೆ 6ಕ್ಕೆ ಪುಷ್ಪಾ ಪಲ್ಲಕ್ಕಿ ಉತ್ಸವ, ಸ್ಥಳ: ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ, ತಿಲಕ್‌ನಗರ.

■ **ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರ, ಕಬೀರ್ ರಸ್ತೆ, ಬೆಳಗ್ಗೆ 9.30 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ದೊಂಡೇಲಿಂಗ್ ಟಿಬೇಟಿಯನ್ ವೆಲ್‌ಫೇರ್ ಸೊಸೈಟಿ:** ಸಾಮಾಜಿಕ ಕಾರ್ಯ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಪ್ರಭು, ಮುಖ್ಯ ಅತಿಥಿಗಳು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿ.ಸೋಮಶೇಖರಮೂರ್ತಿ, ಸೊಸೈಟಿ ವೆಲ್‌ಫೇರ್ ಆಫೀಸರ್ ತುಪ್ಟೇನ್ ಟಿಸರಿಂಗ್, ಉಪಸ್ಥಿತರು: ಡಾ. ಎಂ.ಪಿ. ಸೋಮಶೇಖರ್, ಡಾ.ಬಿ.ಸುಶ್ಮಿತಾ, ಸ್ಥಳ: ಒಡೆಯರ ಪಾಳ್ಯ, ಹುಣಸೂರು ತಾಲೂಕು, ಬೆಳಗ್ಗೆ 11.30ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟೆಬಲ್ ಟ್ರಸ್ಟ್:** ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ–2025, ಸ್ಥಳ: #510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.

■ **ಕನ್ನಡ ಚಳವಳಿ ಕೇಂದ್ರ ಸಮಿತಿ:** ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ, ಪುಷ್ಪಾರ್ಚನೆ: ಮಾಜಿ ಸಂಸದ ಪ್ರತಾಪ್ ಸಿಂಹ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ನಟರಾಜ ಜೋಯಿಸ್, ಹಿರಿಯ ಟೆನ್ನಿಸ್ ಆಟಗಾರ ಬಿ.ಎಸ್.ತುಳಸೀರಾಮ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಬೆಳಗ್ಗೆ 11ಕ್ಕೆ

■ **ದೀಕ್ಷಿತ್ ಆರೋಗ್ಯ ಧಾಮ, ಆಯುರ್ವೇದ ಪಂಚಕರ್ಮ ಆಸ್ಪತ್ರೆ, ವಿಜಯನಗರ :** ಪೂರ್ಣಿಮೆ ವಿಶೇಷ ಮಾಸದ ಆನಂದ ಆರೋಗ್ಯ ಕಾರ್ಯಕ್ರಮ, ವಿದುಷಿ ಕೆ.ಪಿ. ರೇವತಿ ಅವರಿಂದ ಗಾಯನ, ಸಹ ಗಾಯನ : ಕು. ತೇಜಶ್ರೀ, ಕೀ ಬೋರ್ಡ್ : ಕಲಾಶ್ರೀ ಗಣೇಶ್ ಭಟ್, ತಬಲ : ಪಂಡಿತ್ ಭೀಮಾಶಂಕರ್, ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಟಿ.ಆರ್. ದತ್ತಾತ್ರಿ ಅವರಿಂದ ಯೋಗ ದರ್ಶನ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್ ಹಾಗೂ ಪಿ. ಸುರಭಿ, ವ್ಯಾಖ್ಯಾನ–ಪ್ರೊ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿ ಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು–ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ನಾದ ಯೋಗ, ಪರಿಕಲ್ಪನೆ–ಉಮೇಶ್ ಎಸ್.ಎಸ್., ಪ್ರಸ್ತುತಿ–ದಿವಾಕರ್ ಹೆಗಡೆ, 8.50 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಯಾರು ಕಾಣದ ಪ್ರವಾಸಿ ತಾಣ–ಹೆಗ್ಗಡದೇವನಕೋಟೆಯ ಚಿಕ್ಕದೇವಮ್ಮನ ಬೆಟ್ಟ ಮತ್ತು ಪುರಾತನ ದೇವಾಲಯವನ್ನು ಪರಿಚಯಿಸುತ್ತಾರೆ ಸಿರಿ ಮೈಸೂರು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಕಥಾಕಾಲಕ್ಷೇಪ–ಸತ್ಯವಾನ್ ಸಾವಿತ್ರಿ, ಪ್ರಸ್ತುತಿ–ಗುರುರಾಜುಲುನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ–ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ – ಮೀನುಗಾರಿಕಾ ಇಲಾಖೆಯ ಅಭಿವೃದ್ಧಿ ಯೋಜನೆಗಳನ್ನು ಕುರಿತ ನೇರ ಫೋನ್–ಇನ್–ಕಾರ್ಯಕ್ರಮ, ಭಾಗವಹಿಸುತ್ತಾರೆ– ಮೈಸೂರು ವಲಯದ ಮೀನುಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾದ ಆರ್. ಗಣೇಶ್, ಪ್ರಸ್ತುತಿ – ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್ –ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಬಿ.ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಅರವಿಂದ್ ಪಾರಿಖ್–ಸೀತಾರ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ವಿಕಸಿತ ಭಾರತ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ –ಡಾ.ಎ.ಎಸ್. ಶಂಕರನಾರಾಯಣ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರಲ್ಲಿ ದೀರ್ಘ ಕಾಲದಿಂದ ನೆನೆಗುದಿಗೆ ಬಿದ್ದಿರುವ

ವಿವಿಧ ರೈಲ್ವೆ ಕಾಮಗಾರಿಗಳು ಮೂರು ತಿಂಗಳಲ್ಲಿ ಆರಂಭ

• ಸಂಸದ ಯದುವೀರ್ ವಿಶ್ವಾಸ • ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕರೊಂದಿಗೆ ಚರ್ಚೆ



ಮೈಸೂರು–ಕೊಡಗು ಸಂಸದ ಯದುವೀರ್ ಅವರನ್ನು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಮುಕುಲ್ ಸರನ್ ಮಾಥುರ್ ಭೇಟಿಯಾಗಿ ಚರ್ಚೆ ನಡೆಸಿದರು.

ಮೈಸೂರು, ಜೂ.9– ಮೈಸೂರಿನಲ್ಲಿ ದೀರ್ಘ ಕಾಲದಿಂದ ನೆನೆಗುದಿಗೆ ಬಿದ್ದಿರುವ ರೈಲ್ವೆ ಸಂಬಂಧಿತ ಯೋಜನೆಗಳ ಕಾಮಗಾರಿಗಳನ್ನು ಮೂರು ತಿಂಗಳಲ್ಲಿ ಪ್ರಾರಂಭಿಸುವ ವಿಶ್ವಾಸವಿದೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಮೈಸೂರು ಅರಮನೆ ಖಾಸಗಿ ನಿವಾಸದಲ್ಲಿ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಮುಕುಲ್ ಸರನ್ ಮಾಥುರ್ ಅವರೊಂದಿಗೆ ಸಮಾಲೋಚನೆ ನಡೆಸಿದ ಸಂಸದರು, ಮಹತ್ವದ ಯೋಜನೆಗಳ ಕಾಮಗಾರಿ ಆರಂಭಕ್ಕೆ ಅನುಮೋದನೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶವುಳ್ಳ ಮಹತ್ವದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ಯೋಜನೆಗಳನ್ನು ಆರಂಭಿಸುವ ಬಗ್ಗೆ ರೈಲ್ವೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬನ್ನಿಮಂಟಪ ಕಡೆಗೆ ಫ್ಲೈಓವರ್, ಸರ್ವೀಸ್ ರಸ್ತೆ(ಸ್ಲಿಪ್ ರೋಡ್)ಗಳ ನಿರ್ಮಾಣಕ್ಕೆ ಕ್ರಮ ವಹಿಸಲಾಗುತ್ತದೆ. ಮಣಿಪಾಲ ಆಸ್ಪತ್ರೆ ಜಂಕ್ಷನ್‌ನಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈಗಾಗಲೇ ಯೋಜನೆ ಆರಂಭಿಸಲು ಸಿದ್ಧತೆ ನಡೆದಿದೆ. ಮುಂದಿನ ಮೂರು ತಿಂಗಳಿನಲ್ಲಿ ಕಾಮಗಾರಿ ಪ್ರಾರಂಭಿಸಿ, ಅತಿ ಶೀಘ್ರದಲ್ಲೇ ಸಾರ್ವಜನಿಕ ಸೇವೆಗೆ ಒದಗಿಸುವುದೇ ನಮ್ಮ ಮುಖ್ಯ ಗುರಿಯಾಗಿದೆ ಎಂದು ಸಂಸದ ಯದುವೀರ್ ಭರವಸೆ ನೀಡಿದ್ದಾರೆ.

ಮೈಸೂರಿನಲ್ಲಿ ಉತ್ತಮ ಸೇವಾ ಸೌಲಭ್ಯಗಳನ್ನು ಕಲ್ಪಿಸುವುದರೊಂದಿಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ನೆರವಾಗುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಹೆದ್ದಾರಿ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ನಮ್ಮ ಕ್ಷೇತ್ರದ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲೂ ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು. ನಮ್ಮ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿಸಲು ಎಲ್ಲರ ಸಹಕಾರ ಅಗತ್ಯ ಎಂದು ಅವರು ಮನವಿ ಮಾಡಿದ್ದಾರೆ.

ವಿಶೇಷ ಚೇತನ ಮಕ್ಕಳ ಬದುಕಿನ 'ಅರುಣೋದಯ'



ಮೈಸೂರಿನ ಚಾಮುಂಡಿಪುರಂನ 'ಅರುಣೋದಯ ವಿಶೇಷ ಮಕ್ಕಳ ಶಾಲೆ'ಯಲ್ಲಿರುವ ವಿಶೇಷಚೇತನರು ಮತ್ತು ಸಿಬ್ಬಂದಿವರ್ಗ



ಮಣ್ಣಿನ ಹಣತೆಗಳಿಗೆ ಬಣ್ಣ ಹಚ್ಚುವ ತರಬೇತಿ ನೀಡುತ್ತಿರುವುದು.

● ಮೋಹನ್ ಕಾಯಕ

ಮೈಸೂರು, ಜೂ.9– ವಿಶೇಷಚೇತನರ ಬಗ್ಗೆ ವಿಶೇಷ ಕಾಳಜಿ ನೀಡಿ, ಅವರ ಬದುಕನ್ನು ಹಸನಾಗಿಸಿ, ಕತ್ತಲಿನಿಂದ ಬೆಳಕಿನೆಡೆಗೆ ನಡೆಸುವಲ್ಲಿ ಅರುಣೋದಯ ವಿಶೇಷ ಮಕ್ಕಳ ಶಾಲೆ ಪೋಷಕರ ಮನಗೆದ್ದಿದೆ...!

ಮೈಸೂರಿನ ಚಾಮುಂಡಿಪುರಂನಲ್ಲಿರುವ 'ಅರುಣೋದಯ ವಿಶೇಷ ಮಕ್ಕಳ ಶಾಲೆ' ಕಳೆದ 13 ವರ್ಷಗಳಿಂದ ಬುದ್ಧಿಮಾಂದ್ಯತೆ, ಅಂಗವಿಕಲತೆಯಿಂದ ಕಲಿಕಾ ನ್ಯೂನತೆಗೆ ಒಳಗಾಗಿರುವ ಮಕ್ಕಳಿಗೆ ಉಚಿತವಾಗಿ ಶಿಕ್ಷಣ, ವ್ಯಾಯಾಮ, ಯೋಗಾಭ್ಯಾಸ, ಊಟೋಪಚಾರ, ಸಮವಸ್ತ್ರ ಆರೋಗ್ಯ ತಪಾಸಣೆ, ಔಷಧೋಪಚಾರ ನೀಡುವ ಮೂಲಕ ವಿಶೇಷಚೇತನರ ಬದುಕಿಗೆ ಹೊಸ ಚೈತನ್ಯ ತುಂಬುತ್ತಿದೆ.

ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಬಸ್ ಅಥವಾ ಇನ್ನಿತರೆ ವಾಹನ ವ್ಯವಸ್ಥೆ ಮಾಡುವುದನ್ನು ನೋಡಿದ್ದೇವೆ. ಆದರೆ, ಇಲ್ಲಿ ವಿಶೇಷಚೇತನ ಮಕ್ಕಳ ಮನೆಗೆ ಬಾಗಿಲಿಗೆ ತೆರಳಿ ಅವರನ್ನು ಕರೆದುಕೊಂಡು ಬರುವುದಲ್ಲದೇ ಶಾಲೆ ಮುಗಿದ ಬಳಿಕ ಮತ್ತೆ ಅವರವರ ಮನೆಗೆ ಬಿಡುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ನಗರಪಾಲಿಕೆ ಮಾಜಿ ಸದಸ್ಯರೂ ಆದ ಅರುಣೋದಯ ವಿಶೇಷ ಮಕ್ಕಳ ಶಾಲೆ ಅಧ್ಯಕ್ಷ ಮಾ.ವಿ.ರಾಮ್‌ಪ್ರಸಾದ್ ನೇತೃತ್ವದಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ಸೇರಿ ಸುಮಾರು 11 ಮಂದಿ ವಿಶೇಷ ಚೇತನ ಮಕ್ಕಳ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿ, ಸೂಕ್ತ ಚಿಕಿತ್ಸೆ ಪಡೆಯಲಾಗದೆ ಅಂಗವೈಕಲ್ಯತೆಯಿಂದ ಬಳಲುತ್ತಿರುವವರ ಬದುಕಿಗೆ ಹೊಸ ಚಿಲುಮೆ ನೀಡುವ ಧ್ಯೇಯದೊಂದಿಗೆ 15 ಮಂದಿ ವಿಶೇಷಚೇತನರ ಹಾರೈಕೆಯೊಂದಿಗೆ ಆರಂಭವಾದ ಈ ಶಾಲೆಯಲ್ಲೀಗ 53 ಮಂದಿ ಹಾಡುತ್ತಾ, ಕುಣಿಯುತ್ತಾ, ಕಲಿಯುತ್ತಿರುವುದು ವಿಶೇಷವಾಗಿದೆ.



ವಿಶೇಷಚೇತನರಿಗೆ ಪತ್ರಿಕೆ ಓದುವ ಅಭ್ಯಾಸ ಮಾಡಿಸುತ್ತಿರುವುದು.

ಬುದ್ಧಿಮಾಂದ್ಯತೆ, ಆಟಿಸಂ, ಅಂಗವೈಕಲ್ಯ, ಮೆದುಳಿನ ಪಾರ್ಶ್ವವಾಯು, ಡೌನ್ ಸಿಂಡ್ರೋಮ್, ಅಂಧತೆ, ಕಲಿಕಾ ನ್ಯೂನತೆಯೊಂದಿಗೆ ಹಿಂದೆಬಿದ್ದಿರುವ 5 ರಿಂದ 60 ವರ್ಷದವರೆಗಿನ ವಿಶೇಷ ಚೇತನರಿಗೂ ಒಂದಲ್ಲಾ ಒಂದು ಬಗೆಯ ಕೌಶಲ್ಯತೆ ಕಲಿಸುವ ನಿಟ್ಟಿನಲ್ಲಿ ಅರುಣೋದಯ ವಿಶೇಷ ಮಕ್ಕಳ ಶಾಲೆ ತನ್ನ ಕಾರ್ಯಚಟುವಟಿಕೆಗಳನ್ನು ರೂಪಿಸಿದೆ.

ಜೊತೆಗೆ ಪಾಲನೆಗಾಗಿಯೇ ಇರುವ ಶಿಕ್ಷಕರು, ವಿಶೇಷಚೇತನರಲ್ಲಿನ ನ್ಯೂನತೆಗಳನ್ನು ಅರ್ಥೈಸಿಕೊಂಡು ಅವರಿಗೆ ಥೆರಪಿಗಳನ್ನು ಮಾಡಲಾಗುತ್ತದೆ. ಅಂಗವೈಕಲ್ಯತೆ ಇರುವವರಿಗೆ ಮಸಾಜ್, ಯೋಗ ಥೆರಪಿ, ನೃತ್ಯ ಥೆರಪಿ, ಮಾನಸಿಕ ಮೌಲ್ಯಮಾಪನ, ಪಾಲಕರೊಂದಿಗೆ ಆಪ್ತ ಸಮಾಲೋಚನೆ, ಸಲಹೆ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ.

ಕೌಶಲ್ಯ ತರಬೇತಿ: ವಿಶೇಷಚೇತನರಿಗೆ ಪೇಪರ್ ಕವರ್ ತಯಾರಿಕೆ, ಅಲಂಕಾರಿಕಾ ವಸ್ತುಗಳ ತಯಾರಿಕೆ, ಕಂಪ್ಯೂಟರ್ ಕಲಿಕೆ, ಪೇಟಿಂಗ್ ಜೊತೆ ಜೊತೆಗೆ ನೃತ್ಯ, ಭರತನಾಟ್ಯ ಅಭ್ಯಾಸವನ್ನೂ ಮಾಡಿಸಲಾಗುತ್ತದೆ. ಇಲ್ಲಿ ತಯಾರಾಗುವ ಎಲ್ಲಾ ವಸ್ತುಗಳನ್ನು ಮಾರಾಟ ಮಾಡಿ, ಅದರಿಂದ ಬರುವ ಹಣವನ್ನು ಅವರಿಗೆ ನೀಡಲಾಗುವುದು. ಆಟ–ಪಾಠಕ್ಕೆ ಸೀಮಿತವಾಗದೆ ವಿಶೇಷಚೇತನರಲ್ಲಿರುವ ಪ್ರತಿಭೆಯನ್ನು ಗುರ್ತಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಶಾಲೆಯ ಆಡಳಿತಾಧಿಕಾರಿ ಶ್ರೀಮತಿ ಮಮತಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಿಕ್ತು ಕಂಪ್ಯೂಟರ್ ಕೆಲಸ!: ನಮ್ಮ ಶಾಲೆಯಲ್ಲೇ ಕಂಪ್ಯೂಟರ್ ತರಬೇತಿ ಪಡೆದ ವಿಶೇಷಚೇತನ ವಿದ್ಯಾರ್ಥಿನಿಯೊಬ್ಬಳಿಗೆ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಜ್ಯುವೆಲರಿ ಡಿಸೈನಿಂಗ್ ಕೆಲಸ ಸಿಕ್ಕಿದೆ. ಆಕೆಯಲ್ಲಿದ್ದ ಕೌಶಲ್ಯತೆ ಗುರ್ತಿಸಿ ಕಂಪ್ಯೂಟರ್‌ನಲ್ಲಿ ಡಿಸೈನಿಂಗ್ ತರಬೇತಿ ನೀಡಲಾಯಿತು. ಆಕೆಯಲ್ಲಿದ್ದ ಚಿತ್ರಕಲೆಯ ಮೇಲಿನ ಆಸಕ್ತಿ ಗುರ್ತಿಸಿ ಪ್ರೋತ್ಸಾಹಿಸಿದ್ದರಿಂದ ಉತ್ತಮ ಜೀವನ ಕಟ್ಟಿಕೊಳ್ಳಲು ಸಾಧ್ಯವಾಯಿತು. ಅದೇ ರೀತಿ ಕಂಪ್ಯೂಟರ್ ಕಲಿಕೆಯಲ್ಲಿ ಆಸಕ್ತಿ ಇರುವವರಿಗೆ ತರಬೇತಿ ನೀಡುತ್ತಿದ್ದೇವೆ ಎಂದು ತಿಳಿಸಿದರು.

> ಯಾವುದೇ ಶುಲ್ಕವಿಲ್ಲದೆ ಕಳೆದ 13 ವರ್ಷಗಳಿಂದ ವಿಶೇಷಚೇತನರ ಆರೈಕೆ ಮಾಡುತ್ತಿದ್ದೇವೆ. ವಿಶೇಷ ಮಕ್ಕಳನ್ನು ದೇವರ ಮಕ್ಕಳೆಂದೇ ಭಾವಿಸಿ, ಅವರಿಗೆ ಹೊಸ ಜೀವನ ಕಟ್ಟಿಕೊಡುವ ಪ್ರಯತ್ನ ಮಾಡುತ್ತಿದ್ದೇವೆ. ಆರ್ಥಿಕವಾಗಿ ಕಡುಬಡತನದಿಂದ ಇರುವವರಿಗೆ ಮೊದಲ ಆದ್ಯತೆ ನೀಡಲಾಗುತ್ತಿದ್ದು, ಯಾವುದೇ ಜಾತಿ, ಮತ, ಧರ್ಮದ ತಾರತಮ್ಯವಿಲ್ಲದೆ ಆರೈಕೆ ಮಾಡುತ್ತಿದ್ದೇವೆ.
> – ಮಾ.ವಿ.ರಾಮ್ ಪ್ರಸಾದ್, ಸಂಸ್ಥಾಪಕ ಅಧ್ಯಕ್ಷ, ಅರುಣೋದಯ ವಿಶೇಷ ಮಕ್ಕಳ ಶಾಲೆ

> **ಬೇಸಿಕ್‌ನಿಂದ ಹೇಳಿಕೊಡುತ್ತೇವೆ...**
> ಶಾಲೆಗೆ ಬರುವ ವಿಶೇಷಚೇತನರಿಗೆ ಬೇಸಿಕ್‌ನಿಂದ ಕಲಿಸಲಾಗುವುದು. ಬೇರೆ ಶಾಲೆಗಳಿಗೆ ದಾಖಲಾಗಿರುವ ಮಕ್ಕಳಿಗೆ ಪಠ್ಯಕ್ರಮ ಆಧಾರಿತವಾಗಿ ಇಲ್ಲಿ ಹೇಳಿಕೊಡಲಾಗುವುದು. ಶಾಲೆಗೆ ಬಂದ ಕೂಡಲೇ ಹಾಲು, ಬೆಳಗಿನ ತಿಂಡಿ, ಮಧ್ಯಾಹ್ನ ಊಟದ ವ್ಯವಸ್ಥೆ ಇದ್ದು, ಡೇ ಕೇರ್ ರೀತಿಯಲ್ಲಿ ನಿರ್ವಹಣೆ ನಡೆಸಲಾಗುತ್ತಿದೆ. ವಾರಕ್ಕೆ ಎರಡು ಬಾರಿ ಫಿಸಿಯೋಥೆರಪಿ, ಆಯಿಲ್ ಮಸಾಜ್, ವಾಕಿಂಗ್ ಮಾಡಿಸಲಾಗುವುದು.
> – ಮಮತಾ, ಆಡಳಿತಾಧಿಕಾರಿ, ಅರುಣೋದಯ ವಿಶೇಷ ಮಕ್ಕಳ ಶಾಲೆ

ಭತ್ತ, ರಾಗಿ ಕಟಾವು ಯಂತ್ರಕ್ಕೆ ಬಾಡಿಗೆ ದರ ನಿಗದಿ



ಭತ್ತ ರಾಗಿ ಕಟಾವು ಯಂತ್ರಗಳಿಗೆ ಬಾಡಿಗೆ ದರ ನಿಗದಿಪಡಿಸುವ ಸಂಬಂಧ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್‌ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಸಭೆ ನಡೆಯಿತು.

ಮೈಸೂರು,ಜೂ.9(ಪಿಎಂ)– ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್‌ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಭತ್ತ ಮತ್ತು ರಾಗಿ ಕಟಾವು ಯಂತ್ರಕ್ಕೆ ಬಾಡಿಗೆ ದರ ನಿಗದಿಪಡಿಸಲಾಯಿತು. ರೈತರು, ರೈತ ಮುಖಂಡರು, ಪೊಲೀಸ್ ಅಧಿಕಾರಿಗಳು, ಆರ್‌ಟಿಓ ಅಧಿಕಾರಿಗಳು ಸೇರಿದಂತೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿಗಳು ಚರ್ಚಿಸಿದರು.

ಬಳಿಕ ಭತ್ತಕ್ಕೆ ಸಂಬಂಧಿಸಿದಂತೆ ಚೈನ್ ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ 2,500 ರೂ., ಟೈರ್ (ಗ್ರಿಪ್) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ 2 ಸಾವಿರ ರೂ. ಹಾಗೂ ಟೈರ್ (ಸಾಮಾನ್ಯ) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ 1,800 ರೂ. ನಿಗದಿಪಡಿಸಲಾಯಿತು. ಅಂತೆಯೇ ರಾಗಿ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ 2,900 ರೂ. ದರ ನಿಗದಿಪಡಿಸಲಾಯಿತು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸಬೆಳಕು ತಂಡದ ಸುವರ್ಣ ಗಾಯನ



ಮೈಸೂರಿನ ಪುರಭವನದಲ್ಲಿ ಹೊಸಬೆಳಕು ತಂಡದ ಸುವರ್ಣ ಗಾಯನ ಸಂಚಿಕೆ ಪ್ರಸ್ತುತಗೊಂಡಿತು.

ಮೈಸೂರು, ಜೂ.9– ಮೈಸೂರಿನ 'ಹೊಸ ಬೆಳಕು' ತಂಡದ 50ನೇ ಸುವರ್ಣ ಗಾಯನ ಸಂಚಿಕೆ ಅದ್ಧೂರಿಯಾಗಿ ಜರುಗಿತು.


ನಗರದ ಪುರಭವನದಲ್ಲಿ ಭಾನುವಾರ ಬೆಳಗ್ಗೆ 9 ರಿಂದ ರಾತ್ರಿ 9.30ವರೆಗೂ ನಡೆದ 'ಹೊಸಬೆಳಕು' ಸಂಗೀತ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಗಾಯಕ–ಗಾಯಕಿಯರು ಸುಮಾರು 80 ಗೀತೆಗಳನ್ನು ಮನೋಜ್ಞವಾಗಿ ಸಾದರಪಡಿಸಿದರು. ಈ ಸುದೀರ್ಘ ಸಂಗೀತ ಕಾರ್ಯಕ್ರಮವನ್ನು ನೂರಾರು ಕಲಾಸಕ್ತರು ಆಸ್ವಾದಿಸಿದರು.

ಈ ವೇಳೆ ಹೊಸ ಬೆಳಕು ಕಾರ್ಯಕ್ರಮದ ಸಂಚಾಲಕಿ ಉಷಾ ಸುಧಾಕರ್ ಮಾತನಾಡಿ, 1 ರಿಂದ 49 ಸಂಚಿಕೆವರೆಗಿನ ಕಾರ್ಯಕ್ರಮದ ಯಶಸ್ಸಿನೊಂದಿಗೆ ಇಂದು 50ನೇ ಸಂಚಿಕೆಯನ್ನು ಹಮ್ಮಿಕೊಳ್ಳಲಾಗಿದ್ದು, ಹಲವು ಗಾಯಕರು ಪ್ರಥಮ ಸಂಚಿಕೆಯಿಂದ ಇಲ್ಲಿಯವರೆಗೂ ನಿರಂತರವಾಗಿ ಭಾಗವಹಿಸಿರುವುದು ಹೆಮ್ಮೆಯ ಸಂಗತಿ ಎಂದರು.

'ಹೊಸಬೆಳಕು' ಕಾರ್ಯಕ್ರಮದಲ್ಲಿ ಹಾಡುಗಾರಿಕೆ ಜೊತೆಗೆ ಒಂದು ಸುಂದರ ಕುಟುಂಬ ಬೆಸೆಯುತ್ತಿದೆ. ಎಲ್ಲರೂ ಒಟ್ಟಾಗಿ ಬೆರೆತು ಸಂಗೀತದೊಂದಿಗೆ ದಿನ ಕಳೆಯುವುದು ಒಂದು ಸುಂದರ ಅನುಭವ. ವೃತ್ತಿಪರ ಗಾಯಕರಲ್ಲದ ಸಂಗೀತದ ಬಗ್ಗೆ ಆಸಕ್ತಿ, ಪ್ರೀತಿ ಹೊಂದಿರುವ ಹಲವರಿಗೆ ಇದು ಕಲಿಕಾ ವೇದಿಕೆಯೂ ಆಗಿದೆ. ನಮ್ಮ ತಂಡದವರು ಬೇರೆ ವೇದಿಕೆಗಳಲ್ಲೂ ಪ್ರತಿಭೆ ಪ್ರದರ್ಶಿಸಿ, ಮೆಚ್ಚುಗೆ ಪಡೆದಿದ್ದಾರೆ. ಕೆಲವರು ಸಿನಿಮಾ ಕ್ಷೇತ್ರದಲ್ಲೂ ಅವಕಾಶ ಗಳಿಸಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಕಡೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಸ್ಮರಣಿಕೆ ನೀಡಿ, ಅಭಿನಂದಿಸಲಾಯಿತು. ಗಣೇಶನ ಸ್ಮರಣೆಯೊಂದಿಗೆ ಆರಂಭವಾದ ಗಾಯನ ಕಾರ್ಯಕ್ರಮಕ್ಕೆ 'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ...' ಹಾಡಿನೊಂದಿಗೆ ಮುಕ್ತಾಯವಾಯಿತು. ಎಲ್ಲರೂ ಒಟ್ಟಿಗೆ ಭೋಜನ ಸವಿಯುವುದರೊಂದಿಗೆ ಹೊಸ ಬೆಳಕು 50ನೇ ಸಂಚಿಕೆಗೆ ತೆರೆಬಿದ್ದಿತು.

ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ಒಳಾಂಗಣ ಕ್ರೀಡಾಂಗಣಕ್ಕೆ ಉದ್ಘಾಟನೆ ಭಾಗ್ಯವಿಲ್ಲ!



ಗೋಡೌನ್ ಆಗಿ ಪರಿವರ್ತನೆಗೊಂಡಿರುವ ಒಳಾಂಗಣ ಕ್ರೀಡಾಂಗಣ ಕಟ್ಟಡ

ಮೈಸೂರು, ಜೂ.9(ಎಸ್‌ಪಿಎನ್)– 2017–18ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಕೋಟಿ ವೆಚ್ಚದಲ್ಲಿ ನಿವೇದಿತ ನಗರದಲ್ಲಿ ನಿರ್ಮಾಣಗೊಂಡಿರುವ ಒಳಾಂಗಣ(ಶೆಟಲ್ ಬ್ಯಾಡ್‌ಮಿಂಟನ್ ಕೋರ್ಟ್) ಕ್ರೀಡಾಂಗಣ 8 ವರ್ಷ ಕಳೆದರೂ ಉದ್ಘಾಟನಾ ಭಾಗ್ಯ ಕಂಡಿಲ್ಲ.

ಇದೀಗ ಈ ಆವರಣದಲ್ಲಿ ಗಿಡ–ಗಂಟಿ ಬೆಳೆದು ಕ್ರಿಮಿ–ಕೀಟಗಳ ಆವಾಸ ಸ್ಥಾನವಾಗಿದೆ ಎಂಬ ದೂರು ಕೇಳಿ ಬರುತ್ತಿದೆ. ಮೈಸೂರು ಬೆಳೆದಂತೆ ಈ ಭಾಗದ ಯುವಕರೂ ಕಡಿಮೆ ವೆಚ್ಚದಲ್ಲಿ ಕ್ರೀಡೆಗೆ ಆದ್ಯತೆ ನೀಡಬೇಕೆಂಬ ಆದ್ಯತೆ ಮೇರೆಗೆ ಅಂದಿನ ಪಾಲಿಕೆ ಆಯುಕ್ತರು, ಸಿಎಂ ವಿಶೇಷ ಅನುದಾನದಡಿ ಒಳಾಂಗಣ ಕ್ರೀಡಾಂಗಣದ ಕಟ್ಟಡ, ಅದರ ರಕ್ಷಣೆಗೆ ಕಾಂಪೌಂಡ್ ನಿರ್ಮಿಸಿದ್ದಾರೆ. ಕಟ್ಟಡ ಪೂರ್ಣಗೊಂಡಿದ್ದರೂ ಅಧಿಕಾರಿಗಳ ಇಚ್ಛಾಸಕ್ತಿ ಕೊರತೆಯಿಂದ ಸಾರ್ವಜನಿಕ ಉಪಯೋಗಕ್ಕೆ ಬಾರದೇ, ಪಾಲಿಕೆಯ ಗೋಡೌನ್ ಆಗಿ ಪರಿವರ್ತನೆಗೊಂಡಿದೆ.

ಎಂ.ಜೆ.ಜಗದೀಶ್ ನಗರ ಪಾಲಿಕೆ ಸದಸ್ಯರಾಗಿದ್ದ ವೇಳೆ ಈ ಕಟ್ಟಡ, ಕಾಂಪೌಂಡ್ ನಿರ್ಮಾಣಕ್ಕೆ ಶ್ರಮಿಸಿದ್ದರು. ನಂತರ ಪಾಲಿಕೆ ಸದಸ್ಯರಾಗಿ ಆಯ್ಕೆಗೊಂಡಿದ್ದ ನಿರ್ಮಲ ಹರೀಶ್ ಅವರು, ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಿ, ಕ್ರೀಡಾಂಗಣ ಪೂರ್ಣಗೊಳಿಸಲು ಸಹಕರಿಸಿದ್ದರು. ಆದರೆ, ರಾಜಕೀಯ ಪಲ್ಲಟದಿಂದಾಗಿ ಈ ಕಟ್ಟಡಕ್ಕೆ ಉದ್ಘಾಟನೆ ಭಾಗ್ಯ ಇಂದಿಗೂ ಬಂದಿಲ್ಲ.

ಈ ಕಟ್ಟಡ ಉದ್ಘಾಟನೆಗೆ ಈ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡ ಹಲವು ಬಾರಿ ಅಧಿಕಾರಿಗಳ ತರಾಟೆಗೆ ತೆಗೆದುಕೊಂಡಿದ್ದರೂ ಅಧಿಕಾರಿಗಳು ಮಾತ್ರ ಈ ಕ್ರೀಡಾಂಗಣ ಕಟ್ಟಡದ ಉದ್ಘಾಟನೆಗೆ ದಿನಾಂಕ ನಿಗದಿಗೊಳಿಸಲು ಮನಸ್ಸು ಮಾಡುತ್ತಿಲ್ಲ ಎಂದು ಈ ಭಾಗದ ಕ್ರೀಡಾಭಿಮಾನಿಗಳು ಬೇಸರ ವ್ಯಕ್ತಪಡಿಸುತ್ತಿದ್ದಾರೆ.



ಕ್ರೀಡಾಂಗಣ ಆವರಣದಲ್ಲಿ ಗಿಡ–ಗಂಟಿ ಬೆಳೆದಿರುವುದು

ಸ್ಥಳೀಯ ನಿವಾಸಿಗಳ ಸುಪರ್ದಿಯಲ್ಲಿ ಶೆಟಲ್ ಬ್ಯಾಡ್‌ಮಿಂಟನ್ ಕೋರ್ಟ್ ನಿರ್ವಹಣೆಗೆ ಮನವಿ ಮಾಡಿದ್ದರು. ಈಗಾಗಲೇ ರಾಮಕೃಷ್ಣನಗರ ಶೆಟಲ್ ಬ್ಯಾಡ್‌ಮಿಂಟನ್ ಕೋರ್ಟ್, ಜೆಪಿ.ನಗರ ಕ್ರೀಡಾಂಗಣ, ಕೆ.ಜಿ.ಕೊಪ್ಪಲು ಕ್ರೀಡಾಂಗಣ ನಿರ್ವಹಣೆಗೆ ಸ್ಥಳೀಯರಿಗೆ ಅವಕಾಶ ನೀಡಲಾಗಿದೆ. ಅದೇ ರೀತಿ ನಿವೇದಿತಾನಗರ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗೆ ವಹಿಸುವಂತೆ ಪಾಲಿಕೆ ಆಯುಕ್ತರಿಗೆ ಹಲವು ವರ್ಷಗಳಿಂದ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಹಿರಿಯ ಕ್ರೀಡಾಪಟು ಬಸವರಾಜು.

ಇನ್ನಾದರು ಒಳಾಂಗಣ ಕ್ರೀಡಾಂಗಣದ ಕಟ್ಟಡ ಲೋಕಾರ್ಪಣೆಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕ್ರಮವಹಿಸಬೇಕು ಮತ್ತು ಈ ಭಾಗದ ಯುವಕರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಸಹಕರಿಸುವಂತೆ ಮನವಿ ಮಾಡಿದ್ದಾರೆ.




ತುಕ್ಕು ಹಿಡಿಯುತ್ತಿರುವ ಪ್ರವೇಶ ದ್ವಾರದ ಗೇಟ್

ಇಂದು ಮುಕ್ತ ವಿವಿಯಲ್ಲಿ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ

ಮೈಸೂರು,ಜೂ.9(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಜೂ.10ರಂದು ಬೆಳಗ್ಗೆ 11 ಗಂಟೆಗೆ ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಏರ್ಪಡಿಸಲಾಗಿದೆ. ಕರ್ನಾಟಕ ಗೃಹಮಂಡಳಿ ಆಯುಕ್ತ ಕೆ.ಎ.ದಯಾನಂದ ಶುಭ ಹಾರೈಸಲಿದ್ದಾರೆ. ಹುಣಸೂರು, ನಾಗರಹೊಳೆ ಅಭ್ಯಯಾರಣ್ಯದ ಹುಲಿ ಯೋಜನೆ ನಿರ್ದೇಶಕಿ ಪಿ.ಎ.ಸೀಮಾ ಅವರು ಅಧ್ಯಯನ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಕೊಡಗು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇಘಾಲಯ ಹನಿಮೂನ್ ಹತ್ಯೆ: ಪತಿ ಕೊಲೆಗೆ ಅನೈತಿಕ ಸಂಬಂಧ ಕಾರಣ; ಪತ್ನಿ, ಪ್ರೇಮಿ ಸೇರಿ ಐವರ ಬಂಧನ



ಸೋನಮ್

ಮೇಘಾಲಯ, ಜೂ.9– ಮೇಘಾಲಯ ಹನಿಮೂನ್ ಹತ್ಯೆ ಪ್ರಕರಣ ದೊಡ್ಡ ತಿರುವು ಪಡೆದುಕೊಂಡಿದ್ದು, ರಾಜ ರಘುವಂಶಿ ಕೊಲೆಗೆ ಪತ್ನಿ ಸೋನಮ್ ರಘುವಂಶಿಯೇ ಸಂಚು ರೂಪಿಸಿದ ಆರೋಪದ ಮೇಲೆ ಬಂಧಿಸಲಾಗಿದೆ. ಈ ಕೊಲೆಗೆ ಅಕ್ರಮ ಸಂಬಂಧವೇ ಕಾರಣ ಎಂದು ಪೊಲೀಸರು ಶಂಕಿಸಿದ್ದಾರೆ.

ಮೇ 11 ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದ ರಾಜ ರಘುವಂಶಿ ಮತ್ತು ಸೋನಮ್ ದಂಪತಿ ಮೇ 20 ರಂದು ಮೇಘಾಲಯಕ್ಕೆ ಹನಿಮೂನ್‌ಗೆ ತೆರಳಿದ್ದರು. ಅವರು ಮೇ 22 ರಂದು ಬಾಡಿಗೆ ಸ್ಕೂಟರ್‌ನಲ್ಲಿ ಮೌಲಾಖಿಯಾತ್ ಗ್ರಾಮಕ್ಕೆ ಬಂದಿದ್ದರು.

ಮೇ 23 ರಂದು ದಂಪತಿಗಳು ನಾಪತ್ತೆಯಾಗಿದ್ದು, ಜೂನ್ 2 ರಂದು ರಾಜ ರಘುವಂಶಿ ಅವರ ಶವ ಆಳವಾದ ಕಂದಕದಲ್ಲಿ ಪತ್ತೆಯಾಗಿತ್ತು. ನಂತರ ಜೂನ್ 8 ರಂದು ಉತ್ತರ ಪ್ರದೇಶದ ಘಾಜಿಪುರದಲ್ಲಿ ಪತ್ನಿ ಸೋನಮ್‌ರನ್ನು ಪತ್ತೆಹಚ್ಚಿ ವಶಕ್ಕೆ ಪಡೆಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಮೇಘಾಲಯ ಪೊಲೀಸರ ಪ್ರಕಾರ ಸೋನಮ್ 21 ವರ್ಷದ ರಾಜ್ ಕುಶ್ವಾಹ ಅವರೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದರು ಮತ್ತು ಅವರ ಪತಿಯನ್ನು ಕೊಲ್ಲಲು ಪ್ರಿಯತಮನೊಂದಿಗೆ ಸಂಚು ರೂಪಿಸಿದ್ದರು. ಹೀಗಾಗಿ ಇಬ್ಬರನ್ನೂ ಬಂಧಿಸಲಾಗಿದೆ.

ಸೋನಮ್ ತನ್ನ ಪ್ರಿಯಕರ ರಾಜ್, ವಿಶಾಲ್ ಸಿಂಗ್ ಚೌಹಾಣ್ (22), ಆಕಾಶ್ ರಜಪೂತ್ (19) ಮತ್ತು ಆನಂದ್ ಸಿಂಗ್ ಕುರ್ಮಿ (23) ಸಹಾಯದಿಂದ ಕೊಲೆಗೆ ಸಂಚು ರೂಪಿಸಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದು, ಈ ನಾಲ್ವರನ್ನು ಬಂಧಿಸಲಾಗಿದೆ.

ಆರೋಗ್ಯಕ್ಕೆ ಪೂರಕವಾಗಿ ಯೋಗವನ್ನು ಜನ ಸಾಮಾನ್ಯರಿಗೆ ಪರಿಚಯಿಸಬೇಕು

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ

ಮೈಸೂರು, ಜೂ.9(ಜಿಎ)–ಆರೋಗ್ಯ ಕಾಪಾಡಿಕೊಳ್ಳಲು ಪೂರಕವಾದ ಯೋಗವನ್ನು ಜನಸಾಮಾನ್ಯರಿಗೂ ತಲುಪಿಸಬೇಕು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಸಲಹೆ ನೀಡಿದರು.

ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರನ್ನು ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಗರಕ್ಕೆ ಬೇಕಾದ ಎಲ್ಲಾ ಮೂಲ ಸೌಕರ್ಯಗಳನ್ನು ಆ ಕಾಲದಲ್ಲಿಯೇ ಕಲ್ಪಿಸಿದ್ದಾರೆ. ಆಯುರ್ವೇದ ಹಾಗೂ ಯೋಗ ಕೂಡ ಅವುಗಳಲ್ಲಿ ಒಂದು. ಆಯುರ್ವೇದ ಕಾಲೇಜಿನಲ್ಲಿ ಆಯುರ್ವೇದ ಹಾಗೂ ಯೋಗದ ಜೊತೆಗೆ ಸಂಸ್ಕಾರವನ್ನು ಕಲಿಸುತ್ತಿರುವುದು ಸ್ವಾಗತಾರ್ಹ ಎಂದರು.

ಭಾರತದಲ್ಲಿ ಹುಟ್ಟಿದ ಯೋಗ ವಿಶ್ವಮಟ್ಟದಲ್ಲಿ ಪ್ರಸಿದ್ಧಿಯಾಗಿರುವುದು ಹೆಮ್ಮೆಯ ಸಂಗತಿ. ಯೋಗದಿಂದ ಆರೋಗ್ಯ ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ನಮ್ಮಂಥ ಒತ್ತಡದಲ್ಲಿ ಇರುವವರಿಗೆ ಯೋಗ ಕಲಿಯಲು ನೀವು ಪ್ರೇರೇಪಿಸಬೇಕು. ಯೋಗದಿಂದ ಶೇ.90 ರಷ್ಟು ಆರೋಗ್ಯದ ಯಾವುದೇ ಸಮಸ್ಯೆ ಇಲ್ಲದಂತೆ ಜೀವಿಸಬಹುದು. ಇಂಗ್ಲಿಷ್ ಔಷಧಿಯಂತೆ ಅಡ್ಡ ಪರಿಣಾಮಗಳು ಕೂಡ ಇರುವುದಿಲ್ಲ ಎಂದು ತಿಳಿಸಿದರು.



ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಯೋಗ ಗುರು ಬಿ.ಪಿ. ಮೂರ್ತಿ ಮಾತನಾಡಿ, ಮಾನಸಿಕ, ದೈಹಿಕ, ಅಧ್ಯಾತ್ಮಿಕ, ಸಾಮಾಜಿಕ ಆರೋಗ್ಯದ ಜೊತೆಗೆ ನೈತಿಕ ಆರೋಗ್ಯವೂ ಮುಖ್ಯ. ನೈತಿಕ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ಸಮಾಜದ ಆರೋಗ್ಯ ಚೆನ್ನಾಗಿರುತ್ತದೆ. ಮೈಸೂರಿಗೆ ಯೋಗ ನಗರಿ ಎಂಬ ಹೆಸರಿದೆ. ಇದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ನಮ್ಮ ಹಿರಿಯ ಯೋಗ ಗುರುಗಳು ಕಾರಣ. ಪ್ರಸ್ತುತ ಆರೋಗ್ಯವೇ ಭಾಗ್ಯವಾಗಿರುವುದರಿಂದ ಎಲ್ಲರಿಗೂ ಯೋಗದ ಮಹತ್ವ ತಿಳಿಸಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸರ್ಕಾರಿ ಆಯುರ್ವೇದ ಕಾಲೇಜು ಆಯುರ್ವೇದ ಹಾಗೂ ಯೋಗ ಪರಂಪರೆಯನ್ನು ಮುಂದುವರೆಸುತ್ತಿದೆ ಹಲವಾರು ಶಾಲಾ– ಕಾಲೇಜುಗಳು, ಸಂಘ– ಸಂಸ್ಥೆಗಳಿಗೆ ಹೋಗಿ ಯೋಗದ ಪ್ರಾಮುಖ್ಯತೆ ಬಗ್ಗೆ ಪ್ರಚಾರ ಮಾಡುತ್ತಿದೆ. ಆಸ್ಪತ್ರೆಗೆ ಸಾಕಷ್ಟು ಹೊರರೋಗಿಗಳು ಕೂಡ ಬಂದು ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಯೋಗ ನೃತ್ಯ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲ ಡಾ.ಕೆ.ಎಸ್.ರಾಧಾಕೃಷ್ಣ ರಾಮರಾವ್, ಸ್ವಸ್ಥವೃತ್ತ ಮತ್ತು ಯೋಗ ವಿಭಾಗದ ಪ್ರಾಧ್ಯಾಪಕ ಡಾ.ಸುಧೀಂದ್ರ ಜಿ. ನವಲೆ, ಸಹಾಯಕ ಪ್ರಾಧ್ಯಾಪಕ ಡಾ.ಪ್ರವೀಣ್ ಕುಮಾರ್, ಭಾವನಾ, ಅಂಕಿತಾ, ಪಂಕಜಾ, ಶಿಲ್ಪಾ, ಸುಷ್ಮಿತಾ, ಯಶಸ್ವಿನಿ, ಸೌಮ್ಯಾ ಭಟ್, ಜನನಿ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನನಗೆ 25 ಜನ ಮಕ್ಕಳು

ತಿಮ್ಮ : ಫ್ಯಾಮಿಲಿ ಪ್ಲಾನಿಂಗ್‌ನವರು ನಿಮ್ಮ ಮನೆಗೆ ಬರಲಿಲ್ಲವಾ?

ಗುಂಡ : ಬಂದಿದ್ರು, ಅಂಗನವಾಡಿ ಕೇಂದ್ರ ಅಂದ್ಕೊಂಡು ವಾಪಸ್ ಹೋದ್ರು..!

ಮೈಸೂರು ಮಿತ್ರ

ಮಂಗಳವಾರ, 10 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಅವರಿಗೆ ನೋವಾದ್ರೆ ಅದು ನೋವಂತೆ;
ಬೇರೆಯವರಿಗೆ ಆದರೆ ಅದು ನಾಟಕವಂತೆ !

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೂ, ಜುಟ್ಟಿಗೆ ಮಲ್ಲಿಗೆ ಹೂವು

ನಿಮ್ಮ ಪತ್ರಗಳು

■ ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ನಾಯಿ ಕಡಿತಕ್ಕೆ ಲಸಿಕೆಯೇ ಇಲ್ಲ

ಮಾನ್ಯರೆ,

ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ನಾಯಿ ಕಡಿತಕ್ಕೆ ಲಸಿಕೆಯೇ ಇಲ್ಲ. ಹೊರಗಡೆಯಿಂದ ತಂದುಕೊಡಿ ಹಾಕುತ್ತೇವೆ ಎನ್ನುತ್ತಾರೆ. ಇದು ಮೈಸೂರಿನ ಪ್ರತಿಷ್ಠಿತ ಜಿಲ್ಲಾ ಆಸ್ಪತ್ರೆಯ ಸ್ಥಿತಿ. ಲಸಿಕೆ ಇಲ್ಲ ಎಂದು ಬರೆದುಕೊಡಿ ಎಂದರೆ ಇಲ್ಲ ಬರೆದುಕೊಡಲಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ನಾಯಿ ಕಡಿತಕ್ಕೆ ಲಸಿಕೆ ತೆಗೆದುಕೊಳ್ಳಲು ಹೋದಾಗ ಆಸ್ಪತ್ರೆ ಸಿಬ್ಬಂದಿ ಕೊಟ್ಟ ಉತ್ತರ ಇದಾಗಿತ್ತು. ಕೊನೆಗೆ ಡಿಹೆಚ್‌ಓ ಅವರನ್ನು ನೋಡಲು ಹೋದರೆ ಅವರೂ ಸಿಗಲಿಲ್ಲ. ಒಂದು ಲಸಿಕೆಗೆ 400 ರೂ.5 ಬಾರಿ ಲಸಿಕೆಗೆ 2000 ರೂ. ಹೊರಗೆ ತರಬೇಕು. ಬಡಬಗ್ಗರು ಎಲ್ಲಿಂದ ತರುತ್ತಾರೆ? ಜಿಲ್ಲಾ ಆಸ್ಪತ್ರೆಯಲ್ಲೇ ನಾಯಿ ಕಡಿತದ ಲಸಿಕೆ ಇಲ್ಲಾ ಎಂದ ಮೇಲೆ ತಾಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಿತಿ ಏನು ಹೇಳಿ?

ಮುಖ್ಯಮಂತ್ರಿಗಳ ತವರು ಜಿಲ್ಲೆ, ಪವರ್‌ಫುಲ್ ಉಸ್ತುವಾರಿ ಸಚಿವರ ಜಿಲ್ಲೆಯಲ್ಲೇ ಈ ಸ್ಥಿತಿ. ಅತ್ಯಗತ್ಯವಾಗಿ ಬೇಕಾಗಿರುವ ಲಸಿಕೆ ಇದು. ಪ್ರತಿದಿನ ನೂರಾರು ಜನರು ನಾಯಿ ಕಡಿತದಿಂದ ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ. ಅಲ್ಲದೆ ನಾಯಿ ಕಡಿತಕ್ಕೆ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲೂ ಲಸಿಕೆ ಲಭ್ಯವಿರುವುದಿಲ್ಲ. ಇದ್ದರೂ ದುಬಾರಿ ಹಣ ನೀಡಬೇಕು. ಮೈಸೂರಿನಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು, ಅವುಗಳನ್ನು ಹಿಡಿಯಲು ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಘನ ಸರ್ಕಾರ ಸಾರ್ವಜನಿಕರಿಗೆ ಅತ್ಯಗತ್ಯವಾಗಿ ಬೇಕಾಗಿರುವ ನಾಯಿ ಕಡಿತದ ಲಸಿಕೆ ಕೊರತೆಯಾಗದಂತೆ ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲು ಹಾಗೂ ಬೀದಿ ನಾಯಿಗಳನ್ನು ಹಿಡಿಯಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಮನವಿ ಮಾಡುತ್ತೇನೆ.

– ಬಿ.ಜಿ. ರಂಗೇಗೌಡ, ವಿಜಯನಗರ, ಮೈಸೂರು.

■ ಚಾಮರಾಜಪುರಂ ರೈಲು ನಿಲ್ದಾಣದಲ್ಲಿ ನಿಲುಗಡೆಗೆ ಅವಕಾಶ ಕಲ್ಪಿಸಿ

ಮಾನ್ಯರೇ

ಮೈಸೂರಿನ ಅಶೋಕಪುರಂ ರೈಲು ನಿಲ್ದಾಣಕ್ಕೆ ವಿಸ್ತರಿಸಿರುವ ಎರಡು ರೈಲುಗಳು ಚಾಮರಾಜಪುರಂ ನಿಲ್ದಾಣದಲ್ಲಿ ನಿಲ್ಲುತ್ತಿಲ್ಲ. ಅತೀ ಹೆಚ್ಚು ಪ್ರಯಾಣಿಕರು ಬಳಸುವ ಈ ರೈಲು ನಿಲ್ದಾಣದಲ್ಲಿ ಈ ಎರಡೂ ರೈಲುಗಳು ನಿಂತರೆ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮೈಸೂರು ವಿಭಾಗೀಯ ವ್ಯವಸ್ಥಾಪಕರು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

– ಕೊ.ಸು.ನರಸಿಂಹ ಮೂರ್ತಿ, ನಿವೃತ್ತ ಸಿ.ಎಂ.ಓ., ಕಾರ್ಮಿಕ ನ್ಯಾಯಾಲಯ, ಚಾಮರಾಜಪುರಂ, ಮೈಸೂರು.

■ 18 ವರ್ಷಗಳ ಬಳಿಕ ಆರ್‌ಸಿಬಿ ಕೈಗೆ ಬಂದ ಕಪ್

ಮಾನ್ಯರೆ,

ಐಪಿಎಲ್ ಪ್ರಾರಂಭವಾಗಿ 18 ವರ್ಷಗಳ ನಂತರ ಆರ್‌ಸಿಬಿ, ಪ್ರತಿಷ್ಠಿತ ಐಪಿಎಲ್ ಕಪ್ ತನ್ನದಾಗಿಸಿಕೊಂಡಿರುವುದು ತುಂಬಾ ಸಂತಸದ ಸಂಗತಿ. ಅದರಲ್ಲೂ ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿ. ಇದುವರೆಗೂ ಆರ್‌ಸಿಬಿ ಮಂಡಳಿ ಒಂದು ಉತ್ತಮವಾದ ತಂಡವನ್ನು ಕಟ್ಟಿರಲೇ ಇಲ್ಲ. ನಾವು ಕಪ್ ನಮ್ಮದೇ ಎಂದು 17 ವರ್ಷಗಳಿಂದ ಕಾದು, 18ನೇ ಆವೃತ್ತಿಯಲ್ಲಿ ಆಡಳಿತ ಮಂಡಳಿ ಉತ್ತಮವಾದ ತಂಡ ಕಟ್ಟಿ ಹೋರಾಟಕ್ಕೆ ಇಳಿಸಿ ಕಪ್ ಗೆದ್ದಿರುವುದು ಆರ್‌ಸಿಬಿ ಅಭಿಮಾನಿಗಳ ಸಂತಸ ಇಮ್ಮಡಿಯಾಗಲು ಕಾರಣವಾಗಿದೆ. ಕೋಟ್ಯಾಂತರ ಜನರ ಕನಸು ನನಸಾಗಿ, ಕೊಹ್ಲಿ ಗೆಲುವಿನ ಸಂತಸದ ಕ್ಷಣಗಳಲ್ಲಿ ಮೈದಾನದಲ್ಲೇ ಭಾವುಕರಾಗಿ ಕಣ್ಣೀರಾಕಿದಾಗ, ಸಹ ಆಟಗಾರರು ಅವರನ್ನು ಸಂತೈಸಿದ ರೀತಿಯಂತು ಪ್ರತಿಯೊಬ್ಬ ಅಭಿಮಾನಿಗಳು ಮೆಚ್ಚುವಂತದ್ದು.

ಪಂದ್ಯ ಮುಕ್ತಾಯದ ನಂತರ ವಿರಾಟ್ ಕೊಹ್ಲಿ ಮಾತನಾಡಿ, ನಾನು ಈ ತಂಡಕ್ಕಾಗಿ ನನ್ನ ಯೌವ್ವನ, ನನ್ನ ಪ್ರೈಮ್ ಹಾಗೂ ನನ್ನ ಅನುಭವವನ್ನು ಧಾರೆ ಎರೆದಿದ್ದೇನೆ. ನನ್ನ ಆತ್ಮ ಮತ್ತು ಹೃದಯ ಎರಡು ಬೆಂಗಳೂರೇ ಆಗಿದೆ ಎಂದ ಅವರ ಅಂತರಾತ್ಮದ ನುಡಿಗಳು ಕನ್ನಡಿಗರಾದ ನಮ್ಮ ಮನಸ್ಸಿನಲ್ಲಿ ಎಂದೆಂದಿಗೂ ಪ್ರತಿಧ್ವನಿಸುತ್ತಲೇ ಇರುತ್ತವೆ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಪಾದಚಾರಿ ನಿನ್ನ ದಾರಿ ಯಾವುದಯ್ಯಾ?

ಮಾನ್ಯರೆ,

ನಗರಗಳು ಅನೇಕ ಕಾರಣಗಳಿಗೆ ಜನದಟ್ಟಣೆಯ ಬೀಡಾಗಿವೆ. ನಗರೀಕರಣದಿಂದಾಗಿ, ಕೈಗಾರಿಕೆಗಳು, ವ್ಯಾಪಾರ–ವಾಣಿಜ್ಯಗಳು, ವಸತಿ ಪ್ರದೇಶಗಳು, ಜೊತೆಗೆ ಕೊಳಚೆ ಪ್ರದೇಶಗಳು ಎಲ್ಲವೂ ತೀವ್ರಗತಿಯಲ್ಲಿ ಬೆಳವಣಿಗೆಯಾಗಿವೆ. ಇವೆಲ್ಲದರ ಪರಿಣಾಮ ಮುಖ್ಯ ರಸ್ತೆಯಿಂದ ಗಲ್ಲಿ ರಸ್ತೆಯವರೆಗಿನ ಪಾದಚಾರಿ ಮಾರ್ಗಗಳು ಅತಿಕ್ರಮಣಗೊಂಡು ವಯಸ್ಸಾದವರು, ಮಕ್ಕಳು ನೆಮ್ಮದಿಯಿಂದ ತಿರುಗಾಡದಂತಾಗಿದೆ. ಎಷ್ಟೋ ಸಲ ಪಾದಚಾರಿಗಳ ಜೀವಕ್ಕೆ ಸಂಚಕಾರವಾಗಿದೆ.

ನಗರಗಳ ವ್ಯಾಪಾರಿಗಳು, ಭಿಕ್ಷುಕರು, ಹೋಟೆಲ್‌ಗಳ ಮಾಲೀಕರು, ಮನೆ ಮಾಲೀಕರು ಮಾತ್ರವಲ್ಲದೆ ದೇವರು ಕೂಡ ಫುಟ್‌ಪಾತ್‌ನಲ್ಲಿಯೇ ನೆಲೆ ಕಂಡುಕೊಂಡಿದ್ದಾನೆ. ವಿವೇಚನೆಯಿಲ್ಲದ ವಾಹನ ಸವಾರರಂತೂ ಭೂಲೋಕದ ಯಮಕಿಂಕರರಂತೆ ಇದ್ದಕಿದ್ದಂತೆ ಫುಟ್‌ಪಾತ್ ಮೇಲೆ ಹಾದುಹೋಗಿ ಜೀವ ಬೆದರಿಕೆಯೊಡ್ಡುತ್ತಾರೆ.

ಸರ್ಕಾರ ನಗರದ ಸೌಂದರ್ಯವನ್ನು ಹೆಚ್ಚಿಸಲು ಚಂದದ ಟೈಲ್ಸ್‌ಗಳನ್ನು ಹಾಕಿ, ಪಾದಚಾರಿ ಮಾರ್ಗಗಳನ್ನು ನಿರ್ಮಿಸಿದರೆ ಜನ ತಮ್ಮ ಅನುಕೂಲಕ್ಕಾಗಿ ಅವುಗಳನ್ನು ಹಾಳು ಮಾಡಿ, ಸ್ಥಳೀಯ ಸಂಸ್ಥೆಗಳನ್ನು ದೂರಿದರೆ, ಕೆಲವು ಪುಣ್ಯಾತ್ಮರಂತೂ ಕಸ ಮತ್ತು ತ್ಯಾಜ್ಯ ವಿಸರ್ಜನೆಯ ತಾಣವಾಗಿಸಿಕೊಂಡಿದ್ದಾರೆ.

ಪಾದಚಾರಿ ಮಾರ್ಗ ಕೆಲವರಿಗೆ ದುರ್ಮಾರ್ಗದ ಹಣ ಸಂಪಾದನೆಯ ಕೇಂದ್ರಗಳಾಗಿದ್ದು, ಇಲ್ಲಿ ಗಳಿಸಿದ ಹಣ ಹವಾಲ ಮಾರುಕಟ್ಟೆಯಲ್ಲಿ ಬಳಕೆಯಾಗಿ ಸಮನಾಂತರ ಅರ್ಥವ್ಯವಸ್ಥೆ ನಿರ್ಮಾಣಗೊಂಡು ಭ್ರಷ್ಟಾಚಾರ ಹೆಚ್ಚಲು ಕಾರಣವಾಗುತ್ತಿದೆ. ಅತಿಕ್ರಮಣಕ್ಕೆ ಒಳಗಾಗದ ಯಾವ ಫುಟ್‌ಪಾತ್‌ಗಳಿಲ್ಲ ಹೇಳಿ ನೋಡೋಣ. ಸರ್ಕಾರದ ಕಾನೂನುಗಳೇ ನಗರ ಮತ್ತು ಪಟ್ಟಣಗಳಲ್ಲಿ ಕೇರ್ ಆಫ್ ಫುಟ್‌ಪಾತ್ ಆಗಿದೆ. ವೃದ್ಧರು, ಮಕ್ಕಳು, ದಿವ್ಯಾಂಗರು, ಅಸಹಾಯಕರಿಗೆ ತೊಡಕಾಗಿರುವ ಈ ಆಕ್ರಮಣವನ್ನು ನಗರದ ನಾಗರಿಕರೇ ತಮ್ಮ ಸ್ವಇಚ್ಛೆಯಿಂದ ತೆರವುಗೊಳಿಸಿ, ಎಲ್ಲರ ಸುಗಮ ಸಂಚಾರಕ್ಕಾಗಿ ಅನುಕೂಲ ಮಾಡಿಕೊಡಬೇಕಿದೆ.

–ಬ್ಯಾ. ರಾ. ಪ್ರಸನ್ನಕುಮಾರ್, ಮೈಸೂರು.

ಕಪ್ಪು ನಮ್ದು...! ಇಲ್ಲಿ ತಪ್ಪು ನಮ್ದು...!!

ಅಕಟಕಟಾ ಅಕಟಲಟಾ.... ಅದೆಂತಾ ಘನ ಘೋರ ದೃಶ್ಯವದು. ಬಿದ್ದರು ಕೇಳುವವರಿಲ್ಲ. ಸತ್ತರೂ ಎತ್ತುವವರಿಲ್ಲ. ಅಕ್ಷರಶಃ ಅರಣ್ಯರೋದನ. ಚಂದ್ರನ ಅಂಗಳ ತಲುಪಿದರೂ, ಮಂಗಳನೆದೆ ಮೇಲೆ ಬಾವುಟ ಹಾರಿಸಿದರು, ಮಾನವನಲ್ಲಿ ಮೂಲವಾಗಿರಬೇಕಾದ ಮಾನವೀಯತೆ ಎಂಬುದೇ ಇಲ್ಲ. ಈ ಎಲ್ಲಾ ಅನುಮಾನ ಕಾಡತೊಡಗಿದ್ದು ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದಂತಹ ಕಾಲ್ತುಳಿತದ ದೃಶ್ಯ ಕಂಡಾಗ.




ಹೌದು, ಆಧುನೀಕತೆಯನ್ನು ಮನುಷ್ಯ ಹಾಸು ಹೊಕ್ಕಿದ್ದರು, ಎಷ್ಟೇ ಜ್ಞಾನ ಇದ್ದರು, ಮಾನವನ ಅತಿರೇಕದ ವರ್ತನೆ ಅದೆಲ್ಲವನ್ನೂ ತೃಣ ಸಮಾನ ಮಾಡಿಬಿಡುತ್ತದೆ ಅನ್ನೋದಕ್ಕೆ ಈ ಒಂದು ಘನ ಘೋರ ದುರಂತವೇ ಸಾಕ್ಷಿ. ನಾನು ತಪ್ಪು ಯಾರದ್ದು ಅನ್ನೋದನ್ನು ಹೇಳೋಕ್ಕೋಗಲ್ಲ. ಅದನ್ನು ಮೀರಿದ್ದನ್ನು ಕಟ್ಟಿಕೊಡುವ ಕೆಲಸ ಮಾಡಿದ್ದೇನೆ. ಯಾಕಂದ್ರೆ ತಪ್ಪನ್ನು ಎತ್ತಾಡೋಕೆ, ಅದರಲ್ಲಿ ಬೇಳೆ ಬೇಯಿಸಿಕೊಳ್ಳೋಕೆ ಅಂತಾನೇ ಸಾಕಷ್ಟು ಜನ ಇದ್ದಾರೆ. ನಾನು ಅದನ್ನೇ ಮಾಡೋಕ್ಕೋದ್ರೆ ಅದಕ್ಕೆ ಅರ್ಥವಿರೋಲ್ಲ.

ಕಪ್ಪು ನಮ್ದೆ – ತಪ್ಪು ನಮ್ದೆ, ಇಲ್ಲಿ ಖಂಡಿತಾ ತಪ್ಪು ಅವರದ್ದು–ಇವರದ್ದು ಅನ್ನೋದಕ್ಕಿಂತ ತಪ್ಪು ನಮ್ದೆ ಅನ್ನೋದು ನನ್ನ ವಾದ. ಹೌದು ಆಳುವವರ ಅನೇಕ ಎಡವಟ್ಟುಗಳು, ಉನ್ನತ ಸ್ಥಾನದಲ್ಲಿರುವವರ ಬೇಜವಾಬ್ದಾರಿ, ಅಲಕ್ಷ್ಯ ಈ ಘಟನೆಗೆ ಪ್ರಮುಖ ಕಾರಣ ಅನ್ನೋದರಲ್ಲಿ ಎರಡು ಮಾತಿಲ್ಲ. ಆದ್ರೆ ಅದರ ಜೊತೆಗೆ ನಮ್ಮ ಅವಿವೇಕತನದ, ಅತಿರೇಕದ, ಅಂಧಾಭಿಮಾನದ ಪರಮಾವಧಿಯು ಸಹ ಈ ದುರ್ಘಟನೆಗೆ ಪ್ರಮುಖ ಕಾರಣ ಅನ್ನೋದನ್ನು ಎಲ್ಲರೂ ಒಪ್ಪಲೇಬೇಕು. ಅದಕ್ಕೆ ನಾನು ಹೇಳಿದ್ದು 'ಕಪ್ಪು ನಮ್ದೆ ತಪ್ಪು ನಮ್ದೆ'. ಅತಿಯಾದರೆ ಅಮೃತವೂ ವಿಷವಾಗುತ್ತದೆ ಅಂದ ಮೇಲೆ ಈ ಅಂಧಾಭಿಮಾನ ಅವಘಡವಾಗದೆ ಇರುತ್ತದಾ? ಅದು ಸಿನಿಮಾ ಕ್ಷೇತ್ರವಿರಲಿ, ಕ್ರೀಡಾ ಕ್ಷೇತ್ರವಿರಲಿ, ರಾಜಕೀಯ ಕ್ಷೇತ್ರವೇ ಇರಲಿ ನಮಗೆ ಎಲ್ಲದರ ಮೇಲೆ ಆಸಕ್ತಿ ಇರೋದು ತಪ್ಪಲ್ಲ. ಆದ್ರೆ ಆ ಕ್ಷೇತ್ರದ ಸಾಧಕರನ್ನು ಅಸಾಮಾನ್ಯರೆಂದುಕೊಳ್ಳೋದು, ಅವರನ್ನ ಆರಾಧಿಸುವುದು. ಅವರಿಗಾಗಿ ಪ್ರಾಣವನ್ನೇ ಕೊಡ್ತೀನಿ, ಮಣ್ಣು, ಮಸಿ ಅನ್ನೋದಿದೆಯಲ್ಲಾ ಅದು ಅಕ್ಷಮ್ಯ. ಅಸಲಿಗೆ ಅವರ ಸಾಧನೆ ನಮಗೆ ಪ್ರೇರಕ ಶಕ್ತಿಯಾಗಬೇಕೇ ಹೊರತು, ಅವರನ್ನು ನೋಡಬೇಕು, ಅವರಂತೆ ಜೀವನ ಶೈಲಿ ಇರಬೇಕು ಅಂತಾ ತುಡಿಯುವುದು ಒಳ್ಳೆದಲ್ಲ ಅನ್ನೋದನ್ನು ನೆನಪಿಡಿ.

ಜೊತೆಯವರನ್ನು ಪ್ರೀತಿಸಿ– ಅಕ್ಕಪಕ್ಕದವರನ್ನು ಗೌರವಿಸಿ. ನಾವು ಇಷ್ಟಪಡಲೇಬೇಕು ಇಲ್ಲ ಗೌರವಿಸಲೇಬೇಕು ಅಂದ್ರೆ ಸಾವಿರ ಜನ ಸಿಗುತ್ತಾರೆ. ಸರಿಯಾಗಿ ಹೇಳಬೇಕಂದ್ರೆ ಅವರೆಲ್ಲಾ ಯಾವುದೇ ಸೆಲೆಬ್ರಿಟಿಗೂ ಕಡಿಮೆ ಇರುವುದಿಲ್ಲ.ಆದ್ರೆ ನಮಗೆ ಮಾತ್ರ ಅದು ಕಾಣಿಸಿರುವುದಿಲ್ಲ. ಯಾಕಂದ್ರೆ ಹಿತ್ತಲ ಗಿಡ ಎಂದಿಗೂ ನಮಗೆ ಮದ್ದಾಗುವುದಿಲ್ಲ. ಆದ್ರೆ, ಇನ್ನು ಮುಂದೆಯಾದರೂ ನಾವೆಲ್ಲಾ ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು ಒಳಿತು. ಯಾಕಂದ್ರೆ ಒಮ್ಮೆ ಯೋಚಿಸಿ ನಾವು ಇಷ್ಟಪಡುವ, ಗೌರವಿಸುವ ಅಕ್ಕಪಕ್ಕದವರು ರಾಜ್ಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿರಲೇಬೇಕಿಲ್ಲ. ನಿಮ್ಮ ಪರಿಚಯವಿದ್ದು, ಸಮಾಜಮುಖಿಯಾದ ಕೆಲಸ ಮಾಡಿದ್ದರೆ ಸಾಕು. ಅವರನ್ನು ಗೌರವಿಸಿ, ಸನ್ಮಾನಿಸಿ, ಪುರಸ್ಕರಿಸಿ. ಅದ್ಯಾರೋ ಗುರುತು, ಪರಿಚಯ ಇಲ್ಲದವರನ್ನು ನಾವು ಆರಾಧಿಸಿ, ಪೂಜಿಸಿ, ಗೌರವಿಸಿ ನಮ್ಮ ಪ್ರಾಣವನ್ನೇ ನೀಡಿದ್ರು ಅದು ಅವರಿಗೆ ತಲುಪುವುದೇ ಇಲ್ಲ. ಅವರ ಕೋಟ್ಯಾಂತರ ಅಭಿಮಾನಿಗಳಲ್ಲಿ ನಾವು ಒಬ್ಬರು ಅಷ್ಟೆ, ನಮ್ಮ ಅಭಿಮಾನ ಅರಣ್ಯರೋದನವಾಗುತ್ತದೆಯೇ ಹೊರತು ಅವರಿಗೆ ಅದು ತಲುಪುವುದೇ ಇಲ್ಲ. ಒಂದು ವೇಳೆ ತಲುಪಿದರು ಬಹುತೇಕರು ಅದಕ್ಕೆ ಮಹತ್ವವನ್ನಾಗಲಿ, ಪ್ರಾಮುಖ್ಯತೆಯನ್ನಾಗಲಿ ನೀಡುವುದೇ ಇಲ್ಲ. ಒಂದು ರೀತಿ ನಮ್ಮ ಪ್ರೀತಿ–ಅಭಿಮಾನ ಹೊಳೆಯಲ್ಲಿ ಹುಣಸೇಹಣ್ಣು ತೇಯ್ದಂತೆಯೇ ಹೊರತು ಯಾವುದೇ ಪ್ರಯೋಜನವಾಗುವುದಿಲ್ಲ. ಒಂದು ವೇಳೆ ಅದೇ ನಮ್ಮ ಅಕ್ಕ, ಪಕ್ಕದವರಿಗೆ, ನಮ್ಮ ಕೈಗೆ ಸಿಗುವವರಿಗೆ ನಾವು ಆ ಗೌರವ ಸಲ್ಲಿಸಿದ್ದರೆ ಖಂಡಿತಾ ಅವರು ನಮ್ಮ ಆ ಪ್ರೀತಿ ಅಭಿಮಾನವನ್ನು ಗೌರವಿಸುತ್ತಿದ್ದರು, ಅಷ್ಟೇ ಅಲ್ಲ ನಮ್ಮ ಅಭಿಮಾನಕ್ಕೊಂದು ಮೌಲ್ಯ, ಘನತೆ ಸಿಕ್ಕೇ ಸಿಗುತ್ತಿತ್ತು

ಯಾಕೆ ಈ ಪರಿ ಹುಚ್ಚಾಟ. ಅದು–ಇದು ಅನ್ನೋ ಚರ್ಚೆ ಈಗ ಜೋರಾಗಿದೆ. ಜೊತೆಗೆ ಕನ್ನಡಿಗರೇ ಇಲ್ಲದ ತಂಡ ಆರ್‌ಸಿಬಿ. ಅದು ನಮ್ಮ ತಂಡ ಹೇಗೆ ಆಗುತ್ತದೆ? ಅನ್ನೋ ವಾದವೂ ಸಾಕಷ್ಟು ಸದ್ದು ಮಾಡುತ್ತಿದೆ. ಖಂಡಿತಾ ಆರ್‌ಸಿಬಿ ಒಂದು ಕ್ಲಬ್ಬೇ, ಅದರಲ್ಲಿ ಕನ್ನಡಿಗರು ಕಡಿಮೆಯೇ. ಆದ್ರೆ, ನಮ್ಮ ಅಭಿಮಾನಕ್ಕೆ ಪ್ರೀತಿಗೆ ಕಾರಣವಾಗಿರೋದು ಆ ಆರ್‌ಸಿಬಿಯಲ್ಲಿನ ಈ 'ಬಿ' (ಬೆಂಗಳೂರು). ಬೆಂಗಳೂರು ನಮ್ಮದಾದ ಮೇಲೆ ಅದರ ಒಡಲಿಗೆ ಬರುವವರು ಯಾರೇ ಆದರೂ ಅವರು ನಮ್ಮವರೇ ಎಂಬ ಹೃದಯ ವೈಶಾಲ್ಯತೆ. ನಮ್ಮದು ಅಂತಾ ಒಮ್ಮೆ ಮನಸಿಗೆ ಹಚ್ಚಿಕೊಂಡ್ರೆ ಮುಗಿಯಿತು!... ಪ್ರಾಣ ಹೋದ್ರು ಅಭಿಮಾನ, ಸ್ವಾಭಿಮಾನ ಬಿಟ್ಟುಕೊಡಲ್ಲ. ಹೀಗಾಗಿ ನಮ್ಮ ಅಭಿಮಾನ ಆರ್‌ಸಿಬಿಯಲ್ಲಿರುವ ಬೆಂಗಳೂರಿಗಾಗಿ ಅಷ್ಟೇ. ಈ ರೀತಿ ಮಾತನಾಡುವ ಎಲ್ಲರೂ ಅರ್ಥಮಾಡಿಕೊಳ್ಳಬೇಕು; ಕನ್ನಡಿಗರು ಅತಿಥಿ ದೇವೋಭವ ನುಡಿಯನ್ನು ಬಲವಾಗಿ ನಂಬಿದ್ದಾರೆ. ಯಾರೇ ಬಂದರೂ ಹಿಂದೆ–ಮುಂದೆ ನೋಡದೆ ತಮ್ಮ ಜೊತೆಗೆ ಸೇರಿಸಿಕೊಂಡು ನಮ್ಮವರನ್ನಾಗಿಸಿಕೊಂಡು ಬಿಡುತ್ತಾರೆ. ನಮ್ಮ ಬಗ್ಗೆ ಅವರು ಗುಲಗಂಜಿಯಷ್ಟು ಅಭಿಮಾನ, ಪ್ರೀತಿ, ತೋರಿಸಿದರೆ ಸಾಕು ಬೆಟ್ಟದಷ್ಟು ಪ್ರೀತಿ ಧಾರೆಯೆರೆದು ಅಭಿಮಾನದ ಮಳೆ ಸುರಿಸುವವರು ಕನ್ನಡಿಗರು. ಅಂತಹದ್ದರಲ್ಲಿ ವಿರಾಟ್ ಕೊಹ್ಲಿ, ನಮ್ಮ ಕನ್ನಡಿಗರ ಬಗ್ಗೆ ಅದರಲ್ಲೂ ಬೆಂಗಳೂರು ಬಗ್ಗೆ ಇಟ್ಟಿರುವ ಗೌರವ, ಆದರ, ಪ್ರೀತಿ. ಜೊತೆಗೆ ನಾನು ನಿಮ್ಮ ಮನೆ ಮಗ ಅನ್ನೋ ಮಾತು ಕೇಳಿದ ಮೇಲೂ ಆರ್‌ಸಿಬಿ ಹಾಗೂ ವಿರಾಟ್ ಇಷ್ಟಪಡದೆ ಇರಲು ಹೇಗೆ ಸಾಧ್ಯ ನೀವೇ ಹೇಳಿ! ಹೀಗಾಗಿಯೇ ಕೋಟ್ಯಾಂತರ ಕನ್ನಡಿಗರಿಗೆ ಆರ್‌ಸಿಬಿ ಒಂದು ಕ್ಲಬ್ ಆಗಿ ಕಾಣುತ್ತಿಲ್ಲ. ವಿರಾಟ್ ನಮ್ಮವನಲ್ಲ ಅಂತಾ ಯೋಚಿಸಲು ಆಗುತ್ತಿಲ್ಲ.

> “ ಆಡಿ ಗೆದ್ದದ್ದು 11 ಜನ; ಸಂಭ್ರಮಿಸಿ ಸತ್ತವರು 11 ಮಂದಿ; ಹೌದು, ಇದು ಕ್ರಿಕೆಟ್ ಲೋಕದ ಇತಿಹಾಸದ ಪುಟಗಳಲ್ಲಿ ಒಂದು ಕಹಿ ಘಟನೆಯಾಗಿ ಉಳಿದು ಬಿಡುತ್ತದೆ. ಅದರಲ್ಲೂ ಐಪಿಎಲ್ ಆರ್‌ಸಿಬಿ ಅಂದಾಗಲಂತೂ, ಇದು ಪಾಪದ ಹೊರೆಯಾಗಿ ನಮ್ಮ ಕಣ್ ಮುಂದೆ ಬಂದು ನಿಲ್ಲುವುದರಲ್ಲಿ ಯಾವುದೇ ಅನುಮಾನ ಇಲ್ಲ. ಅಂತಹ ಎಂದೂ ಕಂಡು ಕೇಳರಿಯದ ಘೋರ ದುರಂತ ನಡೆದು ಹೋಗಿದೆ. 18 ವರ್ಷದಿಂದ ಶಬರಿಯಂತೆ ಕಾದು ದಕ್ಕಿಸಿಕೊಂಡ ಸಂಭ್ರಮ ಕೇವಲ 18 ಗಂಟೆಯೂ ಉಳಿಯದಂತೆ ಆಗಿದ್ದು ಯಾರಿಗೂ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.



ವಿರಾಟ್ ಕೊಹ್ಲಿ



ರಾಮ್ ಮೈಸೂರು
Tv9
ಮೊ.: 99809 14168

ಯಾರು ಏನೇ ಹೇಳಲಿ ವಿರಾಟ್ ಕೊಹ್ಲಿ ಸದ್ಯಕ್ಕೆ ಕ್ರಿಕೆಟ್ ಲೋಕದ ಧ್ರುವತಾರೆ. ಆತನ ಕ್ರಿಕೆಟ್ ಬಗೆಗಿನ ಪ್ರೀತಿಯನ್ನು ನಾವ್ಯಾರೂ ಮತ್ತೊಬ್ಬರಲ್ಲಿ ಕಂಡಿಲ್ಲ. ಆತನಿಗೆ ಕ್ರಿಕೆಟ್ ಸರ್ವಸ್ವ. ಹೇಗೆ ನಮ್ಮ ಹೆಮ್ಮೆಯ ಕನ್ನಡಿಗ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ರಾಜಕೀಯವೇ ವಾಕಿಂಗ್, ಈಟಿಂಗ್, ಥಿಂಕಿಂಗ್, ಸ್ಲೀಪಿಂಗ್ ಇತ್ಯಾದಿ ಇತ್ಯಾದಿಯಾಗಿದೆಯೋ ಅದೇ ರೀತಿ ವಿರಾಟ್‌ಗೆ ಸರ್ವಸ್ವವೂ ಕ್ರಿಕೆಟೇ ಆಗಿದೆ. ಇದಕ್ಕೆ ಜ್ವಲಂತ ನಿದರ್ಶನ; ಅವರ ತಂದೆಯ ಅಗಲಿಕೆಯ ದಿನ. ಹೌದು, ಆಗ ವಿರಾಟ್‌ಗೆ ಇನ್ನು 18 ವಯಸ್ಸು. ದೆಹಲಿ ಪರ ರಣಜಿ ಆಡುತ್ತಿದ್ದರು. ಎದುರಾಳಿ ತಂಡ ಬೇರೆ ಯಾವುದು ಅಲ್ಲ ನಮ್ಮ ಕರ್ನಾಟಕ. ಅತ್ಯುತ್ತಮ ಸ್ಕೋರ್ ಪೇರಿಸಿದ್ದ ಕರ್ನಾಟಕ ಗೆಲುವಿನ ಹಾದಿಯಲ್ಲಿತ್ತು. ಆದ್ರೆ, ಆ ಗೆಲುವಿನ ಹಾದಿಯನ್ನು ಬಂದ್ ಮಾಡಿದ್ದು ಇದೇ ಕೊಹ್ಲಿ. ಬರೀ ಬಂದ್ ಮಾಡಿದ್ದರೆ ಅದರಲ್ಲೇನು ವಿಶೇಷತೆ ಇರುತ್ತಿರಲಿಲ್ಲ. ಆದ್ರೆ, ಆ ಸಂದರ್ಭ ನಿಜಕ್ಕೂ ರೋಚಕ. ಎದುರಾಳಿ ಕರ್ನಾಟಕ ತಂಡದವರೇ ಒಂದು ಕ್ಷಣ ದಿಗ್ಮೂಢರಾಗುವಂತಹ ಕ್ಷಣಕ್ಕೆ ಸಾಕ್ಷಿಯಾಯ್ತು. ಆಗಿದ್ದಿಷ್ಟೇ ದೆಹಲಿ–ಕರ್ನಾಟಕ ನಡುವೆ ರಣಜಿ ಪಂದ್ಯ. ನಿರ್ಣಾಯಕ ಹಂತದಲ್ಲಿ ದೆಹಲಿ ತನ್ನ ಅಮೂಲ್ಯ 5 ವಿಕೆಟ್ ಕಳೆದುಕೊಂಡಿತ್ತು. ವಿರಾಟ್, ತಂಡಕ್ಕೆ ಆಸರೆಯಾಗಿದ್ದರು. 40 ರನ್ ಪೇರಿಸಿ ಅಂದಿನ ಆಟ ಮುಗಿಸಿ ನಾಳೆ ಭರ್ಜರಿ ಇನಿಂಗ್ಸ್‌ನ ಕನಸು ಕಾಣುತ್ತಾ ಮನೆಗೆ ಹೋದವರಿಗೆ ಶಾಕ್ ಕಾದಿತ್ತು. ತನ್ನ ಕ್ರಿಕೆಟ್ ಕನಸಿನ ಜನಕ, ತಂದೆಗೆ ದಿಢೀರ್ ಎದೆ ನೋವು ಕಾಣಿಸಿಕೊಂಡು, ಎಷ್ಟೇ ಪ್ರಯತ್ನಿಸಿದರೂ ಮಧ್ಯರಾತ್ರಿ ವೇಳೆಗೆ ಕೊನೆಯುಸಿರೆಳೆದರು.

18 ವರ್ಷದ ಕೊಹ್ಲಿಗೆ ಒಂದು ಕಡೆ ಜನ್ಮ ಕೊಟ್ಟ ತಂದೆ; ಮತ್ತೊಂದು ಕಡೆ ತನ್ನ ಸರ್ವಸ್ವವೂ ಆದ ಕ್ರಿಕೆಟ್. ತಾಯಿ ಸಹಾ ಆಯ್ಕೆಯನ್ನು ಕೊಹ್ಲಿಗೆ ಬಿಟ್ಟರು. 10 ನಿಮಿಷ ಕೊಠಡಿಯಲ್ಲಿ ಏಕಾಂಗಿಯಾಗಿ ಕಳೆದ ವಿರಾಟ್ ಹೊರ ಬಂದವರೇ ನಾನು ಕ್ರಿಕೆಟ್ ಆಡಿ ಬರುತ್ತೇನೆ ಎಂದು ಹೇಳಿ ಹೊರಟ. ಈ ಪಂದ್ಯದಲ್ಲಿ ಶತಕ ಸಿಡಿಸಿ ತಂಡಕ್ಕೆ ಆಸರೆಯಾದರೆ, ನನ್ನ ತಂದೆಯ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ನಿರ್ಧರಿಸಿದರೂ, ಅಂದು ಶತಕ ಸಿಡಿಸಲಿಲ್ಲ. ಆದ್ರೆ, 90 ರನ್ ಹೊಡೆದು ತಂಡವನ್ನು ಸೋಲಿನ ಸುಳಿಯಿಂದ ಪಾರು ಮಾಡಿದ. 18 ವರ್ಷದ ಬಾಲಕನ ಈ ಕ್ರಿಕೆಟ್ ಪ್ರೀತಿ, ಬದ್ಧತೆ, ಧೈರ್ಯದ ಬಗ್ಗೆ ಕೇಳಿ ಬೆಕ್ಕಸ ಬೆರಗಾದ ಅಂದಿನ ದೆಹಲಿ ಕ್ರಿಕೆಟ್ ಮಂಡಳಿ ಅಧ್ಯಕ್ಷ ಅರುಣ್ ಜೇಟ್ಲಿ, ಖುದ್ದು ವಿರಾಟ್ ಮನೆಗೆ ಬಂದು ಕೊಹ್ಲಿ ತಂದೆಯ ಮೃತದೇಹದ ಅಂತಿಮ ದರ್ಶನ ಪಡೆದು ಕೊಹ್ಲಿಗೆ ಸಾಂತ್ವನ ಹೇಳಿ ಹೋದರು. ಅದಾದ ನಂತರ ಆಗಿದ್ದು ಇತಿಹಾಸ. ಅದು ಎಲ್ಲರಿಗೂ ಗೊತ್ತಿದೆ. ಅಂತಹ ಕ್ರಿಕೆಟ್ ಪ್ರೀತಿ ವಿರಾಟ್ ಕೊಹ್ಲಿಯದು.

ಆಡಿ ಗೆದ್ದದ್ದು 11 ಜನ; ಸಂಭ್ರಮಿಸಿ ಸತ್ತವರು 11 ಮಂದಿ; ಹೌದು, ಇದು ಕ್ರಿಕೆಟ್ ಲೋಕದ ಇತಿಹಾಸದ ಪುಟಗಳಲ್ಲಿ ಒಂದು ಕಹಿ ಘಟನೆಯಾಗಿ ಉಳಿದು ಬಿಡುತ್ತದೆ. ಅದರಲ್ಲೂ ಐಪಿಎಲ್ ಆರ್‌ಸಿಬಿ ಅಂದಾಗಲಂತೂ, ಇದು ಪಾಪದ ಹೊರೆಯಾಗಿ ನಮ್ಮ ಕಣ್ ಮುಂದೆ ಬಂದು ನಿಲ್ಲುವುದರಲ್ಲಿ ಯಾವುದೇ ಅನುಮಾನ ಇಲ್ಲ. ಅಂತಹ ಎಂದೂ ಕಂಡು ಕೇಳರಿಯದ ಘೋರ ದುರಂತ ನಡೆದು ಹೋಗಿದೆ. 18 ವರ್ಷದಿಂದ ಶಬರಿಯಂತೆ ಕಾದು ದಕ್ಕಿಸಿಕೊಂಡ ಸಂಭ್ರಮ ಕೇವಲ 18 ಗಂಟೆಯೂ ಉಳಿಯದಂತೆ ಆಗಿದ್ದು ಯಾರಿಗೂ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಕೆಲವರ ಸ್ವಾರ್ಥ, ದುರಾಸೆ, ಅಧಿಕಾರದ ದರ್ಪಕ್ಕಾಗಿ ಎಲ್ಲವೂ ಬಲಿಯಾಗಿದೆ. ಈ ಮಧ್ಯೆ ಆಟಗಾರರು ಮನಸ್ಥಿತಿ ಬಗ್ಗೆ ಯಾರು ಯೋಚಿಸುತ್ತಲೇ ಇಲ್ಲ. ಹೇಳಿ–ಕೇಳಿ ಅವರೂ ಮನುಷ್ಯರೇ, ಅವರಿಗೂ ಭಾವನೆಗಳಿರುತ್ತವೆ. ಈ ಸಲ ಕಪ್ ನಮ್ದು ಅಂತಾ ಸಾಧಿಸಿ ತೋರಿಸಿದರು ಸಂಭ್ರಮಾಚರಣೆ ವೇಳೆ ನಡೆದ ಘೋರ ದುರಂತದಿಂದಾಗಿ ತಾವು ಮಾಡದ ತಪ್ಪಿಗೆ ಮಾತನಾಡಲು ಆಗದೆ ಮೌನವಾಗಿ ಇರಲು ಆಗದೆ, ಒಂದು ರೀತಿ ತೊಳಲಾಟಕ್ಕೆ ಸಿಲುಕಿಸಿದೆ. ಅವರು ಇದೀಗ ನಕ್ಕರು, ಒಂದು ಫೋಟೋ ಪೋಸ್ಟ್ ಮಾಡಿದರು, ವಿದೇಶಕ್ಕೆ ಹೋದರು, ಮನೆಯ ಸಂಭ್ರಮದಲ್ಲಿ ಭಾಗಿಯಾದರೂ ಕೆಲವು ವಿಕೃತ ಮನಸಿನವರ ವಕ್ರದೃಷ್ಟಿಗೆ ಗುರಿಯಾಗಬೇಕಾಗಿದೆ. ಇನ್ನೊಂದಷ್ಟು ದಿನ ಅವರು ತಮ್ಮ ಬದುಕನ್ನು ಪಕ್ಕಕ್ಕಿಟ್ಟು ಮುಖವಾಡ ಧರಿಸಿಯೇ ಬದುಕಬೇಕಾಗಿದೆ.

ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ..! : ಈ ಮಾತು ಸರ್ವಕಾಲಕ್ಕೂ ಪ್ರಸ್ತುತ. ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆ ದುರಂತದ ನಂತರ ಇದು ಮತ್ತೊಮ್ಮೆ ಸಾಬೀತಾಗಿದೆ. ಯಾರೋ ಮಾಡಿದ ತಪ್ಪಿಗೆ ಪಾಪ ಪೊಲೀಸ್ ಅಧಿಕಾರಿಗಳ ತಲೆ ದಂಡವಾಗಿದೆ. ಕಪ್ ಗೆದ್ದವರು ಯಾರೋ, ಅವರನ್ನು ಆಹ್ವಾನಿಸಿದವರು ಯಾರೋ, ಅವರನ್ನು ನೋಡಲು ಜನಜಂಗುಳಿಯಲ್ಲಿ ಬಂದವರು ಯಾರೋ. ಈ ಯಾರೋಗಳು ಯಾರು ಅನ್ನೋ ಪ್ರಶ್ನೆಗೆ ಉತ್ತರವೇ ಸಿಕ್ಕಿಲ್ಲ. ಆದ್ರೆ ಅದಾಗಲೇ ಇದ್ಯಾವುದಕ್ಕೂ ಸಂಬಂಧವಿಲ್ಲದ ಬೆಂಗಳೂರು ಪೊಲೀಸ್ ಕಮಿಷನರ್ ಅಂಡ್ ಟೀಂ ಅನ್ನು ದುರಂತಕ್ಕೆ ಹೊಣೆಗಾರರನ್ನಾಗಿಸಿ, ಬಲಿಪಶು ಮಾಡಲಾಗಿದೆ. ಸಾಮಾನ್ಯವಾಗಿ ಪೊಲೀಸರದ್ದು ಥ್ಯಾಂಕ್‌ಲೆಸ್ ಜಾಬ್ ಅದರಲ್ಲಿ ಎರಡು ಮಾತಿಲ್ಲ. ಆದ್ರೆ, ಸ್ವಾಮಿ ನಾವು ಮಾಡೋ ಕೆಲಸಕ್ಕೆ ನಿಮ್ಮ ಮೆಚ್ಚುಗೆ ಬೇಡ, ಕನಿಷ್ಠ ಈ ರೀತಿ ಬಲಿಕಾ ಬಕ್ರಾ ಮಾಡುವ ಕೆಲಸವನ್ನು ಮಾಡಬೇಡಿ ಅಂತಾ ಗಟ್ಟಿ ಧ್ವನಿಯಲ್ಲಿ ಕೇಳುವುದಕ್ಕೂ ಆಗದ ಪರಿಸ್ಥಿತಿ ಪೊಲೀಸರದ್ದಾಗಿದೆ. ಇದರ ನಡುವೆ ಒಂದು ಸಮಾಧಾನದ ಸಂಗತಿ ಅಂದ್ರೆ, ಪ್ರತಿ ಬಾರಿ ಪೊಲೀಸರ ಮೇಲೆ ಕ್ರಮ ಆದ್ರೆ ಖುಷಿ ಪಡುತ್ತಿದ್ದ ಜನರು. ಒಳ್ಳೆದಾಯ್ತು, ಹಂಗೇ ಆಗಬೇಕು ಅಂತಾ ಹಿಡಿಶಾಪ ಹಾಕುತ್ತಿದ್ದವರು ಈಗ ಪಾಪ, ಛೇ ಹೀಗಾಗಬಾರದಿತ್ತು ಅಂತಾ ಪೊಲೀಸ್ ಅಧಿಕಾರಿಗಳ ಬಗ್ಗೆ ಮರುಗುತ್ತಿರುವುದು ಅಪರೂಪದಲ್ಲಿ ಅಪರೂಪವೇ ಸರಿ.

ಅಸಲಿಗೆ ಒಂದು ಕಡೆ ದೂರದ ಅಹಮದಾಬಾದ್‌ನಲ್ಲಿ ಆಟಗಾರರು ಆಟ ಆಡಿ, ಗೆದ್ದು ಸಂಭ್ರಮಿಸುತ್ತಿದ್ದರೆ, ಮತ್ತೊಂದು ಕಡೆ ನನ್ನ ಮೈಸೂರು ಪೊಲೀಸರು ಸೇರಿದಂತೆ ನಮ್ಮ ಕರ್ನಾಟಕದ ಪ್ರತಿ ಜಿಲ್ಲೆಯ ಪೊಲೀಸರು ಅಭಿಮಾನಿಗಳ ಸಂಭ್ರಮಾಚರಣೆಯನ್ನು ನಿಯಂತ್ರಣ ಮಾಡುವುದರಲ್ಲಿ ಮುಂಜಾನೆವರೆಗೆ ಹೈರಾಣಾಗಿದ್ದರು. ಬಹುಶಃ ಅಂದು ರಾತ್ರಿ ಕಾನ್ಸ್‌ಟೇಬಲ್‌ಯಿಂದ ಹಿಡಿದು ಹಿರಿಯ ಅಧಿಕಾರಿಗಳು ಯಾರು ನಿದ್ದೆಯನ್ನೇ ಮಾಡಿರಲಿಲ್ಲ. ಇಷ್ಟೆಲ್ಲಾ ಮಾಡಿದವರಿಗೆ ಬೆಳಗ್ಗೆ ಮತ್ತೆ ಬಂದೋಬಸ್ತ್ ಕೆಲಸ ಅಂದ್ರೆ ಹೇಗಾಗಿರಬೇಡ ಹೇಳಿ! ಆಗಲ್ಲ ಅಂದ್ರು, ಕೇಳುವವರು ಯಾರು ಇರಲಿಲ್ಲ. ಬೇಡ ಅಂದ್ರು ಏಕೆ ಅಂತಾ ಅರ್ಥ ಮಾಡಿಕೊಳ್ಳುವ ಮನಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಹೀಗಿರುವಾಗ ಪೊಲೀಸರು ತಾನೇ ಏನು ಮಾಡಿಯಾರು. ಗೊಣಗುತ್ತಾ ತಮಗೆ ತಮ್ಮ ಕೆಲಸಕ್ಕೆ ತಾವೇ ಹಿಡಿಶಾಪ ಹಾಕಿಕೊಳ್ಳುತ್ತಾ, ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಅಷ್ಟಕ್ಕೂ ಆಳುವವರ ಹಾಗೂ ಅಭಿಮಾನಿಗಳ ಹುಚ್ಚಾಟ ಮುಗಿದಿರಲಿಲ್ಲ. ಒಮ್ಮೆ ಮೆರವಣಿಗೆ ಅಂದ್ರು, ಮತ್ತೊಮ್ಮೆ ಇಲ್ಲ ಅಂದ್ರು. ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಅಂದ್ರು, ದಿಢೀರ್ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮ ಆಯ್ತು. ಒಂದು ಶಿಸ್ತಿಲ್ಲ, ಕಾರ್ಯಕ್ರಮದ ರೂಪುರೇಷೆ ಇಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಕಾರ್ಯಕ್ರಮ ಯಾರು ಮಾಡ್ತಾ ಇದ್ದಾರೆ, ಏನಾಗ್ತಿದೆ ಅನ್ನೋ ಕ್ಲ್ಯಾರಿಟಿ ಸಹ ಅಲ್ಲಿ ಇರಲಿಲ್ಲ. ಸ್ವತಃ ಆಟಗಾರರಿಗೆ ಸುರಕ್ಷತೆ ಇರಲಿಲ್ಲ. ಹೀಗಿರುವಾಗ ಜನ ಸಾಮಾನ್ಯರ, ಅಭಿಮಾನಿಗಳ ಕಥೆ ಏನಾಗಿರಬೇಡ? ಇಷ್ಟೆಲ್ಲಾ ಇರುವಾಗ ಎಲ್ಲಾ ಬಿಟ್ಟು ಪೊಲೀಸರನ್ನು ಹೊಣೆಗಾರರನ್ನಾಗಿಸಿದ್ದು ಎಷ್ಟರಮಟ್ಟಿಗೆ ಸರಿ!?

ಕಾಲ್ತುಳಿತ: ಐವರು ಪೊಲೀಸ್ ಅಧಿಕಾರಿಗಳ ಅಮಾನತು ಹಿನ್ನೆಲೆ

ಸಿಎಂಗೆ ಭಾರತೀಯ ಪೊಲೀಸ್ ಒಕ್ಕೂಟ ಖಡಕ್ ಪತ್ರ

ಬೆಂಗಳೂರು, ಜೂ. 9– ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ ಆರ್‌ಸಿಬಿಯ 11 ಅಭಿಮಾನಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕರ್ತವ್ಯ ಲೋಪದ ಕಾರಣ ನೀಡಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ. ದಯಾನಂದ್ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿತ್ತು. ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದಕ್ಕೆ ಸಾರ್ವಜನಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಇದೀಗ ಭಾರತೀಯ ಪೊಲೀಸ್ ಒಕ್ಕೂಟದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಖಡಕ್ ಪತ್ರ ಬರೆದಿದ್ದು, ನಗರ ಪೊಲೀಸ್ ಕಮಿಷನರ್ ಸೇರಿದಂತೆ ಐದು ಮಂದಿ ಅಧಿಕಾರಿಗಳ ಅಮಾನತು ಹಿಂಪಡೆಯುವಂತೆ ಆಗ್ರಹಿಸಿದೆ.

ಕಾಲ್ತುಳಿತ ಪ್ರಕರಣದಲ್ಲಿ ಪೊಲೀಸರನ್ನು ಮಾತ್ರ ಹರಕೆಯ ಕುರಿಗಳನ್ನಾಗಿ ಮಾಡಿದ್ದೀರಿ. ಕಾಲ್ತುಳಿತ ದುರಂತದ ಕುರಿತು ನಿಷ್ಪಕ್ಷಪಾತವಾಗಿ ತನಿಖೆಯಾಗಲಿ. ವಿಚಾರಣೆ ಮುಗಿಯುವವರೆಗೆ ಅಮಾನತಾಗಿರುವ ಪೊಲೀಸರನ್ನು ಮರು ನೇಮಿಸಿ. ತನಿಖೆ ನಂತರ ಶಿಸ್ತು ಕ್ರಮ ಅಗತ್ಯವಿದ್ದರೆ ಕೈಗೊಳ್ಳಿ. ಕಾಲ್ತುಳಿತ ದುರಂತ ಪ್ರಕರಣಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ. ಮೃತರ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿ ದೇವರು ನೀಡಲಿ ಎಂದು ಪತ್ರದಲ್ಲಿ ಬರೆಯಲಾಗಿದೆ.

ಕರ್ನಾಟಕ ಸರ್ಕಾರವು ಘಟನೆಯ ಬಗ್ಗೆ ನಿಷ್ಪಕ್ಷಪಾತ ನ್ಯಾಯಾಂಗ ತನಿಖೆಗೆ ಆದೇಶಿಸಿದೆ ಎಂದು ತಿಳಿದು ನಮಗೆ ಸಂತೋಷವಾಗಿದೆ. ಆದರೂ, ವಿವರವಾದ ತನಿಖೆ ಪೂರ್ಣ ಗೊಳ್ಳುವ ಮೊದಲೇ ಪೊಲೀಸ್ ಆಯುಕ್ತರು ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿರುವುದು ದೇಶಾದ್ಯಂತ ವೃತ್ತಿಪರ ಪೊಲೀಸ್ ಸಮುದಾಯದಲ್ಲಿ ಗಂಭೀರ ಕಳವಳವನ್ನು ಹುಟ್ಟುಹಾಕಿದೆ. ವೈಯಕ್ತಿಕ ಜವಾಬ್ದಾರಿಯನ್ನು ಸ್ಥಾಪಿಸದೆ ತೆಗೆದುಕೊಳ್ಳುವ ಕ್ರಮಗಳನ್ನು ತತ್ವಬದ್ಧ ಹೊಣೆಗಾರಿಕೆಯ ಬದಲು ಬಲಿಪಶುವಾಗಿ ನೋಡಲಾಗುತ್ತದೆ ಮತ್ತು ಇಡೀ ಪೊಲೀಸ್ ಪಡೆಯ ಮೇಲೆ ನಿರಾಶಾದಾಯಕ ಪರಿಣಾಮ ಬೀರಬಹುದು.

ಈ ರೀತಿಯ ದೊಡ್ಡ ಸಾರ್ವಜನಿಕ ಕಾರ್ಯಕ್ರಮಗಳು, ವಿಶೇಷವಾಗಿ ಅಂತಹ ಕಡಿಮೆ ಸಮಯದಲ್ಲಿ ಮತ್ತು ಪೂರ್ವ ಸಿದ್ಧತಾ ಕಾರ್ಯಗಳಿಗೆ ಸಾಕಷ್ಟು ಸಮಯವಿಲ್ಲದೆ ನಡೆದಾಗ, ಬಹು ನಾಗರಿಕ, ಆಡಳಿತ ಮತ್ತು ರಾಜಕೀಯ ಸಂಸ್ಥೆಗಳ ನಡುವೆ ಸಂಘಟಿತ ಪ್ರಯತ್ನಗಳು ಬೇಕಾಗುತ್ತವೆ. ಇತರ ಪಾಲುದಾರರು ಪರಿಶೀಲನೆಯಿಂದ ತಪ್ಪಿಸಿಕೊಳ್ಳುವಾಗ ಪೊಲೀಸರನ್ನು ಶಿಕ್ಷಾರ್ಹ ಕ್ರಮಕ್ಕಾಗಿ ಪ್ರತ್ಯೇಕಿಸುವುದು, ಹಂಚಿಕೆಯ ಜವಾಬ್ದಾರಿಯ ವಾಸ್ತವತೆಯನ್ನು ವಿರೂಪ ಗೊಳಿಸುತ್ತದೆ ಮತ್ತು ಭವಿಷ್ಯಕ್ಕಾಗಿ ಸಮಗ್ರ ಪಾಠಗಳನ್ನು ಕಲಿಯುವ ಅವಕಾಶವನ್ನು ಕಳೆದುಕೊಳ್ಳುತ್ತದೆ.

ವಿಚಾರಣೆ ಮುಗಿಯುವವರೆಗೂ ಅಮಾನತುಗೊಂಡ ಅಧಿಕಾರಿಗಳನ್ನು ಮತ್ತೆ ನೇಮಿಸುವಂತೆ ಮತ್ತು ತನಿಖೆ ಸಮಂಜಸ ಮತ್ತು ವಿಶ್ವಾಸಾರ್ಹ ಸಮಯದೊಳಗೆ ಪೂರ್ಣಗೊಳ್ಳುವಂತೆ ನೋಡಿ ಕೊಳ್ಳುವಂತೆ ನಾವು ಕರ್ನಾಟಕ ಸರ್ಕಾರವನ್ನು ಗೌರವದಿಂದ ಒತ್ತಾಯಿಸುತ್ತೇವೆ. ಶಿಸ್ತು ಕ್ರಮ ಅಗತ್ಯವಿದ್ದರೆ, ಸಂಶೋಧನೆಗಳ ಆಧಾರದ ಮೇಲೆ ತೆಗೆದುಕೊಳ್ಳಬೇಕು ಮತ್ತು ಅವುಗಳಿಗೆ ಮುಂಚಿತವಾಗಿರಬಾರದು.

ಕೃತಿಗಳ ಆಹ್ವಾನ

ಮೈಸೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2024ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಲಾಗಿದೆ.

ಲೇಖಕರು, ಪ್ರಕಾಶಕರು, ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002. ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ, ಕೊರಿಯರ್ ಮೂಲಕ ಅಥವಾ ಖುದ್ದಾಗಿ 2025 ರ ಜುಲೈ 15 ರೊಳಗೆ ತಲುಪುವಂತೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.sahithyaacademy.karnataka.gov.in ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ.ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾಳೆ ಕರ್ನಾಟಕ ಲೋಕಾಯುಕ್ತದಿಂದ ದೂರು ಸ್ವೀಕಾರ

ಮೈಸೂರು, ಜೂ.9– ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳಿಂದ ಜೂನ್ 11 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮೈಸೂರು ಜಿಲ್ಲೆಯ ಕೆ.ಆರ್ ನಗರ ತಾಲೂಕು ಕಚೇರಿಯ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲೆಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಉಮೇಶ್.ಟಿ.ಜೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.9– ಮರಡಿಹುಂಡಿ ವಿದ್ಯುತ್ ಉಪಕೇಂದ್ರದಲ್ಲಿ ಲಿಂಕ್ ಲೈನ್ ಕಾಮಗಾರಿ ನಿಮಿತ್ತ ಜೂನ್ 11 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮರಡಿಹುಂಡಿ, ತುಂಬನೇರಳೆ, ಮಹದೇವನಹುಂಡಿ, ಹೊಸಕೋಟೆ, ನಂದಗುಂದ, ನಂದಕುಂದಪುರ, ಕಡವೆಕಟ್ಟೆಹುಂಡಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ವಧು–ವರರ ಸಮಾವೇಶ

ಮೈಸೂರು, ಜೂ. 9 – ಜೆಎಸ್ಎಸ್ ವಿವಾಹ ವೇದಿಕೆಯ ಆಶ್ರಯದಲ್ಲಿ ಜೂ. 15 ರಂದು ಜೆಎಸ್ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ.

ವಿವಾಹ ವೇದಿಕೆಯಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಅವಕಾಶ ವಿರುತ್ತದೆ. ಈವರೆಗೆ ನೋಂದಾಯಿಸಿಕೊಂಡಿಲ್ಲದವರು ವಧು–ವರರ ಸಮಾವೇಶದ ದಿನದಂದು ಕೂಡ ನೋಂದಾಯಿಸಿಕೊಳ್ಳಬಹುದಾಗಿದೆ. ವಧು–ವರರ ಸಮಾವೇಶವು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ. 0821–2430322, ಮೊ. 8310121328 ಸಂಪರ್ಕಿಸಬಹುದು.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಜೂ. 9 – ಮೈಸೂರಿನ ಗನ್‌ಹೌಸ್ ಹತ್ತಿರ, ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಜೂ. 22 ರಂದು ಮಧ್ಯಾಹ್ನ 3 ರಿಂದ 6 ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ಪದವಿ ವಿದ್ಯಾರ್ಹತೆ ಹಾಗೂ ಉತ್ತಮ ಕೆಲಸವುಳ್ಳ ವೀರಶೈವ ಲಿಂಗಾಯತ ವಧು–ವರರು ಈ ಸಮಾವೇಶದ ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ. ಆಸಕ್ತರು ಜೂ. 21ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.

ಕ್ವಿಟ್ ಟೊಬ್ಯಾಕೋ ಕಾರ್ಯಕ್ರಮ

ಮೈಸೂರು, ಜೂ. 9 – ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಜೂ. 13 ರಿಂದ 15 ರವರೆಗೆ ತಂಬಾಕು ತ್ಯಜಿಸುವ ವಸತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜೂ.15ರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಜೂ. 9 – ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೆಎಸ್ಎಫ್ ಅಕಾಡೆಮಿ, ಕೃಷಿಕ್ ಸರ್ವೋದಯ ಫೌಂಡೇಶನ್, ಮೈಸೂರು ಶಾಖೆ ವತಿಯಿಂದ ಜೂ. 15 ರಿಂದ ಬ್ಯಾಂಕ್ ಪರೀಕ್ಷೆಗಳ ತರಬೇತಿ ಕಾರ್ಯಕ್ರಮ ಮತ್ತು ಜುಲೈ 1 ರಿಂದ ಐಎಎಸ್, ಕೆಎಎಸ್ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗ್ರಾಮಾಂತರ ಮತ್ತು ನಗರ ಪ್ರದೇಶ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಮೊ. 82960 31570 ಸಂಪರ್ಕಿಸಬಹುದು.

ನೇಮಕ


ಮೈಸೂರು, ಜೂ. 9– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಯಾಗಿ ಕುವೆಂಪುನಗರ ಎಂ ಬ್ಲಾಕ್ ನಿವಾಸಿ ಗೋವಿಂದರಾಜು ಅವರನ್ನು ನೇಮಕ ಮಾಡಲಾಗಿದೆ.

ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಬೃಂದಾವನದಲ್ಲಿ ಕಾವೇರಿ ಆರತಿ

ಮೂಲಸೌಕರ್ಯ ಅಭಿವೃದ್ಧಿಗೆ 92.3 ಕೋಟಿಯ ಟೆಂಡರ್

ದಸರಾ ವೇಳೆ ಆರತಿ ಆರಂಭಿಸಲು ಚಿಂತನೆ; 8000 ಆಸನವುಳ್ಳ ಪ್ಲಾಟ್‌ಫಾರಂ ನಿರ್ಮಾಣ; ನಾಲ್ಕು ತಿಂಗಳಲ್ಲಿ ಕಾಮಗಾರಿ ಪೂರ್ಣ





ಕೆಆರ್‌ಎಸ್ ಬೃಂದಾವನದಲ್ಲಿ ನಡೆಸಲುದ್ದೇಶಿಸಿರುವ ಕಾವೇರಿ ಆರತಿ ಪ್ಲಾಟ್‌ಫಾರಂನ ಬ್ಲೂ ಪ್ರಿಂಟ್.



ಮೈಸೂರು, ಜೂ. 9(ಆರ್‌ಕೆ)– ವಿಶ್ವ ಪ್ರಸಿದ್ಧ ಪ್ರವಾಸಿ ತಾಣವಾಗಿರುವ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಬೃಂದಾವನದಲ್ಲಿ ಗಂಗಾರತಿ ಮಾದರಿಯಲ್ಲಿ 'ಕಾವೇರಿ ಆರತಿ' ಧಾರ್ಮಿಕ ಕಾರ್ಯಕ್ರಮಕ್ಕೆ ಭರದ ಸಿದ್ಧತೆ ನಡೆಯುತ್ತಿದೆ.

ಬೃಂದಾವನದ ದೋಣಿ ವಿಹಾರ ನಡೆಯುವ ಸ್ಥಳದ ಸಮೀಪ ಕಾವೇರಿ ನದಿಗೆ ಜಲಾಶಯದಿಂದ ನೀರು ಹರಿದು ಹೋಗುವ ಬಳಿ ಕಾವೇರಿ ಆರತಿಗೆ ಬೃಹತ್ ವೇದಿಕೆ (ಪ್ಲಾಟ್‌ಫಾರಂ) ನಿರ್ಮಿಸಲು ಕಾವೇರಿ ನೀರಾವರಿ ನಿಗಮ ನಿಯಮಿತ (ಸಿಎನ್‌ಎನ್‌ಎಲ್)ವು ಮುಂದಾಗಿದೆ. ಕರ್ನಾಟಕ ಸರ್ಕಾರವು ಗಂಗಾರತಿ ಮಾದರಿ ಕೆಆರ್‌ಎಸ್‌ನಲ್ಲಿ 'ಕಾವೇರಿ ಆರತಿ' ಮಾಡಲು ಆಸಕ್ತಿ ತೋರಿದ್ದು, ಈಗಾಗಲೇ ಸ್ಥಳ ಪರಿಶೀಲನೆ ನಡೆಸಿ ತಯಾರಿಸಿದ್ದ ಸಮಗ್ರ ಯೋಜನಾ ವರದಿ (ಡಿಪಿಆರ್)ಗೆ ಅನುಮೋದನೆ ನೀಡಿರುವುದರಿಂದ ಕಾವೇರಿ ನೀರಾವರಿ ನಿಗಮವು ಮೂಲ ಸೌಲಭ್ಯ ಅಭಿವೃದ್ಧಿಪಡಿಸಲು 92.3 ಕೋಟಿ ರೂ. ವೆಚ್ಚದ ಪ್ಲಾಟ್‌ಫಾರಂ ನಿರ್ಮಿಸುವ ಯೋಜನೆ ಅನುಷ್ಠಾನಗೊಳಿಸುವ ಸಲುವಾಗಿ ವಾರದ ಹಿಂದಷ್ಟೇ ಗ್ಲೋಬಲ್ ಟೆಂಡರ್ ಪ್ರಕಟಿಸಿದೆ. ಪ್ಲಾಟ್‌ಫಾರಂ, ಆಂಪಿ ಥಿಯೇಟರ್, 8000 ಮಂದಿ ಕುಳಿತು ಧಾರ್ಮಿಕ ಕೈಂಕರ್ಯ ವೀಕ್ಷಿಸಲು ಆಸನಗಳ ವ್ಯವಸ್ಥೆ, ಶೌಚಾಲಯ ಮುಂತಾದ ಮೂಲಸೌಕರ್ಯಗಳನ್ನು ಕಲ್ಪಿಸಲು ಟೆಂಡರ್ ಕರೆದಿದ್ದು, ಯಶಸ್ವಿ ಬಿಡ್ಡುದಾರರು ಗಂಗಾರತಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಕಲ್ಪಿಸಿ, ನಿರ್ವಹಿಸಲು ನಿಗಮದಿಂದ ಕಾರ್ಯಾದೇಶ ನೀಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

15 ದಿನದೊಳಗಾಗಿ ಕಾಮಗಾರಿ ಆರಂಭಿಸಿ ನಾಲ್ಕು ತಿಂಗಳೊಳಗೆ ಪೂರ್ಣಗೊಳಿಸಬೇಕೆಂದು ಷರತ್ತು ವಿಧಿಸಿರುವ ನಿಗಮವು, ದಸರಾ ಉದ್ಘಾಟನೆ ವೇಳೆಗೆ ಕಾವೇರಿ ಆರತಿ ಪುಣ್ಯ ಕಾರ್ಯಕ್ರಮ ಆರಂಭವಾಗಲಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೂಲ ಸೌಲಭ್ಯ ಅಭಿವೃದ್ಧಿಪಡಿಸಿ ಗಂಗಾರತಿ ಪ್ರಕ್ರಿಯೆಯನ್ನು ಧಾರ್ಮಿಕ ಇಲಾಖೆ ಅಥವಾ ಕಂದಾಯ ಇಲಾಖೆ ಸುಪರ್ದಿಗೆ ವಹಿಸಲಾಗುತ್ತಿದೆ ಎಂದ ಅವರು, ಲಭ್ಯವಿರುವ ಬೋಟಿಂಗ್ ಪಾಯಿಂಟ್‌ಗೂ ಸ್ಥಳದ ಅಭಾವವಿಲ್ಲ. 15000 ಮಂದಿ ಕುಳಿತು ವೀಕ್ಷಿಸಬಹುದಾದ ಸ್ಥಳದಲ್ಲಿ ಈಗ ಮೊದಲ ಹಂತದಲ್ಲಿ 8000 ಮಂದಿ ಕುಳಿತುಕೊಂಡು ಕಾವೇರಿ ಆರತಿ ವೀಕ್ಷಿಸಲು ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಯೋಜನೆಯಿಂದಾಗಿ ನಮ್ಮ ಸಂಸ್ಕೃತಿ, ಧಾರ್ಮಿಕ ಪರಂಪರೆ ಪ್ರೋತ್ಸಾಹಿಸುವಂತಾಗುವುದಲ್ಲದೇ, ಪ್ರವಾಸೋದ್ಯಮ ಅಭಿವೃದ್ಧಿಗೂ ಸಹಕಾರಿಯಾಗಲಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಡಿಸಿಇಟಿ: ಇಂದಿನಿಂದ ಜೂ.13ರವರೆಗೆ ದಾಖಲಾತಿ ಪರಿಶೀಲನೆ

ಬೆಂಗಳೂರು, ಜೂ.9– ಜೂ.10ರಿಂದ 13ರವರೆಗೆ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಡಿಸಿಇಟಿ ರ್‍ಯಾಂಕ್ ಪಡೆದ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಮೂರನೇ ಸೆಮಿಸ್ಟರ್ ಅಥವಾ ಎರಡನೇ ವರ್ಷದ ಇಂಜಿನಿಯರಿಂಗ್ ಕೋರ್ಸ್‌ಗಳ ನೇರ ಪ್ರವೇಶಾತಿಗೆ ಹಾಗೂ ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸಿಗೆ ಅರ್ಹತೆಯನ್ನು ಪಡೆಯುವುದಕ್ಕಾಗಿ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತದೆ. ದಾಖಲಾತಿ ಪರಿಶೀಲನೆ ನಡೆಯುವ 37 ಕಾಲೇಜುಗಳ ಪಟ್ಟಿಯನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಮುಂಗಡವಾಗಿ ದಿನಾಂಕ ನಿಗದಿ ಮಾಡಿಕೊಂಡು ತಮಗೆ ಹತ್ತಿರವಾಗುವ ಯಾವುದಾದರೊಂದು ಕಾಲೇಜಿಗೆ ಖುದ್ದು ಹೋಗಬೇಕು ಎಂದು ತಿಳಿಸಿದ್ದಾರೆ. ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲಾ ಶೈಕ್ಷಣಿಕ ಮೂಲ ದಾಖಲೆಗಳನ್ನು ಮತ್ತು ವಿಶೇಷ ಪ್ರವರ್ಗದ (ಎನ್‌ಸಿಸಿ, ಕ್ರೀಡೆ, ಸೈನಿಕರು, ಮಾಜಿ ಸೈನಿಕರು, ಸಿಎಪಿಎಫ್, ಮಾಜಿ–ಸಿಎಪಿಎಫ್ ಕ್ಲೇಮ್ ಮಾಡಿದ್ದಲ್ಲಿ ಮಾತ್ರ ಅರ್ಹತೆ) ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ತೆಗೆದುಕೊಂಡು ಹೋಗಬೇಕು ಎಂದು ವಿವರಿಸಿದ್ದಾರೆ.

ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಬಾಹ್ಯಾಕಾಶಕ್ಕೆ ಹೊತ್ತೊಯ್ಯುವ ಆಕ್ಸಿಯಮ್–4 ಮಿಷನ್ ಉಡಾವಣೆ ನಾಳೆಗೆ ಮುಂದೂಡಿಕೆ

ನವದೆಹಲಿ, ಜೂ.9– ಭಾರತದ ಎರಡನೇ ಗಗನಯಾತ್ರಿ ಶುಭಂಶು ಶುಕ್ಲಾ ಅವರನ್ನು ಬಾಹ್ಯಾಕಾಶಕ್ಕೆ ಕರೆದೊಯ್ಯುವ ಆಕ್ಸಿಯಮ್ –4 ಮಿಷನ್ ಅನ್ನು ಕೆಟ್ಟ ಹವಾಮಾನದಿಂದಾಗಿ ಒಂದು ದಿನದ ಮಟ್ಟಿಗೆ ಮುಂದೂಡಲಾಗಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಈ ಮಾಹಿತಿಯನ್ನು ನೀಡಿದೆ. ಈ ಮಿಷನ್ನ ಪೈಲಟ್ ಶುಕ್ಲಾ ಅವರಲ್ಲದೆ, ಇತರ ಸಿಬ್ಬಂದಿಯಲ್ಲಿ ಪೋಲೆಂಡ್ನ ಸ್ಲಾವೋಸ್ಜ್ ಉಜ್ನಾನ್ಸ್ಕಿ, ಹಂಗೇರಿಯ ಟಿಬೋರ್ ಕಾಪು ಮತ್ತು ಅಮೇರಿಕನ್ ಗಗನಯಾತ್ರಿ ಪೆಗ್ಗಿ ವಿಟ್ಸನ್ ಸೇರಿದ್ದಾರೆ. ಈಗ ಈ ಮಿಷನ್ ಜೂನ್ 11ರಂದು ಹೊರಡಲಿದೆ.


ಶುಭಾಂಶು ಶುಕ್ಲಾ


ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಇಸ್ರೋ, ಹವಾಮಾನ ಪರಿಸ್ಥಿತಿಯಿಂದಾಗಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭಾರತೀಯ ಗಗನಯಾತ್ರಿಯನ್ನು ಕಳುಹಿಸುವ ಆಕ್ಸಿಯಮ್–4 ಮಿಷನ್ನ ಉಡಾವಣೆಯನ್ನು ಜೂನ್ 10, 2025 ರಿಂದ ಜೂನ್ 11, 2025ರವರೆಗೆ ಮುಂದೂಡಲಾಗಿದೆ. ಉಡಾವಣೆಯ ಗುರಿ ಸಮಯ ಜೂನ್ 11, 2025 ರಂದು ಸಂಜೆ 5.30ಕ್ಕೆ ನಡೆಯಲಿದೆ.

ಈ ಕಾರ್ಯಾಚರಣೆಯು ಹೂಸ್ಟನ್ ಮೂಲದ ಆಕ್ಸಿಯಮ್ ಸ್ಪೇಸ್ ಮತ್ತು ಯುಎಸ್ ಬಾಹ್ಯಾಕಾಶ ಸಂಸ್ಥೆ ನಾಸಾ ನಡುವಿನ ಪಾಲುದಾರಿಕೆಯಾಗಿದೆ. ಇದನ್ನು ಮಿಷನ್ ಆಕಾಶ್ ಗಂಗಾ ಎಂದೂ ಕರೆಯುತ್ತಾರೆ. ಈ ಸಿಬ್ಬಂದಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 14 ದಿನಗಳ ಕಾಲ ಇರಲಿದ್ದಾರೆ. ಈ ಕಾರ್ಯಾಚರಣೆಯ ಮೂಲಕ ಶುಭಾಂಶು ಶುಕ್ಲಾ ಸುಮಾರು ನಾಲ್ಕು ದಶಕಗಳ ನಂತರ ಬಾಹ್ಯಾಕಾಶಕ್ಕೆ ಪ್ರಯಾಣಿಸಿದ ಎರಡನೇ ಭಾರತೀಯರಾಗಲಿದ್ದಾರೆ.

1984ರಲ್ಲಿ ರಾಕೇಶ್ ಶರ್ಮಾ ರಷ್ಯಾದ ಸೋಯುಜ್ ಬಾಹ್ಯಾಕಾಶ ನೌಕೆಯಲ್ಲಿ ಬಾಹ್ಯಾಕಾಶಕ್ಕೆ ಪ್ರಯಾಣಿಸಿದರು. ಕಂಪನಿಯ ಫಾಲ್ಕನ್ 9 ರಾಕೆಟ್ ಮೂಲಕ ಉಡಾವಣೆಯಾದ ನಂತರ ಸಿಬ್ಬಂದಿ ಹೊಸ ಸ್ಪೇಸ್‌ಎಕ್ಸ್ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯಲ್ಲಿ ಕಕ್ಷೆಯಲ್ಲಿರುವ ಪ್ರಯೋಗಾಲಯಕ್ಕೆ ಪ್ರಯಾಣಿಸುತ್ತಾರೆ ಎಂದು ನಾಸಾ ಹೇಳಿಕೆಯಲ್ಲಿ ತಿಳಿಸಿದೆ.

ಐಎಸ್‌ಎಸ್‌ನಲ್ಲಿ 14 ದಿನಗಳ ವಾಸ್ತವ್ಯದ ಸಮಯದಲ್ಲಿ ಆಕ್ಸಿಯಮ್–4 ಸಿಬ್ಬಂದಿ ಪ್ರಧಾನಿ ನರೇಂದ್ರ ಮೋದಿ, ಶಾಲಾ ವಿದ್ಯಾರ್ಥಿಗಳು ಮತ್ತು ಬಾಹ್ಯಾಕಾಶ ಉದ್ಯಮದ ನಾಯಕರೊಂದಿಗೆ ಸಂವಹನ ನಡೆಸುವ ನಿರೀಕ್ಷೆಯಿದೆ. ಇದರೊಂದಿಗೆ ಶುಭಾಂಶು ಶುಕ್ಲಾ ಬಾಹ್ಯಾಕಾಶದಲ್ಲಿ ಏಳು ಪ್ರಯೋಗಗಳನ್ನು ನಡೆಸಲಿದ್ದಾರೆ.

ಶುಭ ವಿವಾಹ...


ಮೈಸೂರಿನ ಸ್ಪೆಟ್ರಾ ಕನ್ವೆನ್‌ಷನ್ ಹಾಲ್‌ನಲ್ಲಿ ಶನಿವಾರ ನಡೆದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರ ಪುತ್ರಿ ಉಷಾ ಮತ್ತು ಡಾ.ನೇಮಿಚಂದ್ರ ಅವರ ಆರತಿ–ಅಕ್ಷತೆ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಗಮಿಸಿ ನೂತನ ವಧು–ವರರಿಗೆ ಶುಭ ಹಾರೈಸಿದರು. ಮಾಜಿ ಸಚಿವರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಅಶ್ವಿನ್‌ಕುಮಾರ್, ಭರತ್ ಮಂಜೇಗೌಡ ಇನ್ನಿತರರು ಉಪಸ್ಥಿತರಿದ್ದರು.

ಆರ್‌ಸಿಬಿ ವಿಜಯೋತ್ಸವಕ್ಕೆ ಆಹ್ವಾನಿಸಿದ್ದು ಯಾರೆಂದು ರಾಜ್ಯಪಾಲರನ್ನೇ ಕೇಳಿ

ನವದೆಹಲಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಆಟಗಾರರನ್ನು ಸನ್ಮಾನಿಸಲು ವಿಧಾನಸೌಧದ ಎದುರು ಆಯೋಜಿಸಿದ್ದ ಕಾರ್ಯಕ್ರಮಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಆಹ್ವಾನಿಸಿದ್ದು ಯಾರು ಎಂಬುದು ತಮಗೆ ಗೊತ್ತಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಮುನಿಸಿಪಾಲಿಟಿ ಆಡಳಿತ ಮತ್ತು ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ದೆಹಲಿ ಪಾಲಿಕೆ ಜೊತೆ ಚರ್ಚಿಸುವ ಸಲುವಾಗಿ ಶಿವಕುಮಾರ್ ಅವರು ದೆಹಲಿಗೆ ಭೇಟಿ ನೀಡಿದ್ದಾರೆ. ಬೆಂಗಳೂರು ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ಮಾಧ್ಯಮದವರೊಂದಿಗೆ ಮಾತನಾಡಿರುವ ಅವರು, ರಾಜ್ಯಪಾಲರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದು ಯಾರು ಎಂಬುದು ನನಗೆ ಗೊತ್ತಿಲ್ಲ. ಅದನ್ನು ನನ್ನನ್ನಲ್ಲ; ಅವರನ್ನೇ ಕೇಳಿ. ನಿವೃತ್ತ ನ್ಯಾಯಮೂರ್ತಿಗಳು ಪ್ರಕರಣದ ವಿಚಾರಣೆ ನಡೆಸುತ್ತಿರುವುದರಿಂದ ಈ ಸಂಬಂಧ ಪ್ರತಿಕ್ರಿಯಿಸುವುದಿಲ್ಲ ಎಂದು ಹೇಳಿದ್ದಾರೆ.


ಡಿ.ಕೆ. ಶಿವಕುಮಾರ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಕಾರ್ಯದರ್ಶಿಯಾಗಿದ್ದ ಕೆ. ಗೋವಿಂದರಾಜ್ ಅವರು ರಾಜ್ಯಪಾಲರಿಗೆ ಆಹ್ವಾನ ನೀಡಿದ್ದರೇ ಎಂಬ ಪ್ರಶ್ನೆಗೆ, ಅದನ್ನು ರಾಜ್ಯಪಾಲರೇ ಹೇಳಬೇಕು ಎಂದಿದ್ದಾರೆ.

ಆರ್‌ಸಿಬಿ ವಿಜಯೋತ್ಸವ ಸಂಭ್ರಮಾಚರಣೆ ವೇಳೆ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜೂನ್ 4ರಂದು ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು, 70ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಪ್ರಕರಣವನ್ನು ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿ.ಕುನ್ಹ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಕರ್ನಾಟಕ ಸರ್ಕಾರ ಒಪ್ಪಿಸಿದೆ.

ಕ್ರೀಡಾಂಗಣದಲ್ಲಿ ಸಂಭ್ರಮಾಚರಣೆ ಆರಂಭಕ್ಕೂ ಮುನ್ನ ಆಟಗಾರರನ್ನು ವಿಧಾನಸೌಧದ ಎದುರು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ ಸೇರಿದಂತೆ ಹಲವು ಸಚಿವರು ಸರ್ಕಾರದ ವತಿಯಿಂದ ಸನ್ಮಾನಿಸಿದ್ದರು. ರಾಜ್ಯಪಾಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಪಕ್ಷದ ವರಿಷ್ಠರೊಂದಿಗೆ ಚರ್ಚಿಸುವಿರಾ ಎಂಬುದಕ್ಕೆ, 'ಈಗ ಸಮಯವಿಲ್ಲ. ಎತ್ತಿನಹೊಳೆ ಯೋಜನೆ ಕುರಿತ ತುರ್ತು ಸಭೆಯಲ್ಲಿ ಭಾಗವಹಿಸಬೇಕಿರುವುದರಿಂದ ಬೆಂಗಳೂರಿಗೆ ವಾಪಸ್ ಆಗುತ್ತಿದ್ದೇನೆ. ರಾಜ್ಯದ ಬಾಕಿ ವಿಚಾರಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವರೊಂದಿಗೆ ಚರ್ಚಿಸಲು ಜೂನ್ 18ರಂದು ಮತ್ತೆ ಬರುತ್ತೇನೆ' ಎಂದು ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 9 – ಮೈಸೂರಿನಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಕಡು ಬಡವರಾದ ಬ್ರಾಹ್ಮಣ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ನಿಗದಿತ ಅರ್ಜಿ ನಮೂನೆಯನ್ನು ಶ್ರೀಮತಿ ನಂಜನಗೂಡು ಶಾರದಮ್ಮ ಸ್ಮಾರಕ ಧರ್ಮಸಂಸ್ಥೆ, ವಿಜಯನಗರ 2ನೇ ಹಂತ, ಮೈಸೂರು ಇಲ್ಲಿ ಪಡೆದು, ಜೂ. 10 ರೊಳಗೆ ಸಲ್ಲಿಸಲು ಕೋರಲಾಗಿದೆ.

ಉಳ್ಳಾಲದ ರೆಸಾರ್ಟ್‌ನ ಈಜುಕೊಳದಲ್ಲಿ ಮುಳುಗಿ ಮೃತಪಟ್ಟ ವಿದ್ಯಾರ್ಥಿನಿಯರ ಕುಟುಂಬಕ್ಕೆ ಪರಿಹಾರ ಮಂಜೂರಾತಿ



ಮಂಗಳೂರಿನ ಉಳ್ಳಾಲ ರೆಸಾರ್ಟ್‌ನ ಈಜುಕೊಳದಲ್ಲಿ ಸಾವನ್ನಪ್ಪಿದ ಮೈಸೂರಿನ ಮೂವರು ವಿದ್ಯಾರ್ಥಿಗಳ ಕುಟುಂಬಕ್ಕೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪರಿಹಾರ ಮಂಜೂರಾತಿ ಪತ್ರ ನೀಡಿದರು.

ಮೈಸೂರು, ಜೂ.9(ಬಿಎಲ್‌ಯು)– ಮಂಗಳೂರಿನ ಉಳ್ಳಾಲ ಬಳಿಯ ರೆಸಾರ್ಟ್‌ನ ಈಜುಕೊಳದಲ್ಲಿ ಮುಳುಗಿ ಸಾವನ್ನಪ್ಪಿದ ಮೈಸೂರಿನ ಮೂವರು ವಿದ್ಯಾರ್ಥಿಗಳ ಕುಟುಂಬಕ್ಕೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಇಂದು ಪರಿಹಾರ ಮಂಜೂರಾತಿ ಪತ್ರ ನೀಡಿದರು.

ಮೈಸೂರಿನ ಇಂಜಿನಿಯರಿಂಗ್ ವಿದ್ಯಾರ್ಥಿನಿಯರಾದ ವಿಜಯನಗರದ ಎನ್.ಕೀರ್ತನಾ (21), ಕುರುಬಾರ ಹಳ್ಳಿಯ ನಿಶಿತಾ (21) ಹಾಗೂ ರಾಮಾನುಜ ರಸ್ತೆಯ ಎಸ್.ಪಾರ್ವತಿ (20) ದುರಂತ ಸಾವಿಗೀಡಾಗಿದ್ದರು. ಕೂಲಿ ಮಾಡಿ ಇಂಜಿನಿಯರಿಂಗ್ ಓದಿಸಿದ್ದ ತಂದೆ ತಾಯಿಗಳಿಗೆ ಮಕ್ಕಳೇ ಆಧಾರವಾಗಿದ್ದರು. ಆದರೆ ಈಗ ಕುಟುಂಬ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಈ ವಿಚಾರವನ್ನು ಸೋಮಶೇಖರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಮಾನವೀಯತೆ ದೃಷ್ಟಿಯಿಂದ ಪರಿಹಾರ ನೀಡಲು ಸಮ್ಮತಿಸಿದ್ದರು.

ಇಂದು ಸೋಮಶೇಖರ್ ಅವರು ಮೂವರು ವಿದ್ಯಾರ್ಥಿನಿಯರ ಕುಟುಂಬಕ್ಕೆ ತಲಾ 2 ಲಕ್ಷದಂತೆ 6 ಲಕ್ಷ ರೂಪಾಯಿಗಳ ಮಂಜೂರಾತಿ ಪತ್ರ ವಿತರಣೆ ಮಾಡಿದರು.

ಇತ್ತೀಚಿಗೆ ಕೃಷಿ ಹೊಂಡ, ಈಜುಕೊಳ, ಕೆರೆ, ಬಾವಿ, ನದಿಯಲ್ಲಿ ಈಜಲು ಹೋದ ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಈ ಹಿನ್ನೆಲೆ ಪೋಷಕರು ಮಕ್ಕಳ ಬಗ್ಗೆ ನಿಗಾ ಇಡಬೇಕು ಎಂದು ಸೋಮಶೇಖರ್ ಇದೇ ವೇಳೆ ಸಲಹೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಸೋಮು, ಹರೀಶ್, ನಾಗಮಹದೇವ, ಅವಿನಾಶ್ ಉಪಸ್ಥಿತರಿದ್ದರು.

ವಿಶ್ವ ಪರಿಸರ ದಿನಾಚರಣೆ


ಸನ್ಮತಿ ಲೇಡಿಸ್ ಫೌಂಡೇಶನ್ ವತಿಯಿಂದ ಹೆಬ್ಬಾಳಿನ ಹರಿಯಲ್ಲಮ್ಮ ದೇವಸ್ಥಾನದ ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಶಾಸಕ ಹರೀಶ್‌ಗೌಡರ ಪತ್ನಿ ಶ್ರೀಮತಿ ಗೌರಿ, ಬೆಳಗೊಳದ ಸಮಗ್ರ ಕೃಷಿ ಸಾಧಕ ಬಿ.ಎನ್.ವಾಸು, ಮಂಚೇಗೌಡನಕೊಪ್ಪಲು ಮುಖಂಡ ರವಿ, ಗೋವಿಂದರಾಜು, ಕಲ್ಯಾಣಿ ಹೋಟೆಲ್ ಮಾಲೀಕರಾದ ಶ್ರೀಮತಿ ಗೀತಾ ರುಕ್ಮಾಂಗದ, ಸನ್ಮತಿ ಲೇಡೀಸ್ ಫೌಂಡೇಶನ್ ಪದಾಧಿಕಾರಿಗಳು, ಸದಸ್ಯರು ಈ ವೇಳೆ ಉಪಸ್ಥಿತರಿದ್ದರು.

ಪರೀಕ್ಷೆ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ

ಮೈಸೂರು, ಜೂ.9– ಜೂನ್ 9 ರಿಂದ 20 ರವರೆಗೆ ಮೈಸೂರು ನಗರದ 2 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ –3 ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ.

ಪರೀಕ್ಷಾ ಕೇಂದ್ರಗಳು: ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜು, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, ಪೀಪಲ್ಸ್ ಪಾರ್ಕ್ ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷೆ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 10 ಜೂನ್ 2025

ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ವ್ಯವಸ್ಥಿತವಾಗಿ ನಡೆಸಿ

ಜಿಲ್ಲಾಧಿಕಾರಿ ಡಾ.ಕುಮಾರ ಸೂಚನೆ



ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕುಮಾರ್

ಮಂಡ್ಯ, ಜೂ.9–ಯೋಗದಿಂದ ಆರೋಗ್ಯ ವೃದ್ಧಿಯಾಗುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಬೆಳೆಯುತ್ತದೆ. ಜಿಲ್ಲೆಯಲ್ಲಿ ಜೂನ್ 21 ರಂದು ನಡೆಯುವ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ವ್ಯವಸ್ಥಿತವಾಗಿ ನಡೆಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸೂಚನೆ ನೀಡಿದರು.

ಸೋಮವಾರ ನಗರದ ಜಿಲ್ಲಾ ತರಬೇತಿ ಸಂಸ್ಥೆಯ ಸಭಾಂಗಣದಲ್ಲಿ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಈ ಬಾರಿಯ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು "ಒಂದು ಭೂಮಿ ಒಂದು ಆರೋಗ್ಯ" ಘೋಷವಾಕ್ಯದಡಿ ಆಚರಿಸಲಾಗುತ್ತಿದೆ ಎಂದರು.

ಈ ಬಾರಿ "ಹಸಿರು ಯೋಗ" ಮತ್ತು ಯೋಗ ಧನುಷ್ ಕಾರ್ಯಕ್ರಮವನ್ನು ಸಹ ಆಯೋಜಿಸಬೇಕಿದ್ದು, ಹಸಿರು ಯೋಗವನ್ನು ಅರಣ್ಯ ಇಲಾಖೆಯ ಸಹಕಾರದೊಂದಿಗೆ ಯೋಗ ಮುಗಿದ ನಂತರ ಗಿಡ ನೆಡುವ ಮೂಲಕ ಆಯೋಜಿಸಿ ಎಂದರು.

ಯೋಗ ಧನುಷ್ 'Y Break Yoga App ಮೂಲಕ ಕೆಎಸ್ಆರ್‌ಟಿಸಿ ನೌಕರರಿಗೆ, ಕೈದಿಗಳಿಗೆ, ದಿವ್ಯಾಂಗರಿಗೆ, ವಾಣಿಜ್ಯ ಕೈಗಾರಿಕೆಗಳ ಕಾರ್ಮಿಕರು ಸೇರಿದಂತೆ ಹೆಚ್ಚಿನ ಜನರಿಗೆ ಯೋಗವನ್ನು ತಲುಪಿಸಲು 10–15 ನಿಮಿಷಗಳ ಯೋಗ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದರಲ್ಲಿ ಮದ್ದೂರು ಭಾಗದ ಕೈಗಾರಿಕಾ ಪ್ರದೇಶದಲ್ಲಿರುವ ಗಾರ್ಮೆಂಟ್ಸ್ ಕಾರ್ಮಿಕರಿಗೆ ವಿಶೇಷವಾಗಿ ಆಯೋಜಿಸಿ ಎಂದರು.

ಜೂನ್ 21 ರಂದು ಯೋಗಾಭ್ಯಾಸವನ್ನು ಪಿ.ಇ.ಟಿ ಮೈದಾನದಲ್ಲಿ ಬೆಳಿಗ್ಗೆ 7 ಗಂಟೆಯಿಂದ 7.45 ರವರೆಗೆ ನಿಗದಿತ ಸಮಯಕ್ಕೆ ನಡೆಯುವಂತೆ ಸಂಘಟಿಸಬೇಕು. ಬೆಳಿಗ್ಗೆ 6 ಗಂಟೆಗೆ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಎಲ್ಲರೂ ಆಗಮಿಸಬೇಕು. ಬೆಳಿಗ್ಗೆ 6.30 ಗಂಟೆಗೆ ವೇದಿಕೆ ಕಾರ್ಯಕ್ರಮ ಆರಂಭವಾಗುವ ರೀತಿ ಕಾರ್ಯಕ್ರಮವನ್ನು ಯೋಜಿಸಿ ಎಂದರು.

ಶಾಲಾ–ಕಾಲೇಜು ವಿದ್ಯಾರ್ಥಿಗಳು, ಹಾಸ್ಟೆಲ್ ವಿದ್ಯಾರ್ಥಿಗಳು, ಮಹಿಳಾ ಸಂಘಟನೆಗಳು, ಯೋಗ ಶಾಲೆಗಳು ಸೇರಿದಂತೆ 6000ಕ್ಕೂ ಹೆಚ್ಚಿನ ಜನರು ಯೋಗ ದಿನಾಚರಣೆಯಲ್ಲಿ ಭಾಗವಹಿಸುವ ರೀತಿ ಕಾರ್ಯಕ್ರಮ ಸಂಘಟಿಸಿ ಎಂದು ಹೇಳಿದರು.

ಐವರು ಯೋಗ ಶಿಕ್ಷಕರನ್ನು ಮೇಲುಸ್ತುವಾರಿಗಳಾಗಿ ನೇಮಿಸಿ ಅವರು ಯೋಗ ದಿನಾಚರಣೆಯಲ್ಲಿ ಭಾಗವಹಿಸುವವರಿಗೆ ಎರಡು ಅಥವಾ ಮೂರು ದಿನಗಳ ಕಾಲ ಪೂರ್ವಾಭ್ಯಾಸ ನೀಡಲಿ. ಇದರಿಂದ ಕಾರ್ಯಕ್ರಮ ಉತ್ತಮ ರೀತಿಯಲ್ಲಿ ಮೂಡಿ ಬರಲಿದೆ. ಕಾರ್ಯಕ್ರಮದ ದಿನದಂದು ದೈಹಿಕ ಶಿಕ್ಷಕರಿಗೆ ಜವಾಬ್ದಾರಿ ನೀಡಿ, ಯೋಗ ದಿನಾಚರಣೆಯಂದು ಸರಿಯಾದ ಕ್ರಮದಲ್ಲಿ ಸಾಲು ನಿಲ್ಲಿಸಲು ಸೂಚಿಸಿ ಎಂದು ತಿಳಿಸಿದರು.

ಪೊಲೀಸ್ ಇಲಾಖೆಯಿಂದ ಬಂದೋಬಸ್ತ್ ಕಲ್ಪಿಸಲಾಗುವುದು ಹಾಗೂ ಆರೋಗ್ಯ ಇಲಾಖೆಯಿಂದ ಆಂಬುಲೆನ್ಸ್ ಸೇವೆ, ಪ್ರಥಮ ಚಿಕಿತ್ಸೆ ಹಾಗೂ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಆಯುಷ್ ವೈದ್ಯಾಧಿಕಾರಿ ಡಾ.ಪುಷ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಮೂರ್ತಿ, ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ವಾರ್ತಾಧಿಕಾರಿ ಎಸ್.ಎಚ್.ನಿರ್ಮಲ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅಧಿಕಾರ ಇರಲಿ, ಇಲ್ಲದಿರಲಿ ಕ್ಷೇತ್ರದ ಜನರ ಸೇವೆಗೆ ಬದ್ಧ

ಮದ್ದೂರು ಶಾಸಕ ಉದಯ್ ಭರವಸೆ



ಬೆಳ್ಳಿ ಗದೆ ನೀಡುವ ಮೂಲಕ ಅಭಿಮಾನಿಗಳು ಹುಟ್ಟುಹಬ್ಬದ ಶುಭಾಶಯ ತಿಳಿಸಿದರು.

ಮದ್ದೂರು: ಅಧಿಕಾರ ಇರಲಿ, ಇಲ್ಲದಿರಲಿ ನನ್ನ ಜೀವನದ ಕೊನೆ ಉಸಿರುವ ತನಕ ಕ್ಷೇತ್ರದ ಜನರ ಸೇವೆಯನ್ನು ನಿರಂತರವಾಗಿ ಮಾಡುತ್ತೇನೆ ಎಂದು ಶಾಸಕ ಕೆ.ಎಂ.ಉದಯ್ ಹೇಳಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಶಾಸಕ ಕೆ.ಎಂ.ಉದಯ್ ಅವರ ಹುಟ್ಟುಹಬ್ಬದ ಅಂಗವಾಗಿ ಕೆ.ಎಂ.ಉದಯ್ ಅಭಿಮಾನಿಗಳ ಬಳಗದಿಂದ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸೈನಿಕರ ಕುಟುಂಬದವರಿಗೆ ಸನ್ಮಾನ ಕಾರ್ಯಕ್ರಮ ಹಾಗೂ ಖ್ಯಾತ ಗಾಯಕರಿಂದ ರಸಮಂಜರಿ ಕಾರ್ಯಕ್ರಮದಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡು ಮಾತನಾಡಿದರು.

ನಾನು ಶಾಸಕನಾಗಿ ಸರ್ಕಾರದಿಂದ ಜನರಿಗೆ ಅನುಕೂಲ ಕಲ್ಪಿಸುವ ಜತೆಗೆ, ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್‌ನಿಂದ ನಿರಂತರವಾಗಿ ಬಡವರ, ಆರ್ಥಿಕವಾಗಿ ಹಿಂದುಳಿದವರ, ದೀನದಲಿತ, ಅಲ್ಪಸಂಖ್ಯಾತರ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವರ್ಗದವರ ಪರವಾಗಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಜನರಿಗೆ ಅನುಕೂಲ ಕಲ್ಪಿಸುತ್ತಿದ್ದೇನೆ. ಅಧಿಕಾರ ಇರಲಿ, ಇಲ್ಲದಿರಲಿ ಸದಾ ನನ್ನ ಜನಸೇವೆ ಮುಂದುವರೆಯುತ್ತದೆ ಎಂದು ಭರವಸೆ ನೀಡಿದರು.

ತಿಮ್ಮದಾಸ್ ಗ್ರೂಪ್ ಮಾಲೀಕ ಸಿ.ಟಿ.ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಲುವರಾಜು ಮಾತನಾಡಿದರು. ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್, ಖ್ಯಾತ ಗಾಯಕ ಹೇಮಂತ್ ಸೇರಿದಂತೆ ಹಲವಾರು ಪ್ರಸಿದ್ಧ ಗಾಯಕರು ನಡೆಸಿಕೊಟ್ಟ ರಸಮಂಜರಿ ಕಾರ್ಯಕ್ರಮ ನೆರೆದಿದ್ದ ಜನರನ್ನು ರಂಜಿಸಿತು.

ವಿವಿಧ ಸಂಘಟನೆಗಳು ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಕೆ.ಎಂ.ಉದಯ್ ಅವರಿಗೆ ಭಾರಿ ಗಾತ್ರದ ಹೂವಿನ ಹಾರ ಹಾಕುವ ಮೂಲಕ ಅವರಿಗೆ ಹುಟ್ಟುಹಬ್ಬದ ಶುಭಾಶಯ ಹೇಳಿದರು.

ಸಮಾಜಸೇವಕಿ ವಿನುತಾ ಕೆ.ಎಂ.ಉದಯ್, ತಿಮ್ಮದಾಸ್ ಗ್ರೂಪ್ ಮಾಲೀಕ ಸಿ.ಟಿ.ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚಲುವರಾಜು, ರಾಜೀವ್, ಪುರಸಭಾ ಅಧ್ಯಕ್ಷೆ ಕೋಕಿಲಾ ಅರುಣ್, ಉಪಾಧ್ಯಕ್ಷ ಪ್ರಸನ್ನಕುಮಾರ್, ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ಕಿಸಾನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ದೇಶಹಳ್ಳಿ ಮೋಹನ್‌ಕುಮಾರ್, ಕೆ.ಸಿ.ಜೋಗಿಗೌಡ, ಪಿ.ಸಂದರ್ಶ, ಮನ್‌ಮುಲ್ ನಿರ್ದೇಶಕ ಹರೀಶ್ ಬಾಬು, ಗೊರವನಹಳ್ಳಿ ರಾಘವ, ಮುಖಂಡರಾದ ಬಸವರಾಜು, ರಾಮಕೃಷ್ಣ, ಕಂಠಿ ಸುರೇಶ್, ಶ್ರೀನಿವಾಸ್, ಮಮತಾ ಶಂಕರೇಗೌಡ, ಮಹದೇವಯ್ಯ, ಫೈರೋಜ್ ಇದ್ದರು.

ಹಿಂದಿನ ಸರ್ಕಾರ ನೀಡಿದ ಹಕ್ಕುಪತ್ರ ಸಿಂಧುವಲ್ಲ ಎಂಬ ಶಾಸಕರ ಹೇಳಿಕೆಯಿಂದ ಗ್ರಾಮಸ್ಥರಲ್ಲಿ ಗೊಂದಲ

2022ರಲ್ಲಿ ಅಂದಿನ ಕಂದಾಯ ಸಚಿವ ಆರ್.ಅಶೋಕ್ ವಿತರಿಸಿದ್ದ ಹಕ್ಕುಪತ್ರ

ಶ್ರೀರಂಗಪಟ್ಟಣ, ಜೂ.9– ಈ ಹಿಂದಿನ ಸರ್ಕಾರದಲ್ಲಿ ನೀಡಲಾಗಿದ್ದ ಹಕ್ಕುಪತ್ರಗಳು ಸಿಂಧುವಲ್ಲ ಎಂಬ ಶಾಸಕ ರಮೇಶ ಬಾಬು ಬಂಡಿಸಿದ್ದೇಗೌಡ ಅವರ ಹೇಳಿಕೆಯಿಂದ ಹಕ್ಕುಪತ್ರ ಪಡೆದು ಇ–ಸ್ವತ್ತಿಗಾಗಿ ಕಾಯ್ದು ಕುಳಿತಿದ್ದ ಕೆಆರ್‌ಎಸ್ ಹಾಗೂ ಮೊಗರಹಳ್ಳಿ ಮಂಟಿ ಗ್ರಾಮಗಳ ನಿವಾಸಿಗಳನ್ನು ಗೊಂದಲಕ್ಕೀಡು ಮಾಡುವ ಜೊತೆಗೆ ಅಧಿಕಾರಿಗಳು ಇಕ್ಕಟ್ಟಿಗೆ ಸಿಲುಕುವಂತಾಗಿದೆ.

ಕಳೆದ 2022ರ ಜು. 21 ರಂದು ಬಿಜೆಪಿ ಆಡಳಿತಾವಧಿಯಲ್ಲಿ ಅಂದು ಶಾಸಕರಾಗಿದ್ದ ರವೀಂದ್ರ ಶ್ರೀಕಂಠಯ್ಯ ಒತ್ತಾಯದ ಮೇರೆಗೆ ಸರ್ಕಾರದ ವತಿಯಿಂದ ಗೆಜೆಟ್ ನೋಟಿಫಿಕೇಷನ್ ಹೊರಡಿಸಿ, ತಾಲೂಕಿನ ಬೆಳಗೊಳ ಹೋಬಳಿ ವ್ಯಾಪ್ತಿಯ ಕೆಆರ್‌ಎಸ್ ಗ್ರಾಮದಲ್ಲಿ 750 ರಿಂದ 800, ಮೊಗರಹಳ್ಳಿ ಮಂಟಿ 300ಕ್ಕೂ ಹೆಚ್ಚು, ಹುಲಿಕೆರೆ 30 ಮಂದಿ, ಬೆಳಗೊಳ 30 ರಿಂದ 40 ಹಾಗೂ ಹೊಸ ಆನಂದೂರು ಗ್ರಾಮದಲ್ಲಿ 345 ಸೇರಿದಂತೆ ಇತರೆ ಗ್ರಾಮಗಳಲ್ಲಿ ಯಾವುದೇ ದಾಖಲೆಗಳಿಲ್ಲದೆ ನೂರಾರು ವರ್ಷಗಳಿಂದ ವಾಸಿಸುತ್ತಿದ್ದ ಸಾವಿರಕ್ಕೂ ಹೆಚ್ಚು ಮಂದಿಗೆ ಕಿಮ್ಮತ್ತು ಕಟ್ಟಿಸಿಕೊಂಡು ಹಕ್ಕುಪತ್ರಗಳನ್ನು ಸರ್ಕಾರ ವಿತರಿಸಿತ್ತು.

> ಆ ವೇಳೆ ಯಾವ ಮಾನದಂಡದ ಆಧಾರ ಮೇಲೆ ಅಥವಾ ನಿಯಮ ಪಾಲನೆ ಮಾಡಿ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ. ಈ ಬಗ್ಗೆ ತಹಸೀಲ್ದಾರ್ ಅವರಿಂದ ಪರಿಶೀಲಿಸಲಾಗುವುದು. ಕ್ರಮಬದ್ಧವಾಗಿ ಹಕ್ಕುಪತ್ರಗಳನ್ನು ವಿತರಿಸಿದ್ದರೆ ಮತ್ತೆ ವಿತರಿಸುವ ಪ್ರಶ್ನೆ ಬರುವುದಿಲ್ಲ.
> –ಜಿಲ್ಲಾಧಿಕಾರಿ ಡಾ. ಕುಮಾರ್

ಈ ಗ್ರಾಮಗಳ ಪೈಕಿ ಹುಲಿಕೆರೆ, ಬೆಳಗೊಳ ಹಾಗೂ ಹೊಸ ಆನಂದೂರು ಗ್ರಾಮಗಳ ನಿವಾಸಿಗಳಿಗೆ ಪಂಚಾಯಿತಿ ವತಿಯಿಂದ ಈಗಾಗಲೇ ಇ–ಸ್ವತ್ತು ನೀಡಲಾಗಿದೆ. ಆದರೆ ಕೆಆರ್‌ಎಸ್ ಹಾಗೂ ಮೊಗರಹಳ್ಳಿ ಮಂಟಿ ಗ್ರಾಮಗಳ ನಿವಾಸಿಗಳಿಗೆ ಈ ವರೆವಿಗೂ ಪಂಚಾಯಿತಿ ವತಿಯಿಂದ ಇ–ಸ್ವತ್ತು ಸೇರಿದಂತೆ ಯಾವುದೇ ದಾಖಲಾತಿಗಳನ್ನು ಮಾಡಿಕೊಟ್ಟಿರಲಿಲ್ಲ. ಇದರಿಂದಾಗಿ ಇವರು ಮೊದಲೇ ಆತಂಕಗೊಂಡಿದ್ದರು, ಜೊತೆಗೆ ಶಾಸಕರ ಹೇಳಿಕೆಯಿಂದಾಗಿ ಮುಂದೇನು ಎಂಬ ಚಿಂತೆಗೀಡು ಮಾಡಿದೆ.

ಈ ಹಿಂದೆ ಬಿಜೆಪಿ ಸರ್ಕಾರ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಹಕ್ಕುಪತ್ರಗಳನ್ನು ನೀಡಿದೆ. ಆದರೆ ಈಗ ಅದನ್ನು ಕಾಂಗ್ರೆಸ್ ಸರ್ಕಾರದವರು ಅಸಿಂಧು ಎನ್ನುತ್ತಿದ್ದಾರೆ. ಪ್ರತಿ ಬಾರಿ ಬದಲಾದ ಸರ್ಕಾರಗಳು ಇದೇ ಪ್ರವೃತ್ತಿ ಮುಂದುವರಿಸಿದರೆ ಹೇಗೆ ತಾನೆ ನಾವುಗಳು ಒಂದು ಸೂರು ನಿರ್ಮಿಸಿಕೊಂಡು, ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು ಸಾರ್ವಜನಿಕರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ.



ತಾಲೂಕಿನ ಕೆಆರ್‌ಎಸ್ ಗ್ರಾಮದಲ್ಲಿ ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದ ಆರ್.ಅಶೋಕ್ ಸ್ಥಳೀಯ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿದ್ದ ಚಿತ್ರ. ಈ ವೇಳೆ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ, ಸ್ಥಳೀಯ ಶಾಸಕ ರವೀಂದ್ರ ಶ್ರೀಕಂಠಯ್ಯ, ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳು ಸೇರಿದಂತೆ ಇತರೆ ಅಧಿಕಾರಿಗಳು ಇರುವುದು.

> 2 ವರ್ಷಗಳು ಕಳೆದರು ಕ್ಷೇತ್ರದಾದ್ಯಂತ ಯಾವುದೇ ಗ್ರಾಮಗಳ ಅಭಿವೃದ್ಧಿ ಹಾಗೂ ಹೊಸ ರಸ್ತೆಗಳು ಸಹ ಕಂಡುಬಂದಿಲ್ಲ, ಸಾರ್ವಜನಿಕರು ಹಿಡಿ ಶಾಪ ಹಾಕುತ್ತಿದ್ದಾರೆ. ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು ಮುಂದಾಗುವ ಬದಲು, ಈ ಹಿಂದೆ ಬಡವರಿಗೆ ನೀಡಲಾಗಿರುವ ಹಕ್ಕುಪತ್ರಗಳು ಸರಿಯಿಲ್ಲ ಎನ್ನುತ್ತಿರುವುದು ಜನನಾಯಕರಿಗೆ ತರವಲ್ಲ. –ರವಿ ಶಂಕರೇಗೌಡ, ಗ್ರಾಮ ಪಂಚಾಯತ್ ಸದಸ್ಯ

> ರಮೇಶಬಾಬು ಅವರ ಈ ಕುಟುಂಬಕ್ಕೆ 35 ವರ್ಷಗಳಿಂದ ಅಧಿಕಾರ ಸಿಕ್ಕಿದ್ದರೂ ಸಹ ಯಾವೊಬ್ಬ ಬಡ ನಿವಾಸಿಗಳಿಗೆ ಹಕ್ಕುಪತ್ರ ನೀಡಿರಲಿಲ್ಲ. ಆದರೆ ರವಿಂದ್ರ ಶ್ರೀಕಂಠಯ್ಯ ಅವರು ಮಾಡಿಕೊಟ್ಟಿದ್ದಾರೆ. ಅದನ್ನು ಸಹಿಸಲಾಗದೆ, ಬಡವರಿಗೆ ನೀಡಿರುವ ಹಕ್ಕುಪತ್ರಗಳನ್ನು ತನಿಖೆಗೆ ವಹಿಸಿರುವ ಏಕೈಕ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ. ಅವರ ಈ ಹೇಳಿಕೆಗೆ ಯಾವುದೇ ತಿರುಳಿಲ್ಲ. –ನಾಗರಾಜು, ದಲಿತ ಮುಖಂಡ

ಶ್ರೀರಂಗಪಟ್ಟಣದಲ್ಲಿ ವಿತರಿಸಲಾಗಿದ್ದ ಹಕ್ಕುಪತ್ರಗಳ ಬಗ್ಗೆ ತನಿಖೆ ನಡೆಸುವಂತೆ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ ಕಳೆದ ಬೆಳಗಾವಿ ಅಧಿವೇಶನದಲ್ಲಿ ಚರ್ಚೆ ನಡೆಸಿದ್ದರಿಂದ ಈಗಿನ ಜಿಲ್ಲಾಧಿಕಾರಿಗಳು ತಾಲೂಕು ಮಟ್ಟದ ಅಧಿಕಾರಿಗಳ ಕಮಿಟಿ ರಚಿಸಿ, ನಿವಾಸಿಗಳಿಗೆ ಯಾವುದೇ ನೋಟಿಸ್ ಜಾರಿ ಮಾಡದೆ ಎರಡೆರಡು ಬಾರಿ ಅಳತೆ ಸಹ ಮಾಡಲಾಗಿದೆ. ಈ ಕಮಿಟಿ ಅಳತೆಯಲ್ಲಿ ವ್ಯತ್ಯಾಸ ಇರುವುದಾಗಿ ವರದಿ ನೀಡಿದೆ.

ದೊಡ್ಡಬ್ಯಾಡರಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಕೆ.ರವಿರಾಜ್



ಪಾಂಡವಪುರವ, ಜೂ.9– ತಾಲೂಕಿನ ದೊಡ್ಡಬ್ಯಾಡರಳ್ಳಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಅಗಟಹಳ್ಳಿ ಕೆ.ರವಿರಾಜ್ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಭಿನಂದಿಸಿದರು. ನಂತರ ಅವರು ಮಾತನಾಡಿ, ಗ್ರಾಪಂ ಅಧ್ಯಕ್ಷರಾದವರಿಗೆ ಜವಾಬ್ದಾರಿ ಹೆಚ್ಚಾಗಿರುತ್ತದೆ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ಸದಸ್ಯರ ಜತೆಗೂಡಿ ಕೆಲಸ ಮಾಡಬೇಕು, ಗ್ರಾಪಂ ವ್ಯಾಪ್ತಿಯ ಹಳ್ಳಿಗಳಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿಕೊಡುವ ಮೂಲಕ ಜನರ ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಡಿ.ಎನ್.ರವಿ, ಮನು, ನಿಂಗರಾಜು, ಎಸ್.ಆನಂದ್, ಚಂದನ್, ನಂಜುಂಡಪ್ಪ, ನಿಂಗೇಗೌಡ, ಸಂತೋಷ್, ನಿಂಗರಾಜು, ಮನು, ಕುಮಾರ್, ರಾಜೇಶ್ ಇದ್ದರು.

ಅಪರಿಚಿತ ವಾಹನ ಡಿಕ್ಕಿ: ಓರ್ವ ಸಾವು, ಮತ್ತೋರ್ವ ಗಂಭೀರ



ಮದ್ದೂರು: ಬೈಕಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದು ಓರ್ವ ಮೃತಪಟ್ಟು, ಇನ್ನೊಬ್ಬ ತೀವ್ರವಾಗಿ ಗಾಯಗೊಂಡಿರುವ ಘಟನೆ ಭಾನುವಾರ ರಾತ್ರಿ ಪಟ್ಟಣದ ಶಿವಪುರದ ಸತ್ಯಾಗ್ರಹ ಸೌಧದ ಬಳಿ ಜರುಗಿದೆ.

ತಾಲೂಕಿನ ಕದಲೂರು ಗ್ರಾಮದ ಬಾಲುಗೌಡ (26) ಮೃತ ವ್ಯಕ್ತಿಯಾಗಿದ್ದು, ಬೈಕ್ ಚಾಲನೆ ಮಾಡುತ್ತಿದ್ದ ಜೀವನ್‌ಗೌಡ ತೀವ್ರವಾಗಿ ಗಾಯಗೊಂಡು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಇವರಿಬ್ಬರು ಬೈಕ್‌ನಲ್ಲಿ ಕಾರ್ಯ ನಿಮಿತ್ತ ಮದ್ದೂರಿಗೆ ಆಗಮಿಸಿ ವಾಪಸ್ ಕದಲೂರು ಗ್ರಾಮಕ್ಕೆ ತೆರಳುವಾಗ ಶಿವಪುರದ ಸತ್ಯಾಗ್ರಹ ಸೌಧದ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಈ ಘಟನೆ ಸಂಭವಿಸಿದೆ.

ಪಟ್ಟಣದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ದೆಹಲಿಗೆ ಬುಲಾವ್

ವತಿಯಿಂದ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಲಾಗಿತ್ತು. ಇತ್ತೀಚೆಗೆ ರಾಜ್ಯದಲ್ಲಿ ನಡೆದಿರುವ ಕಹಿ ಘಟನೆಗಳಿಗೂ, ನನಗೂ ಸಂಬಂಧ ಇಲ್ಲ. ನನ್ನ ಇಲಾಖೆಯ ಪ್ರಮುಖ ನಿರ್ಧಾರಗಳನ್ನು ಪ್ರಮುಖ ಆಡಳಿತಗಾರರೊಬ್ಬರ ಪುತ್ರ ತೆಗೆದುಕೊಳ್ಳುತ್ತಿದ್ದಾರೆ. ನಾನು ಈ ವಿಷಯದಲ್ಲಿ ನಿಸ್ಸಹಾಯಕ ಎಂದಾಗ, ಇಂತಹ ವಿಷಯಗಳನ್ನು ತಮ್ಮ ಗಮನಕ್ಕೆ ಇದುವರೆಗೆ ಏತಕ್ಕೆ ತರಲಿಲ್ಲ ಎಂದು ವೇಣುಗೋಪಾಲ್ ಪ್ರಶ್ನಿಸಿದ್ದಾರೆ. ಮಂಗಳೂರು ಘಟನೆಗೆ ಸಂಬಂಧಿಸಿದಂತೆಯೂ ಅಲ್ಲಿನ ಅಲ್ಪಸಂಖ್ಯಾತ ಮುಖಂಡರು ಗೃಹ ಸಚಿವರ ವಿರುದ್ಧ ನೀಡಿರುವ ದೂರಿನ ಬಗ್ಗೆಯೂ ಸಮಜಾಯಿಷಿ ಪಡೆದಿದ್ದಾರೆ.

ಅಲ್ಪಸಂಖ್ಯಾತ ಸಂಘಟನೆಗಳು ಗೃಹ ಸಚಿವರನ್ನು ಸಂಪುಟದಿಂದ ಕೈಬಿಡಬೇಕು. ಆರ್‌ಎಸ್‌ಎಸ್ ಕೈಗೊಂಬೆಯಾಗಿರುವ ಅಧಿಕಾರಿಗಳನ್ನು ಎತ್ತಂಗಡಿ ಮಾಡಬೇಕು. ಇಲ್ಲವಾದರೆ ನಾವು ಕಾಂಗ್ರೆಸ್‌ನಿಂದ ದೂರ ಉಳಿಯುವುದಾಗಿ ಎಐಸಿಸಿಗೆ ದೂರು ನೀಡಿದ್ದವು. ದೂರಿನಲ್ಲಿ ಕೇರಳದ ಪ್ರಮುಖ ಮುಖಂಡರುಗಳೂ ಇದ್ದು, ಈ ಹಿನ್ನೆಲೆಯಲ್ಲಿ ಅದರಲ್ಲೂ ವೇಣುಗೋಪಾಲ್, ಈ ವಿಷಯವನ್ನು ಗಂಭಿರವಾಗಿ ಪರಿಗಣಿಸಿದ್ದಾರೆ.

ವರಿಷ್ಠರು ಜೂನ್ 10ರಂದು ದೆಹಲಿಗೆ ಬರುವಂತೆ ಸೂಚಿಸಿದ ಬೆನ್ನಲ್ಲೇ ನಿನ್ನೆ ಮುಖ್ಯಮಂತ್ರಿ ಅವರು ಕಾವೇರಿ ನಿವಾಸಕ್ಕೆ ಶಿವಕುಮಾರ್ ಹಾಗೂ ಡಾ.ಪರಮೇಶ್ವರ್ ಅವರನ್ನು ಕರೆಸಿಕೊಂಡು ಸುದೀರ್ಘ ಚರ್ಚೆ ಮಾಡಿದ್ದರು.

ಸತ್ಯಕ್ಕೆ ದೂರವಾದದ್ದು

ಎನಿಸುವುದಿಲ್ಲ. ಯಾರಿಗೂ ಶೋಭೆ ತರೋದಿಲ್ಲ, ನನ್ನನ್ನೇ ಕೇಳಿ, ನಾನು ಉತ್ತರ ಕೊಡುತ್ತೇನೆ ಎಂದು ಹೇಳಿದರು. ನನ್ನ ಪತ್ನಿಯ ಬಳಿಯೂ ನಾನು ರಾಜಕೀಯದ ಬಗ್ಗೆ ಮಾತನಾಡುವುದಿಲ್ಲ. ನಾನೇ ನನಗೆ ಖಾತೆ ಬದಲಾಯಿಸಿ ಎಂದು ಸಿಎಂ ಅವರ ಬಳಿ ಹೇಳಿದ್ದೇನೆಂದು ಯಾರು ಹೇಳಿದ್ರು, ಮಾಧ್ಯಮಗಳಲ್ಲಿ 2–3 ದಿನದಿಂದ ಸುದ್ದಿ ಬರುತ್ತಿದೆ. ಈಗ ಬಂದು ಸ್ಪಷ್ಟನೆ ಕೊಡಿ ಎಂದರೆ ಹೇಗೆ? ದಯಮಾಡಿ, ಈ ರೀತಿ ಮಾಡ್ಬೇಡಿ. ನಮ್ಮ ಅಭಿಮಾನಿಗಳು, ಮತದಾರರು ಇದ್ದಾರೆ. ಅವರೆಲ್ಲಾ ಏನೆಂದುಕೊಳ್ಳುತ್ತಾರೆ. ಏನೇ ಇದ್ದರೂ ನನ್ನನ್ನ ಕೇಳಿ, ನಾನು ಯಾರ ಬಳಿಯೂ ಆ ಖಾತೆ, ಈ ಖಾತೆ ಬೇಕು ಎಂದು ನಾನು ಯಾವಾಗಲೂ ಕೇಳಿಲ್ಲ. ಖಾತೆ ಬದಲಾವಣೆ ಬಗ್ಗೆ ಸಿಎಂ ಬಳಿ ಏನನ್ನು ಹೇಳಿಕೊಂಡಿಲ್ಲ, ಇದು ಸತ್ಯಕ್ಕೆ ದೂರವಾದುದ್ದು, ಇದು ಸುಳ್ಳು. ಇದನ್ನ ಗಣನೆಗೆ ತೆಗೆದುಕೊಳ್ಳಬಾರದು ಎಂದು ಸ್ಪಷ್ಟನೆ ನೀಡಿದರು.

ಬೆಂಗಳೂರು ಕಾಲ್ತುಳಿತ ಘಟನೆ ಕುರಿತು ಮಾತನಾಡಿ, ಇಂತಹ ಘಟನೆ ಆಗಬಾರದಿತ್ತು. ಇದಕ್ಕೆ ಎಲ್ಲರೂ ನೋವು ಅನುಭವಿಸುತ್ತಿದ್ದೇವೆ. ಇದು ಒಂದು ದೊಡ್ಡ ಸವಾಲು, ಇದನ್ನ ಎದುರಿಸಬೇಕು ಅಷ್ಟೇ. ಇದೇ ವೇಳೆ ಕಾಲ್ತುಳಿತ ಪ್ರಕರಣದಲ್ಲಿ ಪೊಲೀಸರ ಸಲಹೆ ಮೀರಿಗೆ ಕಾರ್ಯಕ್ರಮ ಮಾಡಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿ, ಈ ಬಗ್ಗೆ ತನಿಖೆ ನಡೆಯುತ್ತಿದೆ. ಈ ಹಂತದಲ್ಲಿ ನಾನು ಏನೇ ಹೇಳಿದರೂ ಅದು ತನಿಖೆಯ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಈಗಲೇ ನಾನು ಏನನ್ನೂ ಹೇಳುವುದಿಲ್ಲ ಎಂದರು.

ಸಾಧನೆ ಶೂನ್ಯ

ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಿದ ಗ್ಯಾರಂಟಿ ಯೋಜನೆಯಿಂದ ದಿವಾಳಿತನ ನೋಡಬೇಕಾಗುತ್ತದೆ ಎಂದು ಗೇಲಿ ಮಾಡಿದರು. ಆದರೆ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲೇ ನಮ್ಮ ಗ್ಯಾರಂಟಿ ಯೋಜನೆಯನ್ನು ಕಾಪಿ ಮಾಡಿದರು. ನಮ್ಮ ಸರ್ಕಾರವನ್ನು ಟೀಕಿಸುವ ಮೊದಲು ಬಿಜೆಪಿ ನಾಯಕರು ನನ್ನ ಈ ಪ್ರಶ್ನೆಗಳಿಗೆ ಉತ್ತರ ನೀಡಲಿ ಎಂದು ಸವಾಲು ಹಾಕಿದರು. ನರೇಂದ್ರ ಮೋದಿ ಸರ್ಕಾರಕ್ಕೆ ಮಾಧ್ಯಮಗಳು ಹೆಚ್ಚು ಪ್ರಚಾರ ನೀಡಿವೆ. ಇದರಿಂದ ಈ ಸರ್ಕಾರ ಜೀವಂತವಾಗಿದೆ. ಈ ಸರ್ಕಾರದ ಅಭಿವೃದ್ಧಿ ಏನೇನು ಇಲ್ಲ ಎಂದು ದೂರಿದರು.

ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು

ಸರ್ಕಾರವನ್ನು ಒದಗಿಸಿದ್ದಾರೆ ಎಂದರು. ಮೋದಿ ಸರ್ಕಾರ ತೆಗೆದುಕೊಂಡ ದಿಟ್ಟ ನಿರ್ಧಾರಗಳಲ್ಲಿ 370ನೇ ವಿಧಿ ರದ್ದತಿ, ತ್ರಿವಳಿ ತಲಾಖ್ ರದ್ದತಿ, ವಕ್ಫ್ ತಿದ್ದುಪಡಿ, ನೋಟು ರದ್ದತಿ, ಮಹಿಳಾ ಮೀಸಲಾತಿ ಮಸೂದೆ ಸೇರಿವೆ ಎಂದು ನಡ್ಡಾ ಉಲ್ಲೇಖಿಸಿದರು. ಪ್ರಧಾನಿ ಮೋದಿ ಜೂನ್ 9, 2024ರಂದು 3ನೇ ಅವಧಿಗೆ ಪ್ರಮಾಣವಚನ ಸ್ವೀಕರಿಸಿದರು. ಮೋದಿ ಸರ್ಕಾರವು ತನ್ನ 3ನೇ ಅವಧಿಯ ಮೊದಲ ವಾರ್ಷಿಕೋತ್ಸವ ಮತ್ತು ಸೋಮವಾರ ಒಟ್ಟಾರೆಯಾಗಿ 11ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಕೇಂದ್ರ ಸರ್ಕಾರದ ವಿದೇಶಾಂಗ ನೀತಿ ಮತ್ತು ಆಪರೇಷನ್ ಸಿಂಧೂರ್ ಬಗ್ಗೆ ಟೀಕಿಸಿದ್ದಕ್ಕಾಗಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಟೀಕಿಸಿದ ಅವರು, ಅವರು ಬೇಜವಾಬ್ದಾರಿ ವಿರೋಧ ಪಕ್ಷದ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ದೇವರು ಅವರಿಗೆ ಬುದ್ಧಿವಂತಿಕೆಯನ್ನು ನೀಡಲಿ ಎಂದು ಹೇಳಿದರು.

ಶೀತಲ ಸಮರಕ್ಕೆ ನಾಂದಿ

ಪೊಲೀಸ್ ಅಧಿಕಾರಿಗಳ ಅಮಾನತು ನಂತರ ಐಪಿಎಸ್ ಅಧಿಕಾರಿಗಳ ಕೂಟ ಈ ಸಂಬಂಧ ಸಭೆ ಸೇರಿ ಚರ್ಚಿಸಿದೆ. ಅಂದಿನ ಸಭೆಯಲ್ಲೇ ಘಟನೆಗೂ ಮುಂಚಿನ ಈ ಎಲ್ಲಾ ಮಾಹಿತಿಗಳು ಹೊರಬಿದ್ದಿದೆ. ಸಭೆಯಲ್ಲಿ ವ್ಯಕ್ತವಾದ ಮಾಹಿತಿಯಂತೆ, ಪೊಲೀಸ್ ಅನುಮತಿ ನಿರಾಕರಣೆ ಮಾಡಿದಾಗಲೂ, ಹಿರಿಯ ಐಎಎಸ್ ಅಧಿಕಾರಿಯೊಬ್ಬರಿಂದ ಅನುಮತಿಗೆ ಒತ್ತಡ ಬಂದಿತ್ತು ಮುಂಜಾನೆಯಿಂದಲೇ ಐಪಿಎಲ್ ಟ್ರೋಫಿ ಗೆದ್ದ ಸೆಲೆಬ್ರೇಷನ್‌ಗೆ ಪರ್ಮಿಶನ್ ಪಡೆಯುವ ಕಸರತ್ತು ಶುರುವಾಗಿತ್ತು. ಐಎಎಸ್ ಅಧಿಕಾರಿ ಸಹೋದರ ಖಾಸಗಿ ಈವೆಂಟ್ ಮ್ಯಾನೇಜ್ಮೆಂಟ್ ಸಂಸ್ಥೆ ಮುಖ್ಯಸ್ಥ, ಈ ಹಿನ್ನೆಲೆಯಲ್ಲಿ ಸೆಲೆಬ್ರೇಷನ್ ಪ್ಲ್ಯಾನ್ ಮಾಡಿದರು.

ಆರ್‌ಸಿಬಿ ವ್ಯವಸ್ಥಾಪಕರಿಂದಲೂ ಸೆಲೆಬ್ರೇಷನ್‌ಗೆ ಮುಂಜಾನೆ 3 ಗಂಟೆಗೆ ಒಪ್ಪಿಗೆ ಹಾಗೂ ಖಾಸಗಿ ಕಂಪನಿಗೆ ಈವೆಂಟ್ ನಡೆಸಲು ಒಪ್ಪಿಗೆ ಕೊಡಲಾಯಿತು.

ಬಳಿಕ ಈವೆಂಟ್ ಮ್ಯಾನೇಜ್ಮೆಂಟ್‌ನಿಂದ ಸರ್ಕಾರದ ಅನುಮತಿಗೆ ಕಸರತ್ತು ನಡೆಯಿತು, ಆಗ ಐಎಎಸ್ ಅಧಿಕಾರಿ ಸಹೋದರ ಮುಖ್ಯಮಂತ್ರಿ ಆಪ್ತರನು ಸಂಪರ್ಕಿಸಿ, ಪರ್ಮಿಶನ್ ಕೊಟ್ಟೇ ಕೊಡಿಸುತ್ತೇವೆ ಎಂಬ ಮಾತು ಪಡೆದರು.

ಇದಾದ ಬಳಿಕ ಸೆಲೆಬ್ರೇಷನ್ ಕುರಿತು ಆರ್‌ಸಿಬಿ ಆಡಳಿತ ಮಂಡಳಿ ಟ್ವೀಟ್ ಮಾಡಿತು. ಅಧಿಕೃತ ಅನುಮತಿ ಸಿಗದಿದ್ದಾಗ, ಪೊಲೀಸ್ ಅನುಮತಿ ಬಗ್ಗೆ ತಲೆ ಕೆಡಿಸಿಕೊಳ್ಳದೆ ವಿಧಾನಸೌಧದ ಮುಂದೆ ಕಾರ್ಯಕ್ರಮ ಆಯೋಜನೆ ಸಿದ್ಧತೆ ನಡೆಯಿತು. ಟ್ವೀಟ್ ಮಾಡಿಯಾಗಿದೆ, ಅನುಮತಿ ಕೊಡದಿದ್ದರೆ ಫ್ಯಾನ್ಸ್ ಆಕ್ರೋಶ ಎದುರಿಸಬೇಕಾಗುತ್ತದೆ ಎಂಬುದು ಐಎಎಸ್ ಅಧಿಕಾರಿ ಸಮಜಾಯಿಷಿ. ಅಂತೂ ವಿಧಾನಸೌಧದ ಮುಂದೆ ಸನ್ಮಾನ ಏರ್ಪಡಿಸಿದ್ದ ವೇಳೆ, ಒಬ್ಬ ಶಾಸಕ ಹಾಗೂ ಕಾರ್ಯಕ್ರಮ ನಿರೂಪಕರು ಕ್ರೀಡಾಭಿಮಾನಿಗಳನ್ನು ಉದ್ದೇಶಿಸಿ, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸನ್ಮಾನ ಮಾತ್ರ ಸೆಲೆಬ್ರೇಷನ್ ಏನಿದ್ದರೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎಂಬ ಮೈಕ್ ಅನೌನ್ಸ್ಮೆಂಟ್ ಮಾಡಲಾಯಿತು.

ಡಿಪಿಎಆರ್ ಕಾರ್ಯದರ್ಶಿ ಸಹ ಕ್ರೀಡಾಂಗಣದಲ್ಲಿ ಸೆಲೆಬ್ರೇಷನ್, ಇಲ್ಲಿ ಸರ್ಕಾರದ ಸನ್ಮಾನ ಎಂದು ಹೇಳಿಕೆ ಕೊಟ್ಟರು. ಪೊಲೀಸ್ ಅಧಿಕಾರಿಗಳಷ್ಟೇ ಹೊಣೆ ಏಕೆ, ಎಎಎಸ್ ಅಧಿಕಾರಿಗಳಿಬ್ಬರ ತಪ್ಪು ಕಾಣಿಸುತ್ತಿಲ್ಲವೆ ಎಂಬ ಪ್ರಶ್ನೆ ಎದುರಾಯಿತು. ಅನುಮತಿ ಕೊಡಿಸಿದವರ ವಿರುದ್ಧವೂ ಕ್ರಮ ಆಗಲೇಬೇಕು ಎಂದು ಐಪಿಎಸ್ ಅಧಿಕಾರಿಗಳು ಪಟ್ಟು ಹಿಡಿದರು. ಭದ್ರತೆ ಕಷ್ಟ ಅಂತ ಹೇಳಿದ ಮೇಲೂ ಪೊಲೀಸ್ ಇಲಾಖೆ ಸಲಹೆ ನಿರ್ಲಕ್ಷ್ಯ ಮಾಡಿದ ಇಬ್ಬರು ಐಎಎಸ್ ಅಧಿಕಾರಿಗಳು ಹಾಗೂ ಐಪಿಎಸ್ ಅಧಿಕಾರಿಗಳ ಶೀತಲ ಸಮರದ ನಡುವೆ ರಾಜ್ಯ ಸರ್ಕಾರ ಇಕ್ಕಟ್ಟಿನ ಪರಿಸ್ಥಿತಿಗೀಡಾಗಿದೆ.

ಚಿನ್ನಸ್ವಾಮಿ ಸ್ಟೇಡಿಯಂ ಸ್ಥಳಾಂತರಕ್ಕೆ ಚಿಂತನೆ

ಮಾಡಲು ಚಿಂತನೆ ನಡೆದಿದೆ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತದಿಂದ 11 ಮಂದಿ ಸಾವನ್ನಪ್ಪಿದರು. ಈ ಘಟನೆ ನಂತರ ಭವಿಷ್ಯದಲ್ಲಿ ಇಂತಹ ದುರ್ಘಟನೆ ಸಂಭವಿಸದಂತೆ ಸ್ಟೇಡಿಯಂ ಅನ್ನು ಬೇರೆಡೆ ಸ್ಥಳಾಂತರ ಮಾಡಬೇಕೆಂಬ ಕೂಗು ಕೇಳಿ ಬಂದಿದೆ.

ಚಿನ್ನಸ್ವಾಮಿ ಸ್ಟೇಡಿಯಂ ಬೆಂಗಳೂರಿನ ಹೃದಯ ಭಾಗದಲ್ಲಿದೆ. ಇಲ್ಲಿ ಆಗಾಗ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿ, ರಣಜಿ ಪಂದ್ಯಾವಳಿ ಸೇರಿದಂತೆ ವಿವಿಧ ಹಂತದ ಕ್ರಿಕೆಟ್ ಪಂದ್ಯಗಳು ನಡೆಯುತ್ತಿರುತ್ತವೆ. ಸ್ಟೇಡಿಯಂ ಸಂಪರ್ಕಿಸುವ ರಸ್ತೆಗಳು ಕಿರಿದಾಗಿರುವ ಕಾರಣ ಕ್ರಿಕೆಟ್ ಪಂದ್ಯಾವಳಿ ವೇಳೆ ಟ್ರಾಫಿಕ್ ಜಾಮ್ ಆಗುತ್ತಿವೆ. ಸ್ಟೇಡಿಯಂ ಬಳಿ ಆಗುವ ಟ್ರಾಫಿಕ್ ಜಾಮ್ ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಕಸ್ತೂರಬಾ ರಸ್ತೆ, ಹೈಕೋರ್ಟ್ ರಸ್ತೆ, ವಿಧಾನಸೌಧ ರಸ್ತೆ, ಇನ್ಫೆಂಟ್ರಿ ರಸ್ತೆ, ಕ್ವೀನ್ಸ್ ರಸ್ತೆಗಳ ವಾಹನ ಸಂಚಾರದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಈ ಹಿನ್ನೆಲೆ ವಿಶಾಲವಾದ ಪ್ರದೇಶಕ್ಕೆ ಚಿನ್ನಸ್ವಾಮಿ ಸ್ಟೇಡಿಯಂ ಸ್ಥಳಾಂತರ ಮಾಡಬೇಕೆಂಬ ಒತ್ತಾಯ ಮೊದಲಿನಿಂದಲೂ ಕೇಳಿ ಬಂದಿತ್ತು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಯಿಂದ ಈ ವಿಷಯ ಮತ್ತೆ ಮುನ್ನಲೆಗೆ ಬಂದಿದೆ.

ಆ.15ರಿಂದ ಪ್ಲಾಸ್ಟಿಕ್ ಮುಕ್ತ ದೇವಾಲಯ

ಮುಜರಾಯಿ ವ್ಯಾಪ್ತಿಯ ದೇವಾಲಯಗಳ ಮಾಹಿತಿಯನ್ನು ಮೂರು ತಿಂಗಳ ಒಳಗೆ ಕೊಡಬೇಕು. ಅಷ್ಟರಲ್ಲಿ ಬಾಕಿ ಇರುವ 20 ಸಾವಿರ ಎಕರೆ ದೇವಾಲಯ ಜಮೀನು ಇಂಡೀಕರಣ ಆಗಬೇಕು. ಗ್ರಾಮಾಂತರ ಮತ್ತು ನಗರ ಭಾಗದಲ್ಲಿ ಇರುವ ಮುಜರಾಯಿ ದೇವಾಲಯಗಳ ಆಸ್ತಿಗಳನ್ನು ಪ್ರತ್ಯೇಕ ಸರ್ವೆ ಮಾಡಬೇಕು.

ದೇವಸ್ಥಾನದ ಹೆಸರಿನಲ್ಲಿ ಖಾತೆ, ಆಸ್ತಿ ಪತ್ರ ದಾಖಲೆಗಳು ಸರಿಯಾಗಿ ಇರದಿದ್ದರೆ ಎಲ್ಲಾ ದೇವಾಲಯದ ಜಾಗ ಸರ್ವೆ ಮಾಡಿ ನೋಟಿಫಿಕೇಶನ್ ಮಾಡಲು ಸೂಚಿಸಲಾಗಿದೆ. ಅರ್ಚಕರಿಗೆ ನೇರ ವರ್ಗಾವಣೆ ಮೂಲಕ ತಸ್ತೀಕ್ ನೀಡಲು ಕ್ರಮ ಕೈಗೊಂಡಿದ್ದು, ಈಗ 25 ಸಾವಿರ ಅರ್ಚಕರ ಪೈಕಿ 14 ಸಾವಿರ ಅರ್ಚಕರು ಮಾಹಿತಿ ಕೊಟ್ಟಿದ್ದಾರೆ. ಉಳಿದವರು ಬೇಗ ಮಾಹಿತಿ ಕೊಟ್ಟರೆ ಅವರಿಗೂ ಡಿಬಿಟಿ ಮೂಲಕ ತಸ್ತೀಕ್ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಅಮಾನತು ಪ್ರಶ್ನಿಸಿ ಸಿಎಟಿ ಮೊರೆ ಹೋದ ಐಪಿಎಸ್ ಅಧಿಕಾರಿ ವಿಕಾಶ್‌ಕುಮಾರ್



ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಅಮಾನತುಗೊಂಡ ಐವರು ಅಧಿಕಾರಿಗಳಲ್ಲಿ ಒಬ್ಬರಾದ ಹಿರಿಯ ಐಪಿಎಸ್ ಅಧಿಕಾರಿ ವಿಕಾಶ್ ಕುಮಾರ್, ಅವರು ತಮ್ಮ ಅಮಾನತು ಪ್ರಶ್ನಿಸಿ ಕೇಂದ್ರ ಆಡಳಿತ ನ್ಯಾಯ ಮಂಡಳಿ(ಸಿಎಟಿ)ಗೆ ಅರ್ಜಿ ಸಲ್ಲಿಸಿದ್ದಾರೆ.

ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೂ.5ರಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ್, ಬೆಂಗಳೂರು ಕೇಂದ್ರ ವಿಭಾಗದ ಡಿಸಿಪಿ ಎಚ್.ಟಿ.ಶೇಖರ್, ಬೆಂಗಳೂರು ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಶ್‌ಕುಮಾರ್, ಎಸಿಪಿ ಬಾಲಕೃಷ್ಣ, ಕಬ್ಬನ್‌ಪಾರ್ಕ್ ಇನ್ಸ್‌ಪೆಕ್ಟರ್ ಗಿರೀಶ್ ಎ.ಕೆ ಅವರನ್ನು ಅಮಾನತು ಮಾಡಿದೆ.

ಪಶ್ಚಿಮ ವಿಭಾಗ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಶ್‌ಕುಮಾರ್ ತಮ್ಮ ಅಮಾನತು ಆದೇಶ ಪ್ರಶ್ನಿಸಿ ಕಳೆದ ವಾರ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ನ್ಯಾಯಮಂಡಳಿಯು ಮುಂದಿನ ದಿನಗಳಲ್ಲಿ ಈ ವಿಷಯವನ್ನು ವಿಚಾರಣೆ ನಡೆಸುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಪೊಲೀಸರ ಅಮಾನತು ಸಮರ್ಥಿಸಿಕೊಂಡ ಸಿದ್ದರಾಮಯ್ಯ, ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದವರನ್ನು ಪ್ರಾಥಮಿಕವಾಗಿ ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದ್ದರು.

ಹಿಂದುಳಿದ ಮಠಾಧೀಶರಿಂದ ಆರ್‌ಸಿಬಿ, ಕೆಎಸ್‌ಸಿಎ ವಿರುದ್ಧ ಇಡಿಗೆ ದೂರು

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟಿದ್ದು, 56 ಮಂದಿ ಗಾಯಗೊಂಡಿದ್ದಾರೆ. ಈ ದುರಂತ ದೇಶಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಕಾಲ್ತುಳಿತ ಪ್ರಕರಣ ಸಂಬಂಧ ಈಗಾಗಲೇ ನಾಲ್ವರನ್ನು ಬಂಧಿಸಲಾಗಿದೆ.

ಈ ಮಧ್ಯೆ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಅತೀ ಹಿಂದುಳಿದ ಮಠಾಧೀಶರು, ಆರ್‌ಸಿಬಿ ಮ್ಯಾನೇಜ್ಮೆಂಟ್ ಮತ್ತು ಕೆಎಸ್‌ಸಿಎ ವಿರುದ್ಧ ಇಡಿಗೆ ದೂರು ನೀಡಿದ್ದಾರೆ. ಅಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ವಿರುದ್ಧವೂ ದೂರು ನೀಡಿದ್ದಾರೆ. ಆರ್‌ಸಿಬಿ ವಾಣಿಜ್ಯೋದ್ಯಮಕ್ಕಾಗಿ ಇದನ್ನು ಬಳಸಿಕೊಂಡಿದೆ. ತಮ್ಮ ಪ್ರತಿಷ್ಠೆಗಾಗಿ ಆರ್‌ಸಿಬಿ ಕೋಟ್ಯಾಂತರ ರೂ. ಖರ್ಚು ಮಾಡಿದೆ. ಆರ್‌ಸಿಬಿ ಹಣಕಾಸು ವ್ಯವಹಾರದ ಬಗ್ಗೆ ತನಿಖೆ ನಡೆಸಬೇಕು ಎಂದು ಅತೀ ಹಿಂದುಳಿದ ಮಠಾಧೀಶರ ಮಹಾಸಭಾ ಮನವಿ ಮಾಡಿದೆ.

ಇನ್ನು, ಕೆಎಸ್‌ಸಿಎ ತನ್ನ ಸ್ಥಾನ ಮತ್ತು ಪದವಿಗಾಗಿ ಹಣ ನೀಡಿರುವುದು ಗೊತ್ತಾಗಿದೆ. ವಾಣಿಜ್ಯ ಸಂಸ್ಥೆಗಳಿಗೆ ನೀಡಬೇಕಿದ್ದ ಕೋಟಿಗಟ್ಟಲೇ ಹಣ ಬಾಕಿ ಇದೆ. ಕಾರ್ಯಕ್ರಮಕ್ಕೆಂದು ಹಣ ಸಂಗ್ರಹಿಸಿ ಬೇರೆ ಕಡೆ ಬಳಸಿದ್ದಾರೆ. ಸರ್ಕಾರ ಮತ್ತು ಬಿಸಿಸಿಐ ನಿಂದಲೂ ಹಣ ಪಡೆದು ತಪ್ಪು ಲೆಕ್ಕ ಕೊಟ್ಟಿದ್ದಾರೆ. ಸಾರ್ವಜನಿಕರಿಂದ ಪಡೆದ ಹಣಕ್ಕೆ ಸರಿಯಾದ ಲೆಕ್ಕ ಕೊಟ್ಟಿಲ್ಲ. ಈ ಹಿನ್ನೆಲೆಯಲ್ಲಿ ಕೆಎಸ್‌ಸಿಎ ವಿರುದ್ಧವೂ ತನಿಖೆ ನಡೆಸುವಂತೆ ಮಠಾಧೀಶರು ಆಗ್ರಹಿಸಿದ್ದಾರೆ.

ಸಿದ್ದರಾಮಯ್ಯ, ಡಿಕೆಶಿ ವಿರುದ್ಧ ಪೊಲೀಸರಿಗೆ ದೂರು: ಅತೀ ಹಿಂದುಳಿದ ಮಠಾಧೀಶರ ಸಭಾ ಬೆಂಗಳೂರಿನ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಗೃಹ ಸಚಿವ ಡಾ.ಪರಮೇಶ್ವರ್ ಮತ್ತು ಆರ್‌ಸಿಬಿ ಆಡಳಿತ ಮಂಡಳಿ ವಿರುದ್ಧ ದೂರು ನೀಡಿದೆ. ಇವರ ನಿರ್ಲಕ್ಷ್ಯದಿಂದಲೇ ಆರ್‌ಸಿಬಿಯ 11 ಅಭಿಮಾನಿಗಳ ಸಾವಾಗಿದೆ. ಹೀಗಾಗಿ ನಾಲ್ವರ ವಿರುದ್ಧ ಕ್ರಮ ಜರುಗಿಸುವಂತೆ ದೂರಿನಲ್ಲಿ ಮನವಿ ಮಾಡಿದ್ದಾರೆ.

ಮ್ಯಾಜಿಸ್ಟ್ರೇಟ್ ಮುಂದೆ ಹಾಜರಾಗಲು 45 ಗಾಯಾಳುಗಳಿಗೆ ನೋಟಿಸ್ ಜಾರಿ

ಬೆಂಗಳೂರು: ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಗಾಯಗೊಂಡಿದ್ದ 45 ಜನರಿಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿಯೂ ಸೇವೆ ಸಲ್ಲಿಸುತ್ತಿರುವ ಬೆಂಗಳೂರು ನಗರ ಜಿಲ್ಲೆಯ ಉಪ ಆಯುಕ್ತರು ನೋಟಿಸ್ ಜಾರಿ ಮಾಡಿದ್ದು, ಜೂ.11ರಂದು ತಮ್ಮ ಹೇಳಿಕೆಗಳನ್ನು ದಾಖಲಿಸುವಂತೆ ಸೂಚಿಸಲಾಗಿದೆ. ದುರಂತದ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಿರುವ ಸಿದ್ದರಾಮಯ್ಯ, 15 ದಿನಗಳ ಒಳಗೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಜಿ.ಜಗದೀಶ ಅವರಿಗೆ ಆದೇಶಿಸಿದ್ದಾರೆ. ಜಗದೀಶ ನೋಟಿಸ್ ಜಾರಿ ಮಾಡಿ, ಗಾಯಾಳುಗಳು ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರ ಒಳಗೆ ಬೆಂಗಳೂರಿನ ಡಿಸಿ ಕಚೇರಿ ಆವರಣದಲ್ಲಿರುವ ಮ್ಯಾಜಿಸ್ಟೀರಿಯಲ್ ನ್ಯಾಯಾಲಯದ ಸಭಾಂಗಣಕ್ಕೆ ಬಂದು ಹೇಳಿಕೆಗಳನ್ನು ದಾಖಲಿಸಬೇಕೆಂದು ಸೂಚಿಸಿದ್ದಾರೆ. ಈ ಹೇಳಿಕೆಗಳನ್ನು ದಾಖಲಿಸಿಕೊಂಡ ನಂತರ, ಜೂನ್ 13ರಂದು ಜಿಲ್ಲಾಧಿಕಾರಿ ಮೃತರ ಕುಟುಂಬ ಸದಸ್ಯರು ಮತ್ತು ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆರ್‌ಸಿಬಿ, ಡಿಎನ್‌ಎ ಅರ್ಜಿ ಇಂದು ವಿಚಾರಣೆ

ಬೆಂಗಳೂರು: ಕಾಲ್ತುಳಿತ ಘಟನೆಯಲ್ಲಿ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಪ್ರಶ್ನಿಸಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿರುವ ಅರ್ಜಿಗಳನ್ನು ಜೂನ್ 10ರಂದು ವಿಚಾರಣೆ ನಡೆಸುವುದಾಗಿ ಕರ್ನಾಟಕ ಹೈಕೋರ್ಟ್ ಸೋಮವಾರ ತಿಳಿಸಿದೆ.

18 ವರ್ಷಗಳ ಬಳಿಕ ಚೊಚ್ಚಲು ಐಪಿಎಲ್ ಟ್ರೋಫಿ ಗೆದ್ದ ಹಿನ್ನೆಲೆಯಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಜೂ.4ರಂದು ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನರು ಸಾವಿಗೀಡಾಗಿದ್ದಾರೆ.

ಸೋಮವಾರ, ಆರ್‌ಸಿಬಿ ಮತ್ತು ಡಿಎನ್‌ಎ ಎಂಟರ್‌ಟೈನ್‌ಮೆಂಟ್ ತಮ್ಮ ವಿರುದ್ಧದ ಎಫ್‌ಐಆರ್‌ಗಳನ್ನು ಪ್ರಶ್ನಿಸಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿವೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಾಲೀಕ ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಲಿಮಿಟೆಡ್ ಈ ಪ್ರಕರಣದಲ್ಲಿ ತನ್ನನ್ನು ತಪ್ಪಾಗಿ ಸಿಲುಕಿಸಲಾಗಿದೆ. ಸೀಮಿತ ಪಾಸ್‌ಗಳು ಮಾತ್ರ ಲಭ್ಯವಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಉಚಿತ ಪಾಸ್‌ಗಳಿಗೂ ಪ್ರವೇಶಕ್ಕೆ ಪೂರ್ವ ನೋಂದಣಿ ಕಡ್ಡಾಯ ಎಂದು ಹೇಳಲಾಗಿತ್ತು ಎಂದು ವಾದಿಸಿದೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಜೂ.10ರಂದು ಒಟ್ಟಿಗೆ ವಿಚಾರಣೆ ನಡೆಸುವಂತೆ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ನ್ಯಾಯಾಲಯವನ್ನು ಕೋರಿದರು. ಆಕ್ಷೇಪಣೆಗಳನ್ನು ಸಲ್ಲಿಸಲು ಸಮಯ ನೀಡಲು ಕೋರ್ಟ್ ಒಪ್ಪಿತು.

ಮುಡಾ ನಿವೇಶನ ಹಗರಣ

ಸಾಮಾನ್ಯ ಜ್ಞಾನ ಇಲ್ಲದವರಂತೆ ನಡೆದುಕೊಂಡಿರುವ ಲೋಕಾಯುಕ್ತ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಿ!

ಕೇಂದ್ರ ಜಾಗೃತಿ ಆಯೋಗಕ್ಕೆ ಸ್ನೇಹಮಯಿ ಕೃಷ್ಣ ದೂರು


ಸ್ನೇಹಮಯಿ ಕೃಷ್ಣ

ಮೈಸೂರು, ಜೂ. 9(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾನೂನು ಉಲ್ಲಂಘಿಸಿ ಅಕ್ರಮವಾಗಿ ನಿವೇಶನ ಪಡೆದಿರುವ ಪ್ರಕರಣದಲ್ಲಿ ಲೋಕಾಯುಕ್ತ ಅಧಿಕಾರಿಗಳು ಸಾಮಾನ್ಯ ಜ್ಞಾನ ಇಲ್ಲದವರಂತೆ ತನಿಖೆ ನಡೆಸಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನವದೆಹಲಿಯ ಕೇಂದ್ರ ಜಾಗೃತಿ ಆಯೋಗದ ಆಯುಕ್ತರಿಗೆ ಲಿಖಿತ ದೂರು ನೀಡಿದ್ದಾರೆ.

ಸದರಿ ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಮೈಸೂರು ಎಸ್ಪಿ ಟಿ.ಜೆ.ಉದೇಶ, ನ್ಯಾಯಾಲಯಕ್ಕೆ ಮಧ್ಯಂತರ ವರದಿ ಸಲ್ಲಿಸಿ ಅದನ್ನೇ ಅಂತಿಮ ವರದಿ ಎಂಬಂತೆ ಬಿಂಬಿಸಿದ್ದಾರೆ. ಅವರ ಮೇಲಧಿಕಾರಿಗಳಾದ ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬೀಕರ್, ಮಹಾನಿರ್ದೇಶಕ ಸುಬ್ರಹ್ಮಣ್ಯೇಶ್ವರರಾವ್, ಮುಖ್ಯಮಂತ್ರಿಗಳ ಪ್ರಭಾವಕ್ಕೊಳಗಾಗಿ ಸಾಮಾನ್ಯ ತಿಳುವಳಿಕೆ ಇಲ್ಲದವರಂತೆ ನಡೆದುಕೊಂಡಿದ್ದಾರೆ ಎಂದು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಅವರಿಗೆ ನಿಜವಾಗಲೂ ತಿಳುವಳಿಕೆ ಇಲ್ಲವೇ ಅಥವಾ ಉದ್ದೇಶಪೂರ್ವಕವಾಗಿ ಭ್ರಷ್ಟರಿಗೆ ಅನುಕೂಲ ಮಾಡಿಕೊಡಲು ಐಪಿಎಸ್ ಅಧಿಕಾರಿಗಳು ಈ ರೀತಿ ನಡೆದುಕೊಳ್ಳುತ್ತಿದ್ದಾರೆಯೇ ಎಂಬುದರ ಬಗ್ಗೆ ವಿಚಾರಣೆ ನಡೆಸಿ ಅವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದೂ ಕೋರಿದ್ದಾರೆ.

ಮುಸ್ಲಿಂ ಸಮುದಾಯದ ವಿರುದ್ಧ ನಿಂದನೆ ನಿಲ್ಲಿಸದಿದ್ದರೆ ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಜನಾಂದೋಲನ

ದಲಿತ ಮುಖಂಡ ಹರಿಹರ ಆನಂದಸ್ವಾಮಿ ಎಚ್ಚರಿಕೆ


ಆನಂದಸ್ವಾಮಿ

ಮೈಸೂರು, ಜೂ.9(ಎಂಟಿವೈ)– ಕುಂಭಮೇಳ ಮತ್ತು ಪೆಹಲ್ಗಾಮ್ ಘಟನೆ ಹಾಗೂ ಆಪರೇಷನ್ ಸಿಂಧೂರ ಬಳಿಕ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಸ್ಲಿಂ ಸಮುದಾಯದ ವಿರುದ್ಧ ನಿಂದನೆ, ಅವಹೇಳನ ಮಾಡುತ್ತಿರುವುದನ್ನು ನಿಲ್ಲಿಸದಿದ್ದರೆ ಜನಾಂದೋಲನ ರೂಪಿಸುವುದಾಗಿ ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಮುಖ್ಯಸ್ಥ ಹರಿಹರ ಆನಂದ ಸ್ವಾಮಿ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಎಂಬುವವರು ಕಲ್ಬುರ್ಗಿ ಜಿಲ್ಲಾಧಿಕಾರಿ ಫೌಜಿಯಾ ರತನ್ನುಮ್ ಅವರನ್ನು ಭಾರತೀಯರೋ, ಪಾಕಿಸ್ತಾನಕ್ಕೆ ಸೇರಿದವರೋ ಎಂಬುದು ಖಚಿತವಾಗಿಲ್ಲ ಎಂದಿದ್ದಾರೆ. ಅದೇ ಜಿಲ್ಲೆಯ ಎಎಸ್‌ಪಿ ಮಹೇಶ್ ಮೇಘಣ್ಣನವರ್ ಮತ್ತು ಸಿಪಿಐ ಚಂದ್ರಶೇಖರ್ ಎಂಬ ದಲಿತ ಅಧಿಕಾರಿ ವಿರುದ್ಧವೂ ನಿಂದನೆ ಮಾಡಿದ್ದಾರೆ. ಎನ್.ರವಿಕುಮಾರ್ ಈ ಹಿಂದೆ ಪರೋಕ್ಷವಾಗಿ ನೆಹರು ಅವರನ್ನು ಟೀಕಿಸಿದ್ದರು. ಮಧ್ಯ ಪ್ರದೇಶದಲ್ಲಿ ಬಿಜೆಪಿ ಸರ್ಕಾರದ ಸಚಿವ ವಿಜಯ್ ಶಾ ಎಂಬುವವರು ಮಿಲಿಟರಿ ಅಧಿಕಾರಿ ಸೋಫಿಯಾ ಖುರೇಷಿ ಅವರನ್ನು ಪಾಕಿಸ್ತಾನದ ಉಗ್ರರನ್ನು ಹೊಡೆದುರುಳಿಸಲು ನಿಮ್ಮ ಸಹೋದರಿಯನ್ನು ಕಳಿಸಿದ್ದೇವೆ ಎಂದು ಬಹಿರಂಗವಾಗಿ ಹೇಳಿದ್ದರು. ಈತನ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿದೆ. ಆದರೆ ಇತರರ ಬಗ್ಗೆ ಏಕೆ ಕ್ರಮ ಇಲ್ಲ ಎಂದು ಪ್ರಶ್ನಿಸಿದರು.

ರಾಜ್ಯದ ಕರಾವಳಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಪುಡಿ ರೌಡಿಗಳ ಅಟ್ಟಹಾಸ ಮಿತಿ ಮೀರಿದೆ. ಕೊಲೆಗಳು ಎಗ್ಗಿಲ್ಲದೇ ನಡೆಯುತ್ತಿವೆ. ಪತ್ರಕರ್ತೆ ಗೌರಿ ಲಂಕೇಶ್, ಚಿಂತಕ ಎಂ.ಎಂ.ಕಲಬುರ್ಗಿ ಅವರನ್ನು ಹತ್ಯೆಗೈದವರ ವಿರುದ್ಧ ಇನ್ನೂ ಕ್ರಮ ಜರುಗಿಸಿಲ್ಲ. ಇದರಿಂದಾಗಿ ಆಡಳಿತಾರೂಢ ಮತ್ತು ವಿರೋಧ ಪಕ್ಷಗಳ ನಡುವೆ ಹೊಂದಾಣಿಕೆ ರಾಜಕೀಯ ನಡೆಯುತ್ತಿದೆಯೇ ಎಂಬ ಶಂಕೆ ವ್ಯಕ್ತವಾಗುತ್ತದೆ. ಇದಲ್ಲದೆ, ಬುದ್ಧಿಜೀವಿಗಳು ಮತ್ತು ಎಲ್ಲ ಜಾತಿಯ ಪ್ರಗತಿಪರರು ಇಷ್ಟೆಲ್ಲಾ ನಡೆಯುತ್ತಿದ್ದರೂ ಗಾಢ ಮೌನ ವಹಿಸಿರುವುದು ಖಂಡನೀಯ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿ.ಹರಕುಮಾರ್, ಹೊರಳವಾಡಿ ನಂಜುಂಡಸ್ವಾಮಿ, ಸತೀಶ್ ಪಡುವಾರಹಳ್ಳಿ, ಸೋಮಯ್ಯ ಮಲೆಯೂರು ಇದ್ದರು.

ಭಕ್ತರಿಗೆ ಪ್ರಸಾದ ವಿನಿಯೋಗ...


ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಭಾನುವಾರ ಬೆಳಗ್ಗೆ ಸ್ವಾತಿ ನಕ್ಷತ್ರ ದಿವಸದ ಅಂಗವಾಗಿ ಶ್ರೀ ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಇದೇ ವೇಳೆ ದೇವಾಲಯಕ್ಕೆ ಆಗಮಿಸಿದ್ದ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ದೇವಾಲಯ ಸಂಸ್ಥಾಪಕರಾದ ಡಾ. ಭಾಷ್ಯಂ ಸ್ವಾಮೀಜಿ, ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಇನ್ನಿತರರು ಇದ್ದರು.

ಯೋಗ ದಿನಾಚರಣೆ: ಇಂದು ಪೂರ್ವಭಾವಿ ಸಭೆ



ಮೈಸೂರು, ಜೂ. 9(ಆರ್‌ಕೆ)–ಜೂನ್ 21ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸಂಬಂಧ ಜಿಲ್ಲಾಧಿಕಾರಿ ಕಚೇರಿ ಯಲ್ಲಿ ನಾಳೆ (ಜೂ.10) ಬೆಳಗ್ಗೆ 10 ಗಂಟೆಗೆ ಪೂರ್ವ ಭಾವಿ ಸಭೆ ಕರೆಯಲಾಗಿದೆ. 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಸ್ಥಳ ನಿಗದಿ, ಸ್ವಚ್ಛತೆ, ಯೋಗಾ ಸಕ್ತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕರೆತರಲು ವಾಹನಗಳ ವ್ಯವಸ್ಥೆ, ಭಾಗವಹಿಸುವವರಿಗೆ ಉಪಹಾರ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಂಬಂಧ ಅಧಿಕಾರಿಗಳು ಹಾಗೂ ವಿವಿಧ ಯೋಗ ತರಬೇತಿ ಸಂಸ್ಥೆ ಶಿಕ್ಷಕರು, ಶಾಲಾ–ಕಾಲೇಜು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಜಿಲ್ಲಾಧಿಕಾರಿಗಳು ಚರ್ಚಿಸಿ ಸೂಕ್ತ ನಿರ್ದೇಶನ ನೀಡುವರು.

ಕಿಕ್ಕಿರಿದು ತುಂಬಿದ ರೈಲಿನಿಂದ ಬಿದ್ದು 6 ಮಂದಿ ಸಾವು!


ಸಾಂದರ್ಭಿಕ ಚಿತ್ರ

ಮುಂಬೈ: ಮಹಾರಾಷ್ಟ್ರದ ಥಾಣೆ ಬಳಿಯ ದಿವಾದಲ್ಲಿ ಕಿಕ್ಕಿರಿದು ತುಂಬಿದ್ದ ರೈಲಿನಿಂದ ಬಿದ್ದು ಆರು ಮಂದಿ ಪ್ರಯಾಣಿಕರು ಸಾವನ್ನಪ್ಪಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ. ಕಾಲಿಡಲು ಜಾಗವಿಲ್ಲದಷ್ಟು ಕಿಕ್ಕಿರಿದು ತುಂಬಿದ್ದ ರೈಲು ಕಸಾರ ಕಡೆಗೆ ಹೋಗುತ್ತಿದ್ದಾಗ ದಿವಾ ಮತ್ತು ಕೋಪರ್ ರೈಲು ನಿಲ್ದಾಣಗಳ ನಡುವೆ ಈ ಘಟನೆ ಸಂಭವಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರೈಲಿನ ಬಾಗಿಲಲ್ಲಿ ನಿಂತು ನೇತಾಡುತ್ತಿದ್ದ ಪ್ರಯಾಣಿಕರು: ಪೀಕ್ ಅವರ್‌ನಲ್ಲಿ ಹೆಚ್ಚಿನ ಪ್ರಯಾಣಿಕರಿಂದ ತುಂಬಿದ ರೈಲಿನಲ್ಲಿ ಅನೇಕ ಜನರು ಬಾಗಿಲುಗಳಲ್ಲಿ ನಿಂತು ನೇತಾಡುತ್ತಿದ್ದರು. ರೈಲು ಚಲಿಸುತ್ತಿದ್ದಂತೆಯೇ 10 ಪ್ರಯಾಣಿಕರು ಕೆಳಗೆ ಬಿದ್ದಿದ್ದಾರೆ. ಈ ಪೈಕಿ ಆರು ಮಂದಿ ಸಾವನ್ನಪ್ಪಿದ್ದು, ಉಳಿದವರು ಗಾಯಗೊಂಡು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ. ಬೆಳಗ್ಗೆ 9.30ರ ಸುಮಾರಿನಲ್ಲಿ ಥಾಣೆಯ ದಿವಾದಲ್ಲಿ ಈ ದುರ್ಘಟನೆ ನಡೆದಿದೆ. ಪ್ರಯಾಣಿಕರು ಸ್ಥಳೀಯ ರೈಲಿನ ಬಾಗಿಲುಗಳ ಮೇಲೆ ನಿಂತಿದ್ದರು. ಮೃತರೆಲ್ಲರೂ 30ರಿಂದ 35 ವರ್ಷ ವಯಸ್ಸಿನವರು ಎನ್ನಲಾಗಿದೆ. ಪ್ರಯಾಣಿಕರು ತಾವಾಗಿಯೇ ಕೆಳಗೆ ಬಿದ್ದಿದ್ದಾರೆಯೇ ಅಥವಾ ಬ್ಯಾಗುಗಳಿಂದಾಗಿ ಅಥವಾ ಯಾರಾದರೂ ತಳ್ಳಿದ್ದಾರೆಯೇ ಎಂಬುದು ಗೊತ್ತಾಗಬೇಕು ತನಿಖೆ ನಡೆಸಬೇಕು ಎಂದು ಶಿವಸೇನೆ ಸಂಸದ ನರೇಶ್ ಮ್ಹಾಸ್ಕೆ ಒತ್ತಾಯಿಸಿದ್ದಾರೆ.

ಇದು ಅತ್ಯಂತ ದುರದೃಷ್ಟಕರ ಘಟನೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ ಮತ್ತು ಗಾಯಾಳುಗಳು ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆಯ ಬಗ್ಗೆ ರೈಲ್ವೇ ತನಿಖೆ ಆರಂಭಿಸಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಸೋನಿಯಾ ಮತ್ತೆ ಆಸ್ಪತ್ರೆಗೆ ದಾಖಲು



ನವದೆಹಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ರಾಷ್ಟ್ರ ರಾಜಧಾನಿಯಲ್ಲಿರುವ ಸರ್ ಗಂಗಾರಾಮ್ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿ ವೈದ್ಯಕೀಯ ತಪಾಸಣೆಗೆ ಒಳಗಾದರು.

ಹಿಮಾಚಲ ಪ್ರದೇಶಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರು ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸಿದ್ದರು. ಶಿಮ್ಲಾದಲ್ಲಿರುವ ಇಂದಿರಾಗಾಂಧಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಾಗಿ ಆರೋಗ್ಯ ತಪಾಸಣೆಗೆ ಒಳಪಟ್ಟಿದ್ದರು. ಸೋನಿಯಾ (78) ಅವರ ರಕ್ತದೊತ್ತಡ ಹೆಚ್ಚಾಗಿತ್ತು. ಆದರೆ ಅವರ ಆರೋಗ್ಯ ಸ್ಥಿತಿ ಸಾಮಾನ್ಯವಾಗಿದೆ ಎಂದು ಕಾಲೇಜಿನ ಉಪ ಸೂಪರಿಂಟೆಂಡೆಂಟ್ ಡಾ.ಅಮನ್ ಶನಿವಾರ ಹೇಳಿದ್ದರು. ಇದರ ಬೆನ್ನಲ್ಲೇ ಗಂಗಾರಾಮ್ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ ಸೋನಿಯಾ, ಹಲವು ತಪಾಸಣೆಗೆ ಒಳಪಟ್ಟರು ಎಂದು ಮೂಲಗಳು ಹೇಳಿವೆ. ಕಳೆದ ಫೆಬ್ರವರಿಯಲ್ಲೂ ಅವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು.

ಡಿ.ದೇವರಾಜ ಅರಸು ಅವರ ಪುಣ್ಯಸ್ಮರಣೆ


ಮೈಸೂರಿನ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಡಿ.ದೇವರಾಜ ಅರಸು ಪುಣ್ಯಸ್ಮರಣೆ ಕಾರ್ಯಕ್ರಮ ಜರುಗಿತು.

ಮೈಸೂರು, ಜೂ.9(ಎಂಟಿವೈ)– ನಾಡುಕಂಡ ಅಪರೂಪದ ರಾಜಕಾರಣಿಯಾಗಿರುವ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಶೋಷಿತ ಸಮುದಾಯಗಳಿಗೆ ದಾರಿದೀಪದಂತೆ ಇದ್ದರು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಡಿ.ದೇವರಾಜ ಅರಸುರವರ 43ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವರಾಜ ಅರಸು ಅವರು ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿ ಸಮ ಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸಿದರು. ಸಮಾಜದಲ್ಲಿ ತುಳಿತಕ್ಕೆ ಒಳಗಾದವರ, ತಳ ಸಮುದಾಯ, ಹಿಂದುಳಿದ ವರ್ಗದವರನ್ನು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಸಬಲರನ್ನಾಗಿ ಮಾಡಲು ಕ್ರಾಂತಿಕಾರಕ ನಿರ್ಧಾರಗಳನ್ನು ಕೈಗೊಂಡರು. ಹಿಂದುಳಿದವರಿಗೆ ಶೈಕ್ಷಣಿಕವಾಗಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಿದರು. ಭೂಸುಧಾರಣೆ ಕಾಯಿದೆ ತಂದು ಉಳುವವನೇ ಭೂಮಿಯ ಒಡೆಯನನ್ನಾಗಿ ಮಾಡಿದರು ಎಂದರು.

ಮಲ ಹೊರುವ ಪದ್ಧತಿಯನ್ನು ರಾಜ್ಯದಲ್ಲಿ ನಿಷೇಧಿಸುವ ಮೂಲಕ ಗಮನ ಸೆಳೆದರು. ಜೀತ ವಿಮುಕ್ತಿ ನಿರ್ಮೂಲನೆ, ಭಾಗ್ಯಜ್ಯೋತಿ ಯೋಜನೆ, ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ, ಋಣಮುಕ್ತ ಪರಿಹಾರ ಯೋಜನೆ ಜಾರಿಗೆ ತಂದರು. 1973ರಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದರು. ಹಿಂದುಳಿದ ವರ್ಗದವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ವಿದ್ಯಾರ್ಥಿನಿಲಯಗಳನ್ನು ತೆರೆದರು. ಅದರ ಪರಿಣಾಮವಾಗಿ ಇದುವರೆಗೆ ಲಕ್ಷಾಂತರ ವಿದ್ಯಾರ್ಥಿಗಳು ಹಾಸ್ಟೆಲ್‌ಗಳಲ್ಲಿ ಓದುತ್ತಿದ್ದಾರೆ. ವಿದ್ಯಾರ್ಥಿಗಳು ದೇವರಾಜ ಅರಸುರವರ ಸರಳ, ಆದರ್ಶ, ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆ ಮೂಲಕ ಸಾಧನೆ ಮಾಡಿ, ನೊಂದವರಿಗೆ ನ್ಯಾಯ ಒದಗಿಸಿಕೊಡಲು ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಕಲ್ಯಾಣಾಧಿಕಾರಿ ಚಂದ್ರಕಲಾ, ನಿಲಯಪಾಲಕರಾದ ಜಗದೀಶ್ ಜಿ.ಕೋಠಿ, ನಾಗರಾಜ್, ಯೋಗೀಶ್, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕೌಟಿಲ್ಯ ಪದವಿಪೂರ್ವ ಕಾಲೇಜಿನಲ್ಲಿ ಪರಿಸರ ದಿನಾಚರಣೆ


ಗಿಡ ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು.

ಮೈಸೂರು, ಜೂ. 9– ಮೈಸೂರಿನ ದಟ್ಟಗಳ್ಳಿಯ ಕೌಟಿಲ್ಯ ಪದವಿಪೂರ್ವ ಕಾಲೇಜಿನಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು.

ಕಾಲೇಜಿನ ಆವರಣದಲ್ಲಿ ಗಿಡ ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಪ್ರಾಂಶುಪಾಲ ಬಿ.ಸಿ.ಚೇತನ್, ಇಂದಿನ ವಿದ್ಯಾರ್ಥಿಗಳು ಪರಿಸರದ ಬಗ್ಗೆ ಕಾಳಜಿಯನ್ನು ಬೆಳೆಸಿಕೊಳ್ಳಬೇಕು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಆದ್ದರಿಂದ ಪ್ರಕೃತಿಯನ್ನು ಕಾಪಾಡುವುದು ಎಲ್ಲರ ಕರ್ತವ್ಯವಾಗಬೇಕು. ರಾಸಾಯನಿಕ ಗೊಬ್ಬರ ಔಷಧಿಗಳನ್ನು ಹೆಚ್ಚು ಹೆಚ್ಚಾಗಿ ಬಳಸಿ ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದೇವೆ. ಹಾಗಾಗಿ ಆಹಾರದ ಮೂಲಕ ರಾಸಾಯನಿಕ ಪದಾರ್ಥಗಳು ದೇಹವನ್ನು ಸೇರುತ್ತಿವೆ. ಇದರಿಂದ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದೇವೆ. ಆದ್ದರಿಂದ ಸಹಜವಾಗಿ ಬೆಳೆದ ಆಹಾರ ಪದಾರ್ಥಗಳನ್ನು ಸೇವಿಸಬೇಕು. ಮನುಷ್ಯ ಆರೋಗ್ಯವಾಗಿರಲು ಹಾಗೂ ಹೆಚ್ಚು ದಿನ ಬದುಕಲು ಇದು ಸಹಾಯಕವಾಗುತ್ತದೆ. ನಾವು ಮುಂದಿನ ತಲೆಮಾರಿಗೆ ಏನಾದರೂ ಆಸ್ತಿಯನ್ನು ಬಿಟ್ಟು ಹೋಗಬೇಕೆಂದಿದ್ದರೆ, ಅದು ಆರೋಗ್ಯಕರ ಪರಿಸರ ಎಂಬುದನ್ನು ಎಲ್ಲರೂ ಮನಗಾಣಬೇಕು ಎಂದು ತಿಳಿಸಿದರು.

ಉಪನ್ಯಾಸಕರಾದ ಶ್ರೀಮತಿ ಶೀಲಾ, ಶ್ರೀಮತಿ ಮಧುರ, ಶ್ರೀಮತಿ ಸ್ಮಿತಾ, ಶ್ರೀಮತಿ ಪ್ರಿಯಾ ಶಶಿಧರನ್, ಶ್ರೀಮತಿ ಲಾವಣ್ಯ, ಶ್ರೀಮತಿ ಶ್ವೇತಾ, ಶ್ರೀಮತಿ ಸುಮಲತಾ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹರಿಹರನಲ್ಲಿ ಭಕ್ತ ದೇವರಿಗಿಂತಲೂ ದೊಡ್ಡವನು!

ಜಾನಪದ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ವಿವರಣೆ



52ನೇ ಕನ್ನಡ ಪುನಶ್ಚೇತನ ಶಿಬಿರದಲ್ಲಿ ಜಾನಪದ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು 'ಹರಿಹರ ಮತ್ತು ಸಾಮಾಜಿಕತೆ, ರಾಘವಾಂಕ ಮತ್ತು ಸಾಮಾಜಿಕತೆ' ಕುರಿತು ವಿಷಯ ಮಂಡಿಸಿದರು.

ಮೈಸೂರು, ಜೂ.9(ಎಂಕೆ)– ರಾಘವಾಂಕನ ಕಾವ್ಯದಲ್ಲಿ ಸತ್ಯ, ಹರಿಹರನ ರಗಳೆಯಲ್ಲಿ ಭಕ್ತಿ ಮೌಲ್ಯಗಳು ಅಡಗಿವೆ ಎಂದು ಜಾನಪದ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಆಯೋಜಿಸಿರುವ 52ನೇ ಕನ್ನಡ ಪುನಶ್ಚೇತನ ಶಿಬಿರದಲ್ಲಿ 'ಹರಿಹರ ಮತ್ತು ಸಾಮಾಜಿಕತೆ, ರಾಘವಾಂಕ ಮತ್ತು ಸಾಮಾಜಿಕತೆ' ಕುರಿತು ವಿಷಯ ಮಂಡಿಸಿದ ಅವರು, ಕನ್ನಡ ಸಾಹಿತ್ಯದ ಮೊದಲ ಬಂಡಾಯಗಾರ ಹರಿಹರ. ಹರಿಹರನಲ್ಲಿ ಭಕ್ತ ದೇವರಿಗಿಂತಲೂ ದೊಡ್ಡವನು. ಭಕ್ತಿ, ಧ್ಯಾನ ಪಡೆಯುವುದಕ್ಕಲ್ಲ. ಅದೆಲ್ಲವೂ ಆತ್ಮ ಸಂತೋಷಕ್ಕಾಗಿ ಎಂದರು.

ಹರಿಹರನ ಮಾದಾರ ಚನ್ನಯ್ಯನ ರಗಳೆಯಲ್ಲಿ 'ಭಕ್ತಿ' ಬಹುದೊಡ್ಡ ಮೌಲ್ಯವಾದರೆ, ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ 'ಸತ್ಯ' ಬಹು ದೊಡ್ಡ ಮೌಲ್ಯವಾಗಿ ಸ್ವೀಕೃತವಾಗುತ್ತದೆ. ಈ ಕಾವ್ಯವನ್ನು ಜನ ಕೇಳಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ವಚನ ಸಾಹಿತ್ಯ ಸತ್ಯ ಮಾರ್ಗ ತೋರಿದ್ದು, ಸ್ವಾನುಭವದ ಮಾತುಗಳಿಂದ ಕೂಡಿದೆ. ವಚನಗಳ ಬಹುದೊಡ್ಡ ಆಶಯ ಕಾಯಕವೇ ಆಗಿದೆ ಎಂದು ಹೇಳಿದರು.

ಸೌಂದರ್ಯ ಜಗತ್ತು: ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಸೌಂದರ್ಯ, ಜಗತ್ತಿನ ಯಾವ ವಿಶ್ವವಿದ್ಯಾನಿಲಯದಲ್ಲೂ ಇಲ್ಲ. ಜಗತ್ತಿನ ಬೇರೆ ಬೇರೆ ಅಭಿವೃದ್ಧಿಶೀಲ ವಿವಿಗಳು ಬೇರೆ ರೀತಿ ಅಭಿವೃದ್ಧಿಯಾಗಿವೆ. ಪ್ರಕೃತಿ ಸೌಂದರ್ಯದಲ್ಲಿ ಮಾನಸಗಂಗೋತ್ರಿ ಮೀರಿಸುವ ವಿವಿ ಮತ್ತೊಂದಿಲ್ಲ ಎಂದು ಬಣ್ಣಿಸಿದರು. ಶಿಬಿರದ ಸಂಯೋಜಕರೂ ಆದ ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಡಾ.ನಂಜಯ್ಯ ಎಂ.ಹೊಂಗನೂರು, ಮಾಳವಿಯ ಮಿಷನ್ ಶಿಕ್ಷ ಕ ತರಬೇತಿ ಕೇಂದ್ರ ನಿರ್ದೇಶಕಿ ಪ್ರೊ.ಹೆಚ್.ಜ್ಯೋತಿ, ಸಹಾಯಕ ಪ್ರಾಧ್ಯಾಪಕ ಡಾ.ಎಲ್.ನಂಜುಂಡಸ್ವಾಮಿ, ಶಿಬಿರಾರ್ಥಿಗಳು ಹಾಜರಿದ್ದರು.

'ಸೆಪ್ಟೆಂಬರ್ 10' ಟೀಸರ್ ಬಿಡುಗಡೆ

ಮೈಸೂರು,ಜೂ.9(ಎಂಟಿವೈ)– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಚಲನಚಿತ್ರ ನಿರ್ದೇಶಕ ಓಂ ಸಾಯಿಪ್ರಕಾಶ್ ನಿರ್ದೇಶನದ 105ನೇ ಚಿತ್ರ 'ಸೆಪ್ಟೆಂಬರ್ 10' ಟೀಸರ್ ಬಿಡುಗಡೆ ಸಮಾರಂಭ ಜರುಗಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಓಂ ಸಾಯಿಪ್ರಕಾಶ್ ಮಾತನಾಡಿ, ಸೆ.10ರಂದು ವಿಶ್ವ ಆತ್ಮಹತ್ಯೆ ತಡೆ ದಿನವಾಗಿ ಆಚರಿಸಲಾಗುತ್ತದೆ. ಇದೇ ಕಾರಣಕ್ಕೆ ಈ ಚಿತ್ರಕ್ಕೆ ಈ ಟೈಟಲ್ ಇಟ್ಟಿದ್ದು, ದುರ್ಬಲ ಮನಸ್ಸಿನವರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯುವ ಉದ್ದೇಶದ ಚಿತ್ರಕಥೆ ಹೊಂದಿದೆ. ಬೆಳೆನಷ್ಟ, ಸಾಲದ ಸುಳಿಗೆ ಸಿಕ್ಕ ರೈತರು, ಸಮಾಜವನ್ನು ಎದುರಿಸಲಾಗದ ಪ್ರೇಮಿಗಳು, ವ್ಯವಹಾರದಲ್ಲಿ ನಷ್ಟ ಅನುಭವಿಸಿದವರು, ಪರೀಕ್ಷೆ ಎದುರಿಸಲಾಗದ ವಿದ್ಯಾರ್ಥಿಗಳು, ಪೋಷಕರು ನಿರೀಕ್ಷಿಸಿದಷ್ಟು ಅಂಕ ಪಡೆಯದ ವಿದ್ಯಾರ್ಥಿಗಳು ದಿಢೀರ್ ನಿರ್ಧಾರ ಕೈಗೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಇದು ತಪ್ಪಬೇಕು ಎಂಬ ಸಂದೇಶ ಈ ಚಲನಚಿತ್ರ ಸಾರುತ್ತದೆ ಎಂದು ವಿವರಿಸಿದರು.

ಕೊರೊನಾ ವೇಳೆಯೇ ಚಿತ್ರ ನಿರ್ಮಾಣವಾಗಿದೆ. ಆದರೆ ಆ ವೇಳೆ ಜನರು ಚಿತ್ರಮಂದಿರಗಳಿಗೆ ಬಂದು ವೀಕ್ಷಿಸುವುದು ಕಡಿಮೆ ಇತ್ತು. ಈಗ ಪರಿಸ್ಥಿತಿ ಸುಧಾರಿಸಿದೆ. ಹೀಗಾಗಿ ಮುಂದಿನ ತಿಂಗಳು ಬಿಡುಗಡೆಗೊಳ್ಳಲಿದೆ ಎಂದರು. ಗೋಷ್ಠಿಯಲ್ಲಿ ಹಿರಿಯ ನಟ ಶ್ರೀನಿವಾಸಮೂರ್ತಿ, ಗಣೇಶ್ ರಾವ್, ಸಂಭಾಷಣೆಕಾರ ಬಿ.ಎ.ಮಧು, ನಟ ಜಯಸಿಂಹ, ನಂದಕುಮಾರ್ ಇದ್ದರು.

ಭಾರತದಲ್ಲಿ ಹೊಸ ಕೋವಿಡ್–19 ರೂಪಾಂತರಿ ಎಕ್ಸ್‌ಎಫ್‌ಜಿ ಸೋಂಕಿನ 163 ಪ್ರಕರಣಗಳು ಪತ್ತೆ



ನವದೆಹಲಿ: ದೇಶಾದ್ಯಂತ ಕೋವಿಡ್ ಸೋಂಕು ಹೆಚ್ಚಳವಾಗುತ್ತಿದ್ದು, ಹೊಸ ರೂಪಾಂತರಿ ಸೋಂಕು ಎಕ್ಸ್‌ಎಫ್‌ಜಿ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿದೆ.

INSACOG ದತ್ತಾಂಶದ ಪ್ರಕಾರ, ಭಾರತದಲ್ಲಿ ಇಲ್ಲಿಯವರೆಗೆ ಹೊಸದಾಗಿ ಹೊರಹೊಮ್ಮುತ್ತಿರುವ COVID–19 ರೂಪಾಂತರ XFG ಸೋಂಕಿನ ಸುಮಾರು 163 ಪ್ರಕರಣಗಳು ಪತ್ತೆಯಾಗಿವೆ. XFG ರೂಪಾಂತರ ನಾಲ್ಕು ಪ್ರಮುಖ ಸ್ಪೈಕ್ ರೂಪಾಂತರಗಳನ್ನು ಹೊಂದಿದೆ ಮತ್ತು ಕೆನಡಾದಲ್ಲಿ ಅದರ ಆರಂಭಿಕ ಪತ್ತೆಯ ನಂತರ ವೇಗವಾಗಿ ಜಾಗತಿಕವಾಗಿ ಹರಡಿದೆ ಎಂದು ದಿ ಲ್ಯಾನ್ಸೆಟ್ ಜರ್ನಲ್‌ನ ಲೇಖನವೊಂದು ತಿಳಿಸಿದೆ.

ಭಾರತೀಯ SARS-CoV-2 ಜೀನೋಮಿಕ್ಸ್ ಕನ್ಸೋರ್ಟಿಯಂನ ಮಾಹಿತಿ ಪ್ರಕಾರ, COVID-19 ಉಂಟುಮಾಡುವ ವೈರಸ್‌ನ XFG ರೂಪಾಂತರವು ಒಟ್ಟು 163 ಮಾದರಿಗಳಲ್ಲಿ ಕಂಡುಬಂದಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು (89), ನಂತರ ತಮಿಳುನಾಡು (16), ಕೇರಳ (15), ಗುಜರಾತ್ (11), ಮತ್ತು ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ಪಶ್ಚಿಮಬಂಗಾಳ (ತಲಾ ಆರು) ಪ್ರಕರಣಗಳು ವರದಿಯಾಗಿವೆ.

ಮೇ ತಿಂಗಳಲ್ಲಿ, XFG ರೂಪಾಂತರದೊಂದಿಗೆ 159 ಮಾದರಿಗಳು ಪತ್ತೆಯಾಗಿದ್ದರೆ, ಜೂನ್‌ನಲ್ಲಿ ಎರಡು ಮಾದರಿಗಳನ್ನು ಪರೀಕ್ಷಿಸಲಾಗಿದೆ ಎಂದು ದತ್ತಾಂಶದ ಮೂಲಕ ತಿಳಿದುಬಂದಿದೆ. ಭಾನುವಾರ ಬಿಡುಗಡೆಯಾದ ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ–ಅಂಶಗಳ ಪ್ರಕಾರ, ಕಳೆದ 48 ಗಂಟೆಗಳಲ್ಲಿ 769 ಹೊಸ ಪ್ರಕರಣಗಳು ದಾಖಲಾಗಿದ್ದು, ಭಾರತದಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 6,000 ದಾಟಿದೆ.

ಸಮುದ್ರದ ಮಧ್ಯೆ ಅಗ್ನಿ ಅವಘಡ; ಹಡಗಿನಿಂದ 18 ಸಿಬ್ಬಂದಿ ರಕ್ಷಣೆ

ಕೇರಳ: ಕೇರಳದ ಕರಾವಳಿಯಲ್ಲಿ ಸೋಮವಾರ ಬೆಳಗ್ಗೆ ಸಿಂಗಾಪುರ ಧ್ವಜ ಹೊಂದಿರುವ ಕಂಟೈನರ್ ಹಡಗು ಎಂವಿ ವಾನ್ ಹೈ 503ರಲ್ಲಿ ಸ್ಫೋಟವೊಂದು ಸಂಭವಿಸಿರುವುದಾಗಿ ರಕ್ಷಣಾ ಪಡೆ ಪಿಆರ್‌ಓ ತಿಳಿಸಿದೆ. ಬೆಂಕಿಯಿಂದ ಹೊತ್ತಿ ಉರಿಯುತ್ತಿದ್ದ ಕಂಟೈನರ್ ಹಡಗಿನಿಂದ 18 ಸಿಬ್ಬಂದಿಯನ್ನು ಭಾರತೀಯ ನೌಕಾಪಡೆ ಹಾಗೂ ಕರಾವಳಿ ರಕ್ಷಣಾ ಪಡೆ ಸಿಬ್ಬಂದಿ ರಕ್ಷಿಸಿರುವುದಾಗಿ ರಕ್ಷಣಾ ಮೂಲಗಳು ತಿಳಿಸಿವೆ.

ಬೆಳಗ್ಗೆ 10.30ರ ಸುಮಾರಿನಲ್ಲಿ ಸ್ಫೋಟದ ಮೊದಲ ವರದಿಯನ್ನು ಮುಂಬೈನ ಕಡಲ ಕಾರ್ಯಾಚರಣೆ ಕೇಂದ್ರ ಕೊಚ್ಚಿಯಲ್ಲಿರುವ ಕಡಲ ಕಾರ್ಯಾಚರಣೆ ಕೇಂದ್ರಕ್ಕೆ ತಿಳಿಸಿದೆ. 270 ಮೀಟರ್ ಉದ್ದದ ಹಡಗು ಜೂ.7ರಂದು ಕೊಲಂಬೊದಿಂದ ಹೊರಟು ಮುಂಬೈಗೆ ತೆರಳುತ್ತಿತ್ತು, ಜೂನ್ 10 ರಂದು ಆಗಮಿಸುವ ನಿರೀಕ್ಷೆಯಿತ್ತು.

ಸಮುದ್ರ ಮಧ್ಯದಲ್ಲಿ ಎಂವಿ ವಾನ್ ಹೈ 503 ಹಡಗಿನಲ್ಲಿ ಸ್ಫೋಟ ಸಂಭವಿಸಿರುವ ಬಗ್ಗೆ ಜೂನ್ 9ರಂದು ಬೆಳಗ್ಗೆ 10–30ರ ಸುಮಾರಿನಲ್ಲಿ ಮುಂಬೈ ಕಡಲ ಕಾರ್ಯಾಚರಣೆ ಕೇಂದ್ರದಿಂದ ಮಾಹಿತಿ ಪಡೆಯಲಾಯಿತು. ಸಿಂಗಾಪುರ ಧ್ವಜ ಹೊಂದಿರುವ ಕಂಟೈನರ್ ಹಡಗು ಆಗಿದ್ದು, ಕೊಲೊಂಬೊದಿಂದ ಮುಂಬೈಗೆ ತೆರಳುತ್ತಿತ್ತು. ಕೂಡಲೇ ಕಾರ್ಯಪ್ರವೃತ್ತರಾದ ಭಾರತೀಯ ನೌಕಾಪಡೆ ಕೊಚ್ಚಿಯಲ್ಲಿ ನಿಲ್ಲಿಸಲು ನಿರ್ಧರಿಸಿದ್ದ ಐಎನ್‌ಎಸ್ ಸೂರತ್ ಅನ್ನು ನೆರವಿಗೆ ಕಳುಹಿಸಿದ್ದಾರೆ ಎಂದು ರಕ್ಷಣಾ ಪಡೆ ಪಿಆರ್‌ಓ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ನಕ್ಸಲೀಯರಿಂದ ಐಇಡಿ ಸ್ಫೋಟ; ಹಿರಿಯ ಪೊಲೀಸ್ ಅಧಿಕಾರಿ ಹುತಾತ್ಮ



ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಸೋಮವಾರ ನಕ್ಸಲೀಯರು ಇರಿಸಿದ ಸುಧಾರಿತ ಸ್ಫೋಟಕ ಸಾಧನ (IED) ಸ್ಫೋಟಗೊಂಡು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹುತಾತ್ಮರಾಗಿದ್ದಾರೆ. ಇತರ ಕೆಲವು ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. 2013ರ ಬ್ಯಾಚ್‌ನ ರಾಜ್ಯ ಪೊಲೀಸ್ ಸೇವಾ ಅಧಿಕಾರಿಯಾಗಿದ್ದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಕೊಂಟಾ ವಿಭಾಗ) ಆಕಾಶ್‌ರಾವ್ ಗಿರೆಪುಂಜೆ ಸ್ಫೋಟದಲ್ಲಿ ಹುತಾತ್ಮರಾದವರು ಎಂದು ರಾಜ್ಯದ ಉಪಮುಖ್ಯಮಂತ್ರಿ ವಿಜಯ್ ಶರ್ಮಾ ತಿಳಿಸಿದ್ದಾರೆ. ನಕ್ಸಲೀಯರು ಹಿಂಸಾಚಾರವನ್ನು ದೂರವಿಡಬೇಕು, ಮುಖ್ಯವಾಹಿನಿಗೆ ಬರಬೇಕು. ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದು ಶರ್ಮಾ ಹೇಳಿದ್ದಾರೆ. ASP ಮತ್ತು ಇತರ ಸಿಬ್ಬಂದಿ ಕಾಲ್ನಡಿಗೆಯಲ್ಲಿ ಗಸ್ತು ತಿರುಗುತ್ತಿದ್ದಾಗ ಕೊಂಟಾ–ಎರ್ರಾಬೋರ್ ರಸ್ತೆಯ ದೊಂಡ್ರಾ ಗ್ರಾಮದ ಬಳಿ ಈ ಘಟನೆ ನಡೆದಿದೆ. ಇತ್ತೀಚೆಗೆ ಬಿಜಾಪುರದಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಐವರು ಹತ್ಯೆಯಾಗಿದ್ದರು. ಇದರ ಬೆನ್ನಲ್ಲೇ ಮತ್ತೆ ಚುರುಕು ಆಗಿರುವ ನಕ್ಸಲೀಯರು ಸೋಮವಾರ ಐಇಡಿ ಸ್ಫೋಟಿಸುವ ಮೂಲಕ ಹಿರಿಯ ಪೊಲೀಸ್ ಅಧಿಕಾರಿಯನ್ನು ಹತ್ಯೆ ಮಾಡಿದ್ದಾರೆ.

ಮುಂಬೈನ ಎಲ್ಲಾ ಸಬರ್ಬನ್ ರೈಲುಗಳಿಗೆ ಶೀಘ್ರ ಸ್ವಯಂಚಾಲಿತ ಬಾಗಿಲು ವ್ಯವಸ್ಥೆ



ಮುಂಬೈ: ಥಾಣೆ ಜಿಲ್ಲೆಯಲ್ಲಿ ಚಲಿಸುತ್ತಿದ್ದ ಲೋಕಲ್ ರೈಲಿನಿಂದ ಬಿದ್ದು ಆರು ಪ್ರಯಾಣಿಕರು ಸಾವನ್ನಪ್ಪಿದ ನಂತರ ಎಚ್ಚೆತ್ತುಕೊಂಡ ರೈಲ್ವೆ ಸಚಿವಾಲಯ, ಮುಂಬೈ ಸಬರ್ಬನ್‌ಗಾಗಿ ಅಸ್ತಿತ್ವದಲ್ಲಿರುವ ಮತ್ತು ಹೊಸ ಲೋಕಲ್ ರೈಲುಗಳ ಎಲ್ಲಾ ಬೋಗಿಗಳಲ್ಲಿ ಸ್ವಯಂಚಾಲಿತವಾಗಿ ಬಾಗಿಲು ಮುಚ್ಚುವ ಸೌಲಭ್ಯ ಕಲ್ಪಿಸಲು ನಿರ್ಧರಿಸಿದೆ. ಮಹಾರಾಷ್ಟ್ರದಲ್ಲಿ ಸಂಭವಿಸಿದ ದುರಂತದ ನಂತರ ಮುಂಬೈ ಸಬರ್ಬನ್‌ಗಾಗಿ ತಯಾರಾಗುತ್ತಿರುವ ಎಲ್ಲಾ ಲೋಕಲ್ ರೈಲುಗಳಲ್ಲಿ ಸ್ವಯಂಚಾಲಿತ ಬಾಗಿಲು ಮುಚ್ಚುವ ಸೌಲಭ್ಯ ಕಲ್ಪಿಸಲು ರೈಲ್ವೆ ಸಚಿವಾಲಯ ನಿರ್ಧರಿಸಿದೆ ಎಂದು ರೈಲ್ವೆ ಮಂಡಳಿ ಮಾಹಿತಿ ಮತ್ತು ಪ್ರಚಾರದ ಕಾರ್ಯನಿರ್ವಾಹಕ ನಿರ್ದೇಶಕ ದಿಲೀಪ್‌ಕುಮಾರ್ ಹೇಳಿದ್ದಾರೆ. ಇದಲ್ಲದೆ, ಪ್ರಸ್ತುತ ಸೇವೆಯಲ್ಲಿರುವ ಎಲ್ಲಾ ರೇಕ್‌ಗಳನ್ನು ಮರುವಿನ್ಯಾಸಗೊಳಿಸಲಾಗುವುದು ಮತ್ತು ಮುಂಬೈ ಸಬರ್ಬನ್‌ನ ಈ ರೇಕ್‌ಗಳಲ್ಲಿ ಬಾಗಿಲು ಮುಚ್ಚುವ ಸೌಲಭ್ಯವನ್ನು ಒದಗಿಸಲಾಗುವುದು ಎಂದು ತಿಳಿಸಿದ್ದಾರೆ. ಸುರಕ್ಷತೆಯು ರೈಲ್ವೆಯ ಪ್ರಮುಖ ಆದ್ಯತೆಯಾಗಿದೆ ಮತ್ತು ಅಂತಹ ಅಪಘಾತಗಳು ಮರುಕಳಿಸದಂತೆ ತಡೆಯಲು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಒತ್ತಿ ಹೇಳಿದರು.

ವಲಸೆ ನೀತಿ ವಿರೋಧಿಸಿ ಲಾಸ್ ಏಂಜಲೀಸ್‌ನಲ್ಲಿ ಹಿಂಸಾತ್ಮಕ ಪ್ರತಿಭಟನೆ



ಲಾಸ್ ಏಂಜಲೀಸ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಲಸೆ ನೀತಿ, ಅಮೆರಿಕವನ್ನು ಅಕ್ಷರಶಃ ಹಿಂಡಿ ಹಿಪ್ಪೆ ಮಾಡುತ್ತಿದೆ. ಲಾಸ್ ಏಂಜಲೀಸ್‌ನಲ್ಲಿ ವಲಸೆ ಅಧಿಕಾರಿಗಳ ಶೋಧ ಕಾರ್ಯ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಗಳು ತೀವ್ರ ಹಿಂಸಾತ್ಮಕ ರೂಪ ತಳೆದಿದ್ದು, ಪ್ರತಿಭಟನೆಗಳನ್ನು ಹತ್ತಿಕ್ಕಲು ನ್ಯಾಷನಲ್ ಗಾರ್ಡ್ ನಿಯೋಜನೆ ಮಾಡಲಾಗಿದೆ. ವಲಸೆ ಪರ ಮತ್ತು ವಿರೋಧಿ ಪ್ರದರ್ಶನಗಳು ತೀವ್ರಗೊಂಡಿದ್ದು, ವಲಸೆ ಅಧಿಕಾರಿಗಳ ಶೋಧಕಾರ್ಯ ಖಂಡಿಸಿ ಲಾಸ್ ಏಂಜಲೀಸ್‌ನಲ್ಲಿ ಭುಗಿಲೆದ್ದ ಪ್ರತಿಭಟನೆಗಳು ತೀವ್ರ ಹಿಂಸಾತ್ಮಕ ರೂಪ ತಳೆದಿವೆ. ಕಾರುಗಳಿಗೆ ಬೆಂಕಿ ಹಚ್ಚಿ ಲಾಸ್ ಏಂಜಲೀಸ್‌ನ ಹೆದ್ದಾರಿ ತಡೆಯಲೆತ್ನಿಸಿದ ಪ್ರತಿಭಟನಾಕಾರರನ್ನು ಚದುರಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಆದರೆ ಪರಿಸ್ಥಿತಿ ಕೈ ಮೀರಿರುವುದರಿಂದ ಟ್ರಂಪ್ ಆಡಳಿತವು ನ್ಯಾಷನಲ್ ಗಾರ್ಡ್ ತುಕಡಿಯನ್ನು ನಿಯೋಜನೆ ಮಾಡಿದೆ. ಇದು ಪ್ರತಿಭಟನಾಕಾರರ ಆಕ್ರೋಶವನ್ನು ಮತ್ತಷ್ಟು ಹೆಚ್ಚಿಸಿದ್ದು, ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಜಟಾಪಟಿ ನಡೆಯುತ್ತಿದೆ.

ಸಿಕ್ಕಿಂ ಭೂಕುಸಿತ: ಸೇನಾ ಸಿಬ್ಬಂದಿ ಮೃತದೇಹ ಪತ್ತೆ, ಐವರಿಗಾಗಿ ಶೋಧ



ಗ್ಯಾಂಗ್‌ಟಾಕ್: ಈ ತಿಂಗಳ ಆರಂಭದಲ್ಲಿ ಉತ್ತರ ಸಿಕ್ಕಿಂನ ಚಾಟೆನ್‌ನ ಸೇನಾ ಶಿಬಿರದಲ್ಲಿ ಭೂಕುಸಿತ ಸಂಭವಿಸಿದ ನಂತರ ನಾಪತ್ತೆಯಾಗಿದ್ದ ಆರು ಸೇನಾ ಸಿಬ್ಬಂದಿಯ ಪೈಕಿ ಒಬ್ಬ ಸಿಬ್ಬಂದಿಯ ಮೃತದೇಹವನ್ನು ಸೋಮವಾರ ಮಂಗನ್ ಜಿಲ್ಲೆಯಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹುತಾತ್ಮ ಯೋಧನನ್ನು ಸೈನುದ್ದೀನ್ ಪಿಕೆ ಎಂದು ಗುರುತಿಸಲಾಗಿದೆ. ಕಾಣೆಯಾದ ಇತರ ಸೇನಾ ಸಿಬ್ಬಂದಿಯನ್ನು ಪತ್ತೆಹಚ್ಚಲು ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಮಂಗನ್ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಸೋನಮ್ ಡೆಟ್ಚು ಭುಟಿಯಾ ಅವರು ತಿಳಿಸಿದ್ದಾರೆ. ಜೂನ್ 1ರಂದು ಚಾಟೆನ್‌ನಲ್ಲಿರುವ ಸೇನಾ ಶಿಬಿರದಲ್ಲಿ ಸಂಭವಿಸಿದ ಭೂಕುಸಿತದ ನಂತರ ಕಾಣೆಯಾದ 6 ಸಿಬ್ಬಂದಿಗಳಲ್ಲಿ ಒಬ್ಬರಾದ ಸೇನಾ ಸಿಬ್ಬಂದಿ ಸೈನುಧೀನ್ ಪಿಕೆ ಅವರ ಮೃತದೇಹವನ್ನು ರಕ್ಷಣಾ ತಂಡಗಳು ವಶಪಡಿಸಿಕೊಂಡಿವೆ ಎಂದು ಎಸ್‌ಪಿ ಹೇಳಿದ್ದಾರೆ. ಕಾಣೆಯಾದವರ ಹೊರತಾಗಿ, ಮೂವರು ಸೇನಾ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದು, ಇತರ ನಾಲ್ವರು ಭೂಕುಸಿತದಲ್ಲಿ ಗಾಯಗೊಂಡಿದ್ದಾರೆ.

ಗಾಜಾ ಆಸ್ಪತ್ರೆ ಕೆಳಗೆ ಹಮಾಸ್ ಉಗ್ರರ ಸುರಂಗ: ವಿಡೀಯೋ ವೈರಲ್



ಟೆಲ್ ಅವೀವ್(ಇಸ್ರೇಲ್): ಗಾಜಾ ಮೇಲೆ ಇಸ್ರೇಲ್ ದಾಳಿ ತೀವ್ರಗೊಳಿಸಿದೆ. ಈ ಮಧ್ಯೆ ಇತ್ತೀಚೆಗೆ ಗಾಜಾದ ಖಾನ್ ಯೂನಿಸ್ ಎಂಬಲ್ಲಿರುವ ಪ್ರಮುಖ ಆಸ್ಪತ್ರೆಯ ಕೆಳಗಡೆ ಗಾಜಾ ಉಗ್ರರು ಸುರಂಗ ನಿರ್ಮಿಸಿರುವುದನ್ನು ಪತ್ತೆ ಹಚ್ಚಿದ್ದೇವೆ ಎಂದು ಇಸ್ರೇಲ್ ಸೇನಾಪಡೆ ತಿಳಿಸಿದೆ. ಅಲ್ಲಿನ ಯೂರೋಪಿಯನ್ ಆಸ್ಪತ್ರೆಯ ಆವರಣದಲ್ಲಿ ಈ ಸುರಂಗವನ್ನು ಕಂಡುಹಿಡಿದಿರುವುದಾಗಿ ಸೇನೆ ಹೇಳಿದೆ.

ಹಮಾಸ್‌ನ ಹಿರಿಯ ನಾಯಕರು ಇದನ್ನು ತಮ್ಮ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ ಹಾಗೂ ಇಸ್ರೇಲ್ ಮೇಲೆ ದಾಳಿ ನಡೆಸಲು ಬೇಸ್ ಆಗಿ ಬಳಸುತ್ತಿದ್ದರು ಎಂದು ಸೇನೆ ತಿಳಿಸಿದೆ. ಸುರಂಗದ ವೀಡಿಯೋವನ್ನು ಐಡಿಎಫ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದೆ. ರೈಫಲ್ ಮತ್ತಿತರ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿರುವ ನಿಯಂತ್ರಣ ಕೇಂದ್ರಗಳು, ಕಣ್ಗಾವಲು ಉಪಕರಣಗಳು ಹಾಗು ಮತ್ತಿತರೆ ಸಲಕರಣೆಗಳನ್ನು ಕೂಡಿಟ್ಟಿರುವುದು ವಿಡಿಯೋದಲ್ಲಿ ಚಿತ್ರಿಸಲಾಗಿದೆ. ಹಮಾಸ್ ಉಗ್ರರು ಗಾಜಾದಲ್ಲಿರುವ ಆಸ್ಪತ್ರೆಗಳನ್ನು ತನ್ನ ಸ್ವಂತ ಉದ್ದೇಶಗಳನ್ನು ಈಡೇರಿಸಲು ನೆಲೆಗಳನ್ನಾಗಿ ಬಳಸುತ್ತಿದ್ದಾರೆ. ಈ ಮೂಲಕ ನಾಗರಿಕರ ಜೀವಕ್ಕೆ ಹಾನಿ ಮಾಡುತ್ತಿದ್ದಾರೆ ಎಂದು ಅದು ಆರೋಪಿಸಿದೆ.

ಅನುವಾದದ ಹೊಸ ಪಥ ಸೃಷ್ಟಿಸಿದ ದೀಪಾ ಭಾಸ್ತಿ

ಹಾಸನದ ಅನುವಾದಕಿ ಜ.ನಾ.ತೇಜಶ್ರೀ ಅಭಿಮತ



ಬೂಕರ್ ಪ್ರಶಸ್ತಿ ಪುರಸ್ಕೃತೆ ದೀಪಾ ಭಾಸ್ತಿ ಅವರನ್ನು ಜಿಲ್ಲಾ ಕಸಾಪ, ಜಿಲ್ಲಾ ಮಹಿಳಾ ಬರಹಗಾರರ ಸಂಘ ಸನ್ಮಾನಿಸಿತು.

ಮಡಿಕೇರಿ, ಜೂ.9–ಬೂಕರ್ ಪ್ರಶಸ್ತಿ ವಿಜೇತೆ ದೀಪಾ ಭಾಸ್ತಿ ಅವರು ತಮ್ಮ ಕೃತಿಯ ಮೂಲಕ ಸಾಂಪ್ರದಾಯಿಕವಾದ ಅನುವಾದ ಚೌಕಟ್ಟುಗಳನ್ನು ಮೀರಿ ಸೃಜನಾತ್ಮಕವಾದ ಅನುವಾದದ ಹೊಸ ಪಥವನ್ನು ಸೃಷ್ಟಿಸಿದ್ದಾರೆ ಎಂದು ಹಾಸನ ಜಿಲ್ಲೆಯ ಕವಿ ಮತ್ತು ಅನುವಾದಕಿ ಜ.ನಾ.ತೇಜಶ್ರೀ ಅಭಿಪ್ರಾಯಿಸಿದ್ದಾರೆ.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಡಗು ಜಿಲ್ಲಾ ಮಹಿಳಾ ಬರಹಗಾರರ ಸಂಘ ಮತ್ತು ಮಡಿಕೇರಿ ತಾಲೂಕು ಕಸಾಪ ಸಂಯುಕ್ತಾಶ್ರಯದಲ್ಲಿ ನಗರದ ರೆಡ್‌ಬ್ರಿಕ್ಸ್‌ನ ಸತ್ಕಾರ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಬೂಕರ್ ಪ್ರಶಸ್ತಿಗೆ ಪಾತ್ರರಾದ ದೀಪಾ ಭಾಸ್ತಿ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಖ್ಯಾತ ಸಾಹಿತಿ ಬಾನು ಮುಷ್ತಾಕ್ ಅವರ ಕೃತಿಯ ಅನುವಾದದಲ್ಲಿ ಕನ್ನಡದ ಭಾಷಾ ಸೌಂದರ್ಯದ ಚೆಲುವನ್ನು ಹಾಗೆಯೇ ಕಾಯ್ದುಕೊಂಡಿದ್ದಾರೆ ಎಂದರು.

ದೀಪಾ ಭಾಸ್ತಿ ಇಂತಹ ಅನುವಾದದ ಕಟ್ಟು ಪಾಡುಗಳನ್ನು ಮುರಿದು ಮುನ್ನುಗ್ಗಿದ್ದಾರೆ. ಎಂದು ನುಡಿದರು.

ಅನುವಾದ ಸಾಹಿತ್ಯದ ಮಿನುಗುತಾರೆ: ಸಮಾರಂಭವನ್ನು ಉದ್ಘಾಟಿಸಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ ಪದ್ಮಾಶೇಖರ್ ಮಾತನಾಡಿ, ದೀಪಾ ಭಾಸ್ತಿ ಅನುವಾದ ಸಾಹಿತ್ಯದ ಮಿನುಗುತಾರೆಯಾಗಿ ನಾಳಿನ ಭರವಸೆಯ ಬೆಳಕಾಗಿ ಮೂಡಿ ಬಂದಿದ್ದಾರೆ. ಇಂತಹ ಭರವಸೆಯ ಬೆಳಕನ್ನು ಆರದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರದ್ದು ಎಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ದೀಪಾ ಬಾಸ್ತಿ ಕನ್ನಡದ ಮೂಲ ನೆಲೆಯನ್ನು ಇಂಗ್ಲೀಷ್ ಸಾಹಿತ್ಯದಲ್ಲಿ ಪ್ರತಿಬಿಂಬಿಸುವ ಮೂಲಕ ಕನ್ನಡ ಭಾಷೆಯ ಬಗ್ಗೆಯೂ ಇಂಗ್ಲೀಷ್ ಭಾಷಾ ಓದುಗರಿಗೆ ತಿಳಿಸುವ ಪ್ರಯತ್ನವಾಗಿ ಕನ್ನಡದ ಪದಗಳನ್ನು ಯಥಾವತ್ತಾಗಿ ಅನುವಾದದಲ್ಲಿ ಬಳಸಿಕೊಂಡಿದ್ದೇನೆ. ಅನುವಾದಗಳ ಸಂದರ್ಭ ಇಲ್ಲಿನ ಪದಗಳನ್ನು ಇಂಗ್ಲೀಷ್‌ನಲ್ಲಿ ಅರ್ಥೈಸುವ ಗೋಜಲುಗಳಿಗೆ ಬದಲಾಗಿ ಇಲ್ಲಿರುವ ಪದಗಳನ್ನು ಬಳಸಿರುವುದಾಗಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಹಿರಿಯ ಪತ್ರಕರ್ತ ಜಿ. ಚಿದ್ವಿಲಾಸ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮೆಚ್ಚುಗೆಯ ನುಡಿಗಳನ್ನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಕೊಡಗು ಜಿಲ್ಲಾ ಮಹಿಳಾ ಬರಹಗಾರರ ಸಂಘದ ಅಧ್ಯಕ್ಷ ಮರಿಯ ನೆರವನ ರೇವತಿ ರಮೇಶ್, ಮಡಿಕೇರಿ ತಾಲ್ಲೂಕು ಕಸಾಪ ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್ ಉಪಸ್ಥಿತರಿದ್ದರು.

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ: ಹೈಕೋರ್ಟ್‌ನಲ್ಲಿ ವಿಚಾರಣೆ



ಡಾ.ಸುಬ್ರಮಣಿಯನ್ ಸ್ವಾಮಿ, ನಾಚಪ್ಪ

ಮಡಿಕೇರಿ, ಜೂ.9– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಬೇಡಿಕೆಗೆ ಪೂರಕವಾಗಿ ಆಯೋಗವನ್ನು ರಚಿಸಬೇಕೆಂದು ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯ ವಿಚಾರಣೆ ಇಂದು ಹೈಕೋರ್ಟ್‌ನಲ್ಲಿ ನಡೆಯಿತು.

ಡಾ.ಸುಬ್ರಮಣಿಯನ್ ಸ್ವಾಮಿ ಮತ್ತು ಎನ್.ಯು.ನಾಚಪ್ಪ ಪರವಾಗಿ ಹೈಕೋರ್ಟ್ ವಕೀಲ ಕೀರನ್ ನಾರಾಯಣ್ ನ್ಯಾಯಾಲಯದಲ್ಲಿ ಹಾಜರಿದ್ದರು.

ಸಂವಿಧಾನದ ಆಶಯಗಳಿಗೆ ಪೂರಕವಾಗಿ ಕಾನೂನು ಹೋರಾಟದಿಂದ ಕೊಡವ ಬುಡಕಟ್ಟು ಜನಾಂಗಕ್ಕೆ ನ್ಯಾಯ ಸಿಗಲಿದೆ. ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಮತ್ತು ಎಸ್.ಟಿ ಟ್ಯಾಗ್ ಪಡೆಯುವ ವಿಶ್ವಾಸವಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಸುದ್ದಿ ಗಾರರಿಗೆ ತಿಳಿಸಿದರು. ಭೂರಾಜಕೀಯ ಸ್ವಾಯತ್ತತೆಯೊಂದಿಗೆ ಕೊಡವರ ಸಂವಿಧಾನಿಕ ಹಕ್ಕು, ಸ್ವಯಂ ನಿರ್ಣಯದ ಹಕ್ಕು, ಸ್ವಯಂ ಆಡಳಿತದ ಹಕ್ಕಿನ ವಿಚಾರವಾಗಿ ಕಳೆದ 35 ವರ್ಷಗಳಿಂದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಶಾಂತಿಯುತವಾಗಿ ಹೋರಾಟವನ್ನು ನಡೆಸಿಕೊಂಡು ಬರುತ್ತಿದ್ದು, ನ್ಯಾಯಾಲಯದ ಮೂಲಕ ಜಯ ಸಿಗಲಿದೆ ಎಂದು ತಿಳಿಸಿದರು.

ಅಳತೆ ಮೀರಿದರೆ ಆಪತ್ತು: ಮುಂದಿನ ಚಕ್ರ ಮೇಲೆತ್ತಿ ನಿಂತ ಪಿಕಪ್ ವಾಹನ

ನಾಪೋಕ್ಲು, ಜೂ.9 (ದುಗ್ಗಳ ಸದಾನಂದ)– ಎತ್ತಿನ ಗಾಡಿ, ಕತ್ತೆ, ಕುದುರೆಗಳಿಗೆ ಹೆಚ್ಚಿನ ಭಾರವನ್ನು ಹೊರಿಸಿದಾಗ ಕೆಲವು ಘಟನೆಗಳು ಜರುಗಿದ್ದನ್ನು ನೀವು ನೋಡಿರಬಹುದು. ಇದೀಗ ಅದೇ ರೀತಿ ಸರಕು ವಾಹನ ತಮ್ಮ ಅಸಹಾಯಕತೆಯನ್ನು ಪ್ರದರ್ಶಿಸಿದಂತೆ ಭಾಸವಾಗಿರುವ ಪ್ರಸಂಗವೊಂದು ನಡೆದಿದೆ.

ಪಿಕಪ್(ಕೆ.ಎಲ್12, ಎ–8442) ವಾಹನಕ್ಕೆ ಹೇಗಿದ್ದೂ ಡೀಸೆಲ್ ಹಾಕಿಸಲಾಗಿದೆ. ಹೆಚ್ಚು ಹಣ ಗಳಿಸಬೇಕೆಂದು ಮಾಲೀಕ ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮರದ ತೊಲೆಗಳನ್ನು ಹಾಕಿದ್ದು ಸಾಲದೆಂಬಂತೆ ಚಾಲಕ 8 ಮಂದಿಯನ್ನು ವಾಹನದ ಒಳಗೆ ಮತ್ತು ಮುಂಭಾಗದ ಬಾನೆಟ್‌ನಲ್ಲಿ ಕೂರಿಸಿಕೊಂಡು ಹಟ್ಟಿಹೊಳೆ–ಮಾಂದಲ್ ಪಟ್ಟಿ ರಸ್ತೆಯಲ್ಲಿ ಸಾಗುತ್ತಿದ್ದನು. ಆದರೆ ಪಾಪ ಪಿಕಪ್ ವಾಹನ ಭಾರವನ್ನು ತಾಳಲಾರದೆ ಮುಂದಿನ ಚಕ್ರ ಮೇಲೆಕ್ಕೆ ಎತ್ತಿಕೊಂಡು ನಿಂತಿದೆ. ಅದನ್ನು ಯಥಾಸ್ಥಿತಿಗೆ ತರಲು ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವೇ ಆಗಲಿಲ್ಲ; ಕೊನೆಗೆ ಎಲ್ಲರೂ ಕೆಳಗಿಳಿದು ರಾಶಿಯಾಗಿ ಹಾಕಿದ್ದ ಸ್ವಲ್ಪ ಮರದ ತೊಲೆಯನ್ನು ತೆಗೆದ ನಂತರವೇ ಆ ವಾಹನ ಮತ್ತೆ ಎಂದಿನ ಸ್ಥಿತಿಗೆ ತಲುಪಿ ಮುಂದಿನ ಚಕ್ರ ಕೆಳಗಿಳಿದು ರಸ್ತೆಮೇಲೆ ನಿಂತಿತು. ಮಿತಿಗಿಂತ ಹೆಚ್ಚು ಭಾರ ಹೇರುವ ವಾಹನಗಳ ಮಾಲೀಕರಿಗೆ ಇದು ಎಚ್ಚರಿಕೆಯ ಕರೆಗಂಟೆ ಎನ್ನಬಹುದಾಗಿದೆ



ಅತಿಭಾರದಿಂದ ಮುಂದಿನ ಚಕ್ರ ಮೇಲೆತ್ತಿ ನಿಂತಿರುವ ಪಿಕಪ್ ವಾಹನ.

ನೊಂದ ಕುಟುಂಬಕ್ಕೆ ನೂತನ ಮನೆ ಹಸ್ತಾಂತರ



ನೊಂದ ಕುಟುಂಬಕ್ಕೆ ಶಾಸಕ ಡಾ.ಮಂತರ್ ಗೌಡ ಮನೆಯ ಕೀಯನ್ನು ಹಸ್ತಾಂತರಿಸಿದರು.

> ಹಣವಿಲ್ಲದ ನಮಗೆ ಮನೆ ಕಟ್ಟಿಕೊಳ್ಳಲು ಸಾಧ್ಯವಿರಲಿಲ್ಲ. ಆಸ್ತಿಗೆ ಪತ್ರ ಕೂಡ ಇರಲಿಲ್ಲ. ಹೀಗಾಗಿ ಸರ್ಕಾರದಿಂದಲೂ ಮನೆ ಸಿಗಲಿಲ್ಲ. ಇಂತಹ ಸಂದರ್ಭ ಶಾಸಕ ಮಂತರ್ ಗೌಡ ಅವರು ದೇವರ ಕೃಪೆಯಂತೆ ನೆರವಿಗೆ ಬಂದಂತಾಗಿದೆ.
> –ಮೃತ ಮೀನಾಳ ತಾಯಿ ಜಾನಕಿ

ಮಡಿಕೇರಿ: ಮಗಳನ್ನು ಕಳೆದುಕೊಂಡ ನೊಂದ ಕುಟುಂಬಕ್ಕೆ 8.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ನೂತನ ಮನೆಯನ್ನು ಮೀನಾಳ ಪೋಷಕರಿಗೆ ಹಸ್ತಾಂತರಿಸಿದರು.

ಸೋಮವಾರಪೇಟೆ ತಾಲೂಕಿನ ಕುಂಬಾರಗಡಿಗೆಯ ಮನೆ ಪ್ರವೇಶ ಮಾಡಿದ ಶಾಸಕರು ಮನೆಯನ್ನು ವೀಕ್ಷಣೆ ಮಾಡಿ ಕುಟುಂಬಕ್ಕೆ ಸಾಂತ್ವನ ಹೇಳಿ ಗ್ರಾಮಸ್ಥರು ಮತ್ತು ಕುಟುಂಬ ವರ್ಗದ ಜೊತೆಯಲ್ಲೇ ಭೋಜನ ಸ್ವೀಕರಿಸಿದರು. ಬಳಿಕ ಮಾತನಾಡಿದ ಅವರು, ಇದು ರಾಜಕೀಯ ನಿರ್ಣಯವಲ್ಲ. ಮಾನವೀಯತೆಯಿಂದ ನಡೆದು ಕೊಳ್ಳಬೇಕಾದ ಕೆಲಸವನ್ನಷ್ಟೆ ಮಾಡಿದ್ದೇವೆ. ಮಗಳಿಲ್ಲದ ನೋವನ್ನು ಈ ಮನೆ ಕಿಂಚಿತ್ತಾದರೂ ಕಡಿಮೆ ಮಾಡಲಿ ಎಂಬ ಆಶಯ ನಮ್ಮದು ಎಂದು ಶಾಸಕ ಡಾ.ಮಂತರ್‌ಗೌಡ ಹೇಳಿದರು. ಮುಂದಿನ ದಿನಗಳಲ್ಲಿ ಈ ಕುಟುಂಬದ ಕಲ್ಯಾಣಕ್ಕೂ ಎಲ್ಲಾ ರೀತಿಯ ಸಹಕಾರ ನೀಡುವ ಭರವಸೆಯನ್ನು ನೀಡಿದರು.

ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ ಮಾತನಾಡಿ, ಸೋಮವಾರಪೇಟೆ ತಾಲೂಕಿನ ಗರ್ವಾಲೆ ಪಂಚಾಯಿತಿ ವ್ಯಾಪ್ತಿಯಲ್ಲಿ ಬಡವರ ಸಂಖ್ಯೆ ಹೆಚ್ಚಿದೆ. ಇಂತಹ ಪ್ರದೇಶಗಳಿಗೆ ಸರ್ಕಾರದ ಯೋಜನೆಗಳು ಮೊದಲು ತಲುಪುವಂತಾಗಬೇಕು ಎಂದು ಒತ್ತಿ ಹೇಳಿದರು.

ಮೃತ ವಿದ್ಯಾರ್ಥಿನಿ ಮೀನಾಳ ತಂದೆ ಯು.ಸುಬ್ರಮಣಿ, ತಾಯಿ ಜಾನಕಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಬಿ.ಸತೀಶ್, ಡಿಸಿಸಿ ಉಪಾಧ್ಯಕ್ಷ ಕೆ.ಎಂ. ಲೋಕೇಶ್, ಕಾಂಗ್ರೆಸ್ ಪಕ್ಷ ಪ್ರಮುಖರಾದ ಸುಜು ತಿಮ್ಮಯ್ಯ, ಸೋಮಯ್ಯ, ದೇವಯ್ಯ, ಓಂಕಾರಪ್ಪ, ತೆನ್ನಿರ ಮೈನಾ, ಹಂಸ, ಸುರೇಶ್, ವಿನೋದ್, ಜನಾರ್ಧನ್ ಮತ್ತಿತರರು ಉಪಸ್ಥಿತರಿದ್ದರು.

ಯೋಗ ದಿನಾಚರಣೆ: ಇಂದು ಸ್ವಚ್ಛತಾ ಅಭಿಯಾನ

ಮಡಿಕೇರಿ ಜೂ.9–ಅಂತರರಾಷ್ಟ್ರೀಯ 11ನೇ ಯೋಗ ದಿನಾಚರಣೆ ಪ್ರಯುಕ್ತ ಯೋಗಭ್ಯಾಸದೊಂದಿಗೆ ಶ್ರಮದಾನ ಮತ್ತು ಸ್ವಚ್ಛತಾ ಅಭಿಯಾನ ಹಾಗೂ ಸಸ್ಯಗಳನ್ನು ನೆಡುವ ಕಾರ್ಯಕ್ರಮವು ಜೂನ್, 10 ರ ಬೆಳಿಗ್ಗೆ 8.30 ಗಂಟೆಗೆ ನಗರದ ಗಾಂಧಿ ಮೈದಾನದಿಂದ ಗಾಂಧಿ ಭವನದವರೆಗೆ ನಡೆಯಲಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ತಿಳಿಸಿದ್ದಾರೆ.

ಇಂದು ಮೂರ್ನಾಡಲ್ಲಿ ವಿದ್ಯುತ್ ವ್ಯತ್ಯಯ

ಮಡಿಕೇರಿ: ಮೂರ್ನಾಡುನಲ್ಲಿ ಜೂನ್ 10ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಮೂರ್ನಾಡು, ಮರಗೋಡು, ಹಾಕತ್ತೂರು, ಹೊಸ್ಕೇರಿ, ಹೊದ್ದೂರು, ನರಿಯಂದಡ, ನಾಪೋಕ್ಲು, ಕುಂಜಿಲ, ಎಮ್ಮೆಮಾಡು, ಬಲ್ಲಮಾವಟಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪುಟ್ಟ ಮಕ್ಕಳ ಅಭಿವೃದ್ಧಿಗೆ ಉತ್ತಮ ಶಿಕ್ಷಣ ಅವಶ್ಯ: ಶಾಸಕ ಪೊನ್ನಣ್ಣ



ಶಾಸಕ ಎ.ಎಸ್.ಪೊನ್ನಣ್ಣ ಅಂಗನವಾಡಿ ಕೇಂದ್ರದಲ್ಲಿ ಎಲ್.ಕೆ.ಜಿ. ಮತ್ತು ಯು.ಕೆ.ಜಿ ತರಗತಿ ಉದ್ಘಾಟಿಸಿದರು.

ವಿರಾಜಪೇಟೆ: ಅಂಗನವಾಡಿಯ ಪುಟ್ಟ ಮಕ್ಕಳ ಅಭಿವೃದ್ಧಿಗೆ ಉತ್ತಮ ಶಿಕ್ಷಣದ ಅವಶ್ಯವಿದೆ. ಅಧಿಕಾರಿಗಳು ಹಾಗೂ ಶಿಕ್ಷಕರು ಪುಟ್ಟ ಮಕ್ಕಳಿಗೆ ಕ್ರೀಡೆ ಮತ್ತು ಶಿಕ್ಷಣದ ಬಗ್ಗೆ ಹೆಚ್ಚು ಒತ್ತು ನೀಡುವಂತಾಗಬೇಕೆಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು

ಪಟ್ಟಣದ ಪಂಜರುಪೇಟೆಯಲ್ಲಿರುವ ಅಂಗನವಾಡಿ ಕೇಂದ್ರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಪುಟ್ಟ ಮಕ್ಕಳ ಶಿಕ್ಷಣದ ಅಭಿವೃದ್ಧಿಗೆ ಎಲ್.ಕೆ.ಜಿ. ಮತ್ತು ಯು.ಕೆ.ಜಿ ಪ್ರಾರಂಭದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪುಟ್ಟ ಮಕ್ಕಳಿಗೆ ಅಂಗನವಾಡಿಯಲ್ಲಿಯೇ ಎಲ್.ಕೆ.ಜಿ. ಮತ್ತು ಯು.ಕೆ.ಜಿ ಕಲಿಸುವುದು ಉತ್ತಮವಾದ ಕಾರ್ಯ ಇದರಿಂದ ಮಕ್ಕಳ ತಿಳುವಳಿಕೆ ಹೆಚ್ಚಿಸುತ್ತದೆ ಹಾಗೂ ಮುಂದಿನ ಬೆಳವಣಿಗೆ ಅಭಿವೃದ್ಧಿಯತ್ತ ಸಾಗಲು ಅನುಕೂಲವಾಗುತ್ತದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಸಿ.ತಿಪ್ಪಣ್ಣ ಸಿರಸಗಿ ಮತ್ತು ಸಿಡಿಪಿಓ ಪೂಣಚ್ಚ ಸಭೆಯನ್ನುದ್ದೇಶಿಸಿ ಮಾತನಾಡಿದರು, ವೇದಿಕೆಯಲ್ಲಿ ಜಿಲ್ಲಾ ಕಾಂಗ್ರೆಸ್ ಮುಖಂಡರಾದ ಧರ್ಮಜ ಉತ್ತಪ್ಪ, ಪುರಸಭೆ ಅಧ್ಯಕ್ಷರಾದ ದೇಚಮ್ಮ ಕಾಳಪ್ಪ, ಮುಖ್ಯಾಧಿಕಾರಿ ಪಿ.ಕೆ. ನಾಚಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಕೆ. ಅಬ್ದುಲ್ ಜಲೀಲ್, ಸದಸ್ಯ ಹೆಚ್.ಎಂ. ಪೂರ್ಣಿಮ ಎಸ್.ಹೆಚ್.ಮತೀನ್, ಡಿ.ಪಿ. ರಾಜೇಶ್, ವಿ.ಆರ್.ರಜನಿಕಾಂತ್, ಅಗಸ್ಟಿನ್ ಬೆನ್ನಿ, ಅನಿತಾ, ಸುಸ್ಮಿತ, ಅಂಗನವಾಡಿ ಕಾರ್ಯಕರ್ತೆ ಜೆ.ಬಿಂದು, ಯುನಿಯನ್ ಅಧ್ಯಕ್ಷೆ ಸುಮಿತ್ರ, ಕಾರ್ಯದರ್ಶಿ ಎ.ವಿ.ಶೀಲಾ, ಉಪಸ್ಥಿತರಿದ್ದರು. ಶಿಕ್ಷಕಿ ಗೀತಾ ಸ್ವಾಗತಿಸಿದರೆ, ಕೆ.ಎಂ.ಉಷಾ ನಿರೂಪಿಸಿದರು.

ಕೊಳ್ಳೇಗಾಲ ನಗರಸಭೆಗೆ ದಿಢೀರ್ ಭೇಟಿ

ಮಹಿಳಾ ಸಿಬ್ಬಂದಿ ವಿರುದ್ಧ ಶಾಸಕರ ಗರಂ



ನಗರಸಭೆಗೆ ದಿಢೀರ್ ಭೇಟಿ ನೀಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ ಸಿಬ್ಬಂದಿಗಳ ವಿರುದ್ಧ ಛೀಮಾರಿ ಹಾಕಿದರು.

ಕೊಳ್ಳೇಗಾಲ. ಜೂ.9– ನಗರಸಭೆ ಕಚೇರಿಗೆ ಆಗಮಿಸಿದಂತಹ ಸಾರ್ವಜನಿಕರನ್ನು ಏಕವಚನದಿಂದ ಮಾತನಾಡಿಸುತ್ತಿದ್ದ ಮಹಿಳಾ ಸಿಬ್ಬಂದಿ ವಿರುದ್ಧ ಶಾಸಕ ಎ.ಆರ್.ಕೃಷ್ಣಮೂರ್ತಿ ಹರಿಹಾಯ್ದು ಎಚ್ಚರಿಕೆ ನೀಡಿದ ಪ್ರಸಂಗ ನಡೆಯಿತು.

ನಗರಸಭೆ ದ್ವಿತೀಯ ದರ್ಜೆ ಸಹಾಯಕಿ ಗುಣಶ್ರೀ ಅವರನ್ನು ತೀವ್ರವಾಗಿ ತರಾಟೆ ತೆಗೆದುಕೊಂಡು ನೋಡಮ್ಮ, ನೀನು ಸಾರ್ವಜನಿಕರು, ಬಡವರಿಗೆ ಮೊದಲು ಗೌರವ ನೀಡುವುದನ್ನ ಕಲಿಯಬೇಕು, ನಿಮ್ಮ ಹೆಸರಲ್ಲಿ ಗುಣವಿದೆ. ಆದರೆ ನಡೆಯಲ್ಲಿ ಇಲ್ಲ, ಎಂದು ಛೀಮಾರಿ ಹಾಕಿದರು.

ನಗರಸಭೆಗೆ ಇಂದು ಮಧ್ಯಾಹ್ನ ದಿಢೀರ್ ಭೇಟಿ ನೀಡಿದ್ದ ಶಾಸಕರು ಬಡವರ ಜೊತೆ ಉತ್ತಮ ಗುಣಹೊಂದಿ ಮಾತನಾಡಿಸುತ್ತಿಲ್ಲವಲ್ಲ ಎಂದಾಕೆಯನ್ನು ಖಾರವಾಗಿ ಪ್ರಶ್ನಿಸಿ ಈ ವರ್ಷ ಮಾತ್ರ ಇಲ್ಲಿರು, ಮುಂದೆ ಇಲ್ಲಿಂದ ಹೊರಡಮ್ಮ ಎಂದು ಬೇಸರದಿಂದಲೇ ಹೇಳಿದರು

ಕಚೇರಿಗೆ ಕೆಲಸ, ಕಾರ್ಯಗಳ ನಿಮಿತ್ತ ಆಗಮಿಸುವಂತಹ ಬಡವರು, ಸಾರ್ವಜನಿರೊಂದಿಗೆ ಸೌಜನ್ಯದಿಂದ ವರ್ತಿಸುತ್ತಿಲ್ಲ ಉದ್ಧಟತನ ಹಾಗೂ ಅಸಭ್ಯವಾಗಿ ವರ್ತಿಸುತ್ತಿರುವ ಕುರಿತು ಸಾಕಷ್ಟು ದೂರುಗಳು ಕೇಳಿ ಬಂದಿವೆ. ನಾನು ಪ್ರವಾಸದಲ್ಲಿದ್ದ ವೇಳೆ ಸಾಕಷ್ಟು ಮಂದಿ ಕರೆ ಮಾಡಿ ದೂರಿದ್ದಾರೆ. ಇದು ಹೀಗೇ ಮುಂದುವರೆದಲ್ಲಿ ಶಿಸ್ತು ಕ್ರಮ ಅನಿವಾರ್ಯವಾಗುತ್ತದೆ ಎಂದು ಅಧಿಕಾರಿಗಳ ವರ್ತನೆ ವಿರುದ್ಧ ಶಾಸಕರು ಗರಮ್ಮಾದರು. ಮೊದಲು ನಾಗರಿಕರಿಂದ ಅರ್ಜಿಗಳನ್ನು ಪಡೆದು ಅರ್ಜಿದಾರರಿಗೆ ಇಷ್ಟು ದಿನದೊಳಗೆ ಬನ್ನಿ ಎಂದು ಸ್ವೀಕೃತಿ ಪತ್ರದಲ್ಲಿ ತಿಳಿಸಿ ಎಂದು ದೂರುದಾರರ ಸಮ್ಮುಖದಲ್ಲಿ ಪೌರಾಯುಕ್ತರಿಗೆ ಸೂಚಿಸಿದರು.

ಸಾರ್ವಜನಿಕರಿಂದ ನಗರಸಭೆ ಆಯುಕ್ತರು, ನೌಕರ ರಾಘವೇಂದ್ರ ವಿರುದ್ದವೂ ದೂರಿದೆ. ಆದರೆ ಹೆಚ್ಚು ದೂರುಗಳು ಗುಣಶ್ರೀ ವಿರುದ್ಧ ಕೇಳಿ ಬಂದಿದೆ. ಇಲ್ಲಿಗೆ ಕೆಲಸಕಾರ್ಯಕ್ಕಾಗಿ ಬರುವ ಬಡವರನ್ನು ಏಕ ವಚನದಿಂದ ಮಾತನಾಡಿಸುತ್ತಿರುವ ಕುರಿತು ದೂರುಗಳಿವೆ. ಮಹಿಳೆಯರನ್ನು ಸಹಾ ಇಲ್ಲಿ ಹೋಗೆ, ಬಾರೇ ಎಂದು ಅಗೌರವದಿಂದ ಸಂಭೋದಿಸುವ ಕುರಿತು ನನಗೆ ಸಾಕಷ್ಟು ದೂರುಗಳು ಬಂದಿವೆ. ಇಲ್ಲಿನ ಸಿಬ್ಬಂದಿಗಳೆಲ್ಲರೂ ಮೊದಲು ಕೆಲಸಕ್ಕೆ ಬರುವವರನ್ನು ಸೌಜನ್ಯದಿಂದ ಮಾತನಾಡಿಸಿ, ಗೌರವ ನೀಡಿ, ಕೆಲಸ ಮಾಡಿ ಕೊಡಿ ಇಲ್ಲ 1 ವಾರ, ಇಲ್ಲವೇ 15 ದಿವಸ ಬಿಟ್ಟು ಬರುವಂತೆ ಸೌಜನ್ಯದಿಂದ ಸ್ಪಂದಿಸಿ ಮುಂದೆ ಇಂತಹ ದೂರುಗಳು ಬಂದರೆ ಸಂಬಂಧಪಟ್ಟವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಶಾಸಕರು ಖಡಕ್ ಎಚ್ಚರಿಕೆ ನೀಡಿದರು.

ನಗರಸಭೆ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷ ಎ.ಪಿ.ಶಂಕರ್, ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ಪೌರಾಯುಕ್ತರು ರಮೇಶ್ ಇನ್ನಿತರಿದ್ದರು

ಚಾ.ನಗರ: 14ರಿಂದ ಗಿರಿಜಾ ಕಲ್ಯಾಣ



ಚಾಮರಾಜನಗರ, ಜೂ.9–ಪ್ರತಿ ವರ್ಷ ಕಡೆಯ ಲಗ್ನದಲ್ಲಿ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ ನಡೆಯಲಿದ್ದು, ಈ ಬಾರಿ ಜೂನ್ 14ರಿಂದ 19ರವರೆಗೆ ಮಹೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಪ್ರಧಾನ ಅರ್ಚಕ ರಾಮಕೃಷ್ಣ ಭಾರದ್ವಜ್ ಹೇಳಿದ್ದಾರೆ

ಈಗಾಗಲೇ ಈ ಬಾರಿಯೂ ಗಿರಿಜಾಕಲ್ಯಾಣ ಮಹೋತ್ಸವ ಅಚ್ಚುಕಟ್ಟಾಗಿ ನಡೆಸಲು ಮುಜರಾಯಿ ಇಲಾಖೆ, ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ದೇವಸ್ಥಾನದ ಆಡಳಿತ ಮಂಡಳಿಯಿಂದ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ ಎಂದರು

ಆಷಾಢ ಮಾಸದಲ್ಲಿ ನವದಂಪತಿಗಳನ್ನು ಒಂದೆಡೆ ಸೇರಿಸುವ, ಹಣ್ಣು ಜವನ ಎಸೆದು ಸಂಭ್ರಮಿಸುವಂತೆ ಮಾಡುವ ಪ್ರಸಿದ್ಧ ಚಾಮರಾಜೇಶ್ವರ ರಥೋತ್ಸವ ಜುಲೈ 10ರಂದು ನಡೆಯಲಿದೆ. ಆಷಾಢ ಮಾಸದಲ್ಲಿ ಶುಭ ಕಾರ್ಯಗಳು ನಡೆಯುವುದಿಲ್ಲ. ಆದರೆ, ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ರಥೋತ್ಸವ ನಡೆಯುವುದು ವಿಶೇಷವಾಗಿದೆ. ಹೀಗಾಗಿ ಆಷಾಢ ಮಾಸದ ಜಾತ್ರೆ ಎಂದೇ ಪ್ರಸಿದ್ಧಿ ಪಡೆದಿದೆ.

ರಥೋತ್ಸವದ ಹಿನ್ನೆಲೆ : ಪುರಾಣ ಪ್ರಸಿದ್ಧವಾಗಿರುವ ಚಾಮರಾಜೇಶ್ವರ ರಥೋತ್ಸವ, ಹಿಂದೆ ಅತೀ ವೈಭವವಾಗಿ ನಡೆದು, ತೆಪ್ಪೋತ್ಸವವೂ ನಡೆಯುತ್ತಿತ್ತು. 1836ರಲ್ಲಿ ಮೊದಲ ಬಾರಿಗೆ ಆಷಾಢ ಶುದ್ಧ ಹುಣ್ಣಿಮೆಯ ಸೋಮವಾರದಂದು ರಥೋತ್ಸವ ನಡೆಯಿತು. ರಥವನ್ನು ಅರೇಪುರದ ಬಸವರಾಜೇ ಅರಸು ಮಾಡಿಸಿಕೊಟ್ಟಿದ್ದರು.

1970ರಲ್ಲಿ ತೇರಿನ ಚಕ್ರ ಬದಲಾಯಿಸಲಾಗಿತ್ತು. ಈ ಹಿಂದೆ ತೇರು ಕಟ್ಟುವ ಕಾರ್ಯಕ್ಕೆ 15 ದಿನ ಹಿಡಿಯುತಿತ್ತು. ಒಟ್ಟು 56 ಕಂಬ, 84 ಅಡ್ಡಪಟ್ಟಿಗಳಿಂದ ತೇರು ಕಟ್ಟಿದ ನಂತರ, ಧ್ವಜ ಅಲಂಕಾರ ಬಟ್ಟೆಗಳಿಂದ ಸಿಂಗಾರ ಮಾಡ ಲಾಗುತ್ತಿತ್ತು. 2017ರ ಫೆಬ್ರವರಿಯಲ್ಲಿ ಮಾನಸಿಕ ಅಸ್ವಸ್ಥನೊಬ್ಬ ರಥಕ್ಕೆ ಬೆಂಕಿ ಹಾಕಿದ್ದರಿಂದ ಅದು ಸುಟ್ಟು ಹೋಗಿತ್ತು. ಆ ಬಳಿಕ 5 ವರ್ಷಗಳ ಕಾಲ ರಥೋತ್ಸವ ಸ್ಥಗಿತಗೊಂಡಿತ್ತು. ನಂತರ 2022ರಿಂದ ನೂತನ ರಥದಲ್ಲಿ ಮತ್ತೆ ರಥೋತ್ಸವ ಆರಂಭವಾಗಿದೆ.

ಚಾಮರಾಜೇಶ್ವರಸ್ವಾಮಿ ದೊಡ್ಡ ರಥ ಮುಂದೆ ಗಣಪತಿ ರಥ, ಸುಬ್ರಹ್ಮಣ್ಯಸ್ವಾಮಿ ಚಿಕ್ಕರಥ, ಚಂಡಿಕೇಶ್ವರ ಚಿಕ್ಕರಥ, ಮಹಾರಾಜರ ಉತ್ಸವ ಮೂರ್ತಿ ಸಾಗುತ್ತದೆ. ದೊಡ್ಡರಥದ ಹಿಂದೆ ಶ್ರೀಚಾಮುಂಡೇಶ್ವರಿ ಅಮ್ಮನವರ ಚಿಕ್ಕರಥ ಸಾಗುತ್ತದೆ.

ಇತಿಹಾಸದ ಪುಟಗಳಲ್ಲಿ: 1826ರ ವೇಳೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತನ್ನ ತಂದೆ ಜನಿಸಿದ ಅರಿಕುಠಾರದಲ್ಲಿ ದೇಗುಲ ಕಟ್ಟಿಸಿ ಚಾಮರಾಜನಗರವೆಂದು ನಾಮಕರಣ ಮಾಡಿದರು. ಶೃಂಗೇರಿ ಶ್ರೀಗಳು ಇಲ್ಲಿನ ರಕ್ತ ವರ್ಣದ ನರ್ಮದಾ ಶಿವಲಿಂಗ ನೀಡಿ, ಚಾಮರಾಜೇಶ್ವರ ಎಂದು ಪ್ರತಿಷ್ಠಾಪಿಸಿದ್ದರು. ದೇಗುಲದ ಅಭಿವೃದ್ಧಿಗೆ ಮಹಾರಾಜರ ಆಡಳಿತದ ವೇಳೆ 13 ಗ್ರಾಮಗಳ ಉಂಬಳಿಯೊಂದಿಗೆ ಒಡವೆ ದಾನ ನೀಡಿರುವ ಕುರಿತು ಚರಿತ್ರೆಯ ಪುಟಗಳು ಹೇಳುತ್ತವೆ.

ನವಜೋಡಿಗಳ ಜಾತ್ರೆ

ಚಾಮರಾಜೇಶ್ವರನ ಆಷಾಢ ಜಾತ್ರೆ ನವಜೋಡಿಗಳನ್ನು ಒಂದುಗೂಡಿಸು ತ್ತದೆ. ಜಾತ್ರೆಗೆ ಜಿಲ್ಲೆಯ ನವಜೋಡಿಗಳಲ್ಲದೆ ಹೊರಗಿನ ಜಿಲ್ಲೆಯ ನವಜೋಡಿಗಳು ಆಗಮಿಸಿ ರಥಕ್ಕೆ ಹಣ್ಣು–ದವನಗಳನ್ನು ಎಸೆಯುವ ಮೂಲಕ ಇಷ್ಟಗಳನ್ನು ನೆರವೇರಿಸುವಂತೆ ಪ್ರಾರ್ಥಿಸುತ್ತಾರೆ. ಅಲ್ಲದೆ, ರೈತರು ಸಹ ಮಳೆ, ಬೆಳೆಗಾಗಿ ಪ್ರಾರ್ಥಿಸುವುದು ಜಾತ್ರೆಯ ಮತ್ತೊಂದು ವಿಶೇಷವಾಗಿದೆ.

ಶಾಸಕರಿಂದ ಸೇತುವೆ ನಿರ್ಮಾಣ ಕಾಮಗಾರಿ ಪರಿಶೀಲನೆ



ವಿಧಾನಸಭಾ ವ್ಯಾಪ್ತಿಯ ದೊಡ್ಡಮೋಳೆ–ಎಡಕಟ್ಟೆ ಉತ್ತವಳ್ಳಿ ಯಡಪುರ ವಿವಿಧ ಗ್ರಾಮಗಳಲ್ಲಿ ಸೇತುವೆ ಕಾಮಗಾರಿಗೆ ಕ್ರಿಯಾಯೋಜನೆ ತಯಾರಿಸುವ ಕುರಿತು ಶಾಸಕ ಸಿ.ಪುಟ್ಟರಂಗಶೆಟ್ಟಿ ಸಣ್ಣನೀರಾವರಿ ಇಲಾಖೆ ಅಧಿಕಾರಿಗಳ ಜತೆ ಭೇಟಿ ನೀಡಿ, ಪರಿಶೀಲಿಸಿದರು.

ಚಾಮರಾಜನಗರ. ಜೂ.9–ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಸೇತುವೆ ನಿರ್ಮಾಣ ಕುರಿತ ಕಾಮಗಾರಿಗೆ ಕ್ರಿಯಾಯೋಜನೆ ತಯಾರಿಸುವ ಕುರಿತು ಶಾಸಕ ಸಿ.ಪುಟ್ಟರಂಗಶೆಟ್ಟಿ ಸಣ್ಣನೀರಾವರಿ ಇಲಾಖೆ ಅಧಿಕಾರಿಗಳ ಜತೆ ಭೇಟಿನೀಡಿ ಪರಿಶೀಲಿಸಿದರು.

ದೊಡ್ಡಮೋಳೆ–ಎಡಕಟ್ಟೆ ಉತ್ತವಳ್ಳಿ ಯಡಪುರ–ಶಿವಗಂಗೆ, ಮಲ್ಲಯ್ಯನಪುರದಲ್ಲಿ ಸೇತುವೆ ತಡೆಗೋಡೆ, ರಸ್ತೆ, ಜ್ಯೋತಿಗೌಡನಪುರ ಗ್ರಾಮ ಬಳಿ, ಅಡ್ಡಹಳ್ಳ ಜಮೀನಿಗೆ ಹೋಗುವ ಅಡ್ಡಹಳ್ಳಗಳಲ್ಲಿ ನೀರು ನಿಲ್ಲುವ ಸ್ಥಳಗಳಲ್ಲಿ ಸೇತುವೆ ನಿರ್ಮಿಸುವ ಸಂಬಂಧ ಸಾರ್ವಜನಿಕರ ಒತ್ತಾಯದ ಮೇರೆಗೆ ಪರಿಶೀಲನೆ ನಡೆಸಲಾಗಿದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಹೇಳಿದರು. ಗ್ರಾಪಂ ಸದಸ್ಯ ಮಹದೇವಸ್ವಾಮಿ, ಸಣ್ಣನೀರಾವರಿ ಇಲಾಖೆ ಎಇಇ ಅಭಿಷೇಕ್, ಇಇ ಮಂಜುಳ, ಹಾಜರಿದ್ದರು.

ನೂತನ ಎಡಿಸಿ ಜವರೇಗೌಡ ಅಧಿಕಾರ ಸ್ವೀಕಾರ



ಚಾಮರಾಜನಗರ: ಜಿಲ್ಲೆಯ ಅಪರ ಜಿಲ್ಲಾಧಿಕಾರಿಯಗಿ ಟಿ.ಜವರೇಗೌಡ ಸೋಮವಾರ ಮಧ್ಯಾಹ್ನ ಅಧಿಕಾರ ವಹಿಸಿಕೊಂಡರು.

ಈ ಹಿಂದೆ ಅಪರ ಜಿಲ್ಲಾಧಿಕಾರಿಯಾಗಿದ್ದ ಗೀತಾ ಹುಡೇದಾ ಅವರು ವರ್ಗಾವಣೆಗೊಂಡಿದ್ದು, ತೆರವಾದ ಸ್ಥಾನಕ್ಕೆ ಟಿ. ಜವರೇಗೌಡ ಅವರು ಆಗಮಿಸಿದ್ದಾರೆ.

ಟಿ.ಜವರೇಗೌಡರವರು ರಾಮನಗರ, ಚಿತ್ರದುರ್ಗ, ಮೈಸೂರಿನಲ್ಲಿ ಕರ್ತವ್ಯ ನಿರ್ವಹಿದ್ದು, ಬೆಂಗಳೂರಿನ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಇಂದು ತಾಪಂ ಕೆಡಿಪಿ ಸಭೆ

ಚಾಮರಾಜನಗರ: ವಿಧಾನಸಭಾ ಕ್ಷೇತ್ರದ ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯು ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ಜೂ. 10ರ ಬೆಳಿಗ್ಗೆ 10.30 ಗಂಟೆಗೆ ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕು ಕಚೇರಿಯ ಕಂದಾಯ ದಾಖಲೆ ಶೌಚಾಲಯದ ನೀರುಪಾಲು

ಗುಂಡ್ಲುಪೇಟೆ, ಜೂ–9 (ಸೋಮ್.ಜಿ) ಪಟ್ಟಣದ ತಾಲೂಕು ಕಚೇರಿಯ ದಾಖಲೆಗಳ ಕೊಠಡಿಗೆ ಶೌಚಾಲಯದ ನಲ್ಲಿ ಸಂಪರ್ಕದ ನೀರು ಹರಿದು ಕೆಲ ಕಂದಾಯ ದಾಖಲೆಗಳು ನೀರುಪಾಲಾಗಿರುವ ಘಟನೆ ಬೆಳಕಿಗೆ ಬಂದಿದೆ.



ಪಟ್ಟಣದ ಮಿನಿ ವಿಧಾನಸೌಧದಲ್ಲಿರುವ ಕಂದಾಯ ಇಲಾಖೆಯು ತನ್ನ ಹೆಚ್ಚಿನ ದಾಖಲೆಗಳನ್ನು ಕೊಠಡಿ ಸಂಖ್ಯೆ 29ರಲ್ಲಿ ಸಂಗ್ರಹಿಸಿಟ್ಟಿದೆ. ಈ ಕೊಠಡಿಗೆ ಹೊಂದಿಕೊಂಡಂತೆ ಶೌಚಾಲಯವಿದ್ದು ಇಲ್ಲಿಂದ ನಲ್ಲಿ ನೀರು ಸೋರಿಕೆಯಾಗಿ ಕೊಠಡಿಗೆ ಹರಿದಿದೆ. ದಾಖಲೆಗಳನ್ನು ಸಮರ್ಪಕವಾಗಿ ಇಟ್ಟುಕೊಳ್ಳಲು ಅಗತ್ಯವಾದ ಸೆಲ್ಫ್‌ಗಳು ಇಲ್ಲವಾದದ್ದರಿಂದ ಕಂತೆಕಟ್ಟಿ ನೆಲದ ಮೇಲೆ ಶೇಖರಿಸಿಡಲಾಗಿತ್ತು. ಈಗ ಕೊಠಡಿಗೆ ನೀರು ನುಗ್ಗಿದ್ದರಿಂದ ನೆಲದಲ್ಲಿ ಇಟ್ಟಿದ್ದ ಎಲ್ಲಾ ಫೈಲುಗಳೂ ಒದ್ದೆಯಾಗಿವೆ.

ಸೋಮವಾರ ಕೊಠಡಿಯಿಂದ ನೀರು ಹೊರಗೆ ಹರಿದು ಬರುತ್ತಿರುವುದನ್ನು ಕಂಡ ಸಿಬ್ಬಂದಿ ಅಧಿಕಾರಿಗಳ ಗಮನಕ್ಕೆ ತಂದರು. ಕೂಡಲೇ ಕಾರ್ಯಪ್ರವೃತ್ತರಾದ ಸಿಬ್ಬಂದಿಗಳು ನೀರಿನಲ್ಲಿ ತೊಯ್ದಿದ್ದ ಎಲ್ಲಾ ಫೈಲುಗಳನ್ನು ಹೊರತಂದರು. ಎಲ್ಲಾ ದಾಖಲೆಗಳನ್ನು ಟೆರೇಸ್ ಮೇಲೆ ಕೊಂಡೊಯ್ದು ಬಿಸಿಲಿನಲ್ಲಿ ಒಣಗಿಸಿದರು.

ಕಚೇರಿಗೆ ಆಗಮಿಸಿದ್ದ ಸಾರ್ವಜನಿಕರು ಕಂದಾಯ ದಾಖಲೆಗಳು ನೀರಿನಲ್ಲಿ ಒದ್ದೆಯಾಗಿರುವುದನ್ನು ಕಂಡು ಅಚ್ಚರಿಗೊಳಗಾದರು. ಎಲ್ಲಾ ದಾಖಲೆಗಳನ್ನು ಕೊಠಡಿಯೊಳಗೆ ಬಿಸಾಡುತ್ತಿದ್ದಾರೆ. ಯಾವುದೇ ದಾಖಲೆಗಳನ್ನು ಕೇಳಿದರೂ ಸಾರ್ವಜನಿಕರಿಗೆ ಕೊಡದೆ ಹಿಂಬರಹ ನೀಡುತ್ತಿದ್ದಾರೆ ಎಂದು ಕೆಲ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ತಾಯಿ–ಮಗು ಕಾಣೆ

ಚಾಮರಾಜನಗರ: ಪಟ್ಟಣ ವ್ಯಾಪ್ತಿಯ ನಿವಾಸಿ ಜ್ಯೋತಿಕಾ ಮತ್ತು ಮಗು ರಿಷಿಕಾ ಕಾಣೆಯಾಗಿದ್ದಾರೆ. 21 ವರ್ಷದ ಜ್ಯೋತಿಕಾ 5 ಅಡಿ ಎತ್ತರ, ದುಂಡು ಮುಖ, ಸಾಧಾರಣ ಮೈಕಟ್ಟು, ಬಿಳಿ ಮೈಬಣ್ಣ ಹೊಂದಿದ್ದು, ಮುಖದ ಮೇಲೆ ಚುಕ್ಕಿ ಇರುತ್ತದೆ. ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಕಪ್ಪು ಬಣ್ಣದ ಪ್ಯಾಂಟು, ನೀಲಿ ಬಣ್ಣದ ಟಾಪ್ ಧರಿಸಿದ್ದರು. 1 ವರ್ಷ 8 ತಿಂಗಳ ಮಗು ರಿಷಿಕಾ 2 ಅಡಿ ಎತ್ತರ, ದುಂಡು ಮುಖ, ಬಿಳಿ ಮೈಬಣ್ಣ ಹೊಂದಿದ್ದು, ಹಳದಿ ಬಣ್ಣದ ಟೀ ಶರ್ಟ್, ಕಪ್ಪು ಬಣ್ಣದ ಚಡ್ಡಿ ಧರಿಸಿತ್ತು. ಸುಳಿವು ಸಿಕ್ಕವರು ದೂ.ಸಂ 08226 – 222383, 08226–222047 ಸಂಪರ್ಕಿಸಿ.

ಭದ್ರಮ್ಮ ನಿಧನ




ಚಾಮರಾಜನಗರ, ಜೂ.9– ತಾಲೂಕಿನ ಕಿಲಗೆರೆ ಗ್ರಾಮದ ಭದ್ರಮ್ಮ(48) ಸೋಮವಾರ ಅನಾರೋಗ್ಯದಿಂದ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು, ತಂದೆ, ತಾಯಿ, ಸಹೋದರ ಇದ್ದಾರೆ. ಇವರ ಅಂತ್ಯಕ್ರಿಯೆಯು ಸೋಮವಾರ ಮಧ್ಯಾಹ್ನ ಅವರ ಜಮೀನಿನಲ್ಲಿ ನೆರವೇರಿತು.

ಸಿಪಿಕೆ ಸೇರಿ ಗಣ್ಯರಿಗೆ 'ಬಸವ ರತ್ನ' ಪ್ರಶಸ್ತಿ


ಸಿಪಿಕೆ


ಶಿವಸ್ವಾಮಿ


ಚಂದ್ರಶೇಖರ್


ದತ್ತೇಶ್‌ಕುಮಾರ್


ಪ್ರೊ.ಶಿವರಾಜಪ್ಪ


ಆದಿಶೇಷನ್‌ಗೌಡ


ರೊ.ಮಂಜುನಾಥ್

ಮೈಸೂರು, ಜೂ.9(ಎಂಟಿವೈ)– ಮೈಸೂರಿನ ನಟರಾಜ ಮಂದಿರದಲ್ಲಿ ಜೂ.14ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ಶರಣ ಮಂಡಳಿ ವತಿಯಿಂದ ಹಿರಿಯ ಸಾಹಿತಿ ಡಾ.ಸಿಪಿಕೆ ಸೇರಿದಂತೆ 7 ಮಂದಿಗೆ 'ಬಸವರತ್ನ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತಿದೆ ಎಂದು ಮೈಸೂರು ಶರಣ ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ತಿಳಿಸಿದ್ದಾರೆ.

ಮೈಸೂರು ಶರಣ ಮಂಡಳಿ ಕಳೆದ ಹಲವು ವರ್ಷಗಳಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಬಸವರತ್ನ ಪ್ರಶಸ್ತಿ ನೀಡಿ ಗೌರವಿಸುವ ಪದ್ಧತಿ ಅನುಸರಿಸುತ್ತಾ ಬಂದಿದೆ. ಈ ಸಾಲಿನ ಕಾರ್ಯಕ್ರಮವನ್ನು ಜೂ.14ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಅಗ್ರಹಾರದಲ್ಲಿರುವ ನಟರಾಜ ಮಂದಿರದಲ್ಲಿ ನಡೆಯಲಿದ್ದು, 7 ಮಂದಿ ಗಣ್ಯರಿಗೆ ಪ್ರಶಸ್ತಿ ವಿತರಿಸಲಾಗುತ್ತಿದೆ ಎಂದರು.

ನಾಡುಕಂಡ ಹಿರಿಯ ಸಾಹಿತಿ ಪ್ರೊ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ), ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಬಿ.ಶಿವಸ್ವಾಮಿ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಲದ ಅಧ್ಯಕ್ಷ ಎಸ್. ಚಂದ್ರಶೇಖರ್, ನಟರಾಜ ಶಿಕ್ಷಣ ಸಂಸ್ಥೆಗಳ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಸಮಾಜ ಸೇವಕರಾದ ಟಿ.ಜಿ.ಆದಿಶೇಷನ್ ಗೌಡ, ಕೆ.ಮಂಜುನಾಥ್, ಡಾ.ಎಸ್. ದತ್ತೇಶ್‌ಕುಮಾರ್ ಅವರನ್ನು 'ಬಸವ ರತ್ನ–2025' ಪ್ರಶಸ್ತಿಗೆ ಆಯ್ಕೆ ಮಾಡ ಲಾಗಿದ್ದು, ಎಲ್ಲಾ ಗಣ್ಯರು ಪ್ರಶಸ್ತಿ ಸ್ವೀಕರಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕೊರೊನಾ ದಿಢೀರ್ ಹೆಚ್ಚಳ; ಇಂದು 265 ಮಂದಿಗೆ ಪಾಸಿಟಿವ್

ಬೆಂಗಳೂರು, ಜೂ.9– ರಾಜ್ಯದಲ್ಲಿ ಕೊರೊನಾ ಮತ್ತೆ ದಿಢೀರ್ ಹೆಚ್ಚಳವಾಗಿದ್ದು, ಕಳೆದ 24 ಗಂಟೆಯಲ್ಲಿ ಬರೋಬ್ಬರಿ 265 ಮಂದಿಗೆ ಕೋವಿಡ್–19 ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 1220ಕ್ಕೆ ಏರಿಕೆಯಾಗಿದೆ.

ಇನ್ನೂ ರಾಜ್ಯದಲ್ಲಿ ಇಂದು ಮಹಾಮಾರಿ ಕೊರೊನಾದಿಂದ ಯಾವುದೇ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ರಾಜ್ಯದಲ್ಲಿ ಇಂದು ಒಟ್ಟು 650 ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆ ಪೈಕಿ 265 ಜನರಿಗೆ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಪಾಸಿಟಿವ್ ಪ್ರಮಾಣ ಶೇ.40ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಒಟ್ಟು 559 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 552 ಮಂದಿ ಮನೆ ಆರೈಕೆಯಲ್ಲಿದ್ದಾರೆ ಮತ್ತು 7 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಆರೋಗ್ಯ ಇಲಾಖೆ ಕೋವಿಡ್ ಪರಿಸ್ಥಿತಿಯ ನಿಗಾ ವಹಿಸಿದ್ದು, ಹತೋಟಿಗೆ ತರಲು ಕ್ರಮಗಳನ್ನ ಕೈಗೊಳ್ಳುತ್ತಿದೆ. ಆತಂಕ ಪಡುವ ಪರಿಸ್ಥಿತಿ ಬಂದಿಲ್ಲವಾದರೂ, ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿದೆ.

ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ

ಮೈಸೂರು, ಜೂ. 9 – ಮೈಸೂರು ಜಿಲ್ಲಾ ಭಾವಸಾರ ಕ್ಷತ್ರಿಯ ಪದವೀಧರರ ಸಂಘದ 43ನೇ ವಾರ್ಷಿಕೋತ್ಸವ ಮತ್ತು ನೂತನ ಪದವೀಧರರು ಹಾಗೂ ಡಿಪ್ಲೊಮಾ ಪಡೆದವರನ್ನು ಸನ್ಮಾನಿಸುವ ಹಾಗೂ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ ಜು. 13 ರಂದು ವಿಜಯನಗರ 3ನೇ ಹಂತದಲ್ಲಿರುವ ಶ್ರೀ ವಿಠ್ಠಲ ರುಕ್ಮಿಣಿ ಕನ್ವೆನ್ಷನ್ ಸೆಂಟರ್‌ನಲ್ಲಿ ಏರ್ಪಡಿಸಲಾಗಿದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ವೃತ್ತಿಪರ ಐಟಿಐ, ಡಿಪ್ಲೊಮಾ, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಭಾವಸಾರ ಕ್ಷತ್ರಿಯ ಸಮಾಜದ ಅರ್ಹ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಜೂ. 16 ರಿಂದ 26 ರವರೆಗೆ ಸಂಜೆ 5 ರಿಂದ 7 ರವರೆಗೆ ವಿತರಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಜು. 2 ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 988071 8980, 99453 22003 ಸಂಪರ್ಕಿಸಬಹುದು.

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 9 – ಜ್ಯೋತಿಪಣ ಯುವಜನ ಸಂಘ ಗಾಣಿಗರ ವಿದ್ಯಾರ್ಥಿ ನಿಲಯವು 2025–26ನೇ ಸಾಲಿನ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಜ್ಯೋತಿಪಣ ಗಾಣಿಗ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ನಿಲಯದ ಪ್ರವೇಶಾತಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು ಸಂಘದ ಕಚೇರಿ ಅಥವಾ ಸಂಘದ ಅಧ್ಯಕ್ಷ ಸಿ.ವಿ. ಪಾರ್ಥಸಾರಥಿ, ಮೊ. 9448386989, ಕಾರ್ಯದರ್ಶಿ ಜಿ. ಯದುಕುಮಾರ್, ಮೊ. 9141518901 ಸಂಪರ್ಕಿಸಲು ಕೋರಲಾಗಿದೆ.

ರೈತ ನಿಗೂಢ ನಾಪತ್ತೆ

ಮೈಸೂರು, ಜೂ. 9– ರೈತನೋರ್ವ ನಿಗೂಢವಾಗಿ ನಾಪತ್ತೆಯಾಗಿದ್ದು, ಆತನ ಚಪ್ಪಲಿ, ಶರ್ಟ್, ಪರ್ಸ್, ಟೋಪಿ ಹೊಳೆಯ ಸೇತುವೆ ಮೇಲೆ ಪತ್ತೆಯಾಗಿರುವ ಬಗ್ಗೆ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸರಗೂರು ತಾಲೂಕು ಹುನುಗಳ್ಳಿ ಗ್ರಾಮದ ರೈತ ಹೆಚ್.ಎಸ್. ಸೋಹಾನ್‌ಕುಮಾರ್(43) ನಾಪತ್ತೆಯಾದ ರೈತನಾಗಿದ್ದು, ಈತ ಮೇ 30ರಂದು ರಾತ್ರಿ 9 ಗಂಟೆ ನಂತರ ನಾಪತ್ತೆಯಾಗಿದ್ದು, ಈತನ ಚಪ್ಪಲಿ, ಶರ್ಟ್, ಪರ್ಸ್ ಮತ್ತು ಟೋಪಿ ಸರಗೂರು ತಾಲೂಕು ಚಕ್ಕೂರು ಗ್ರಾಮದ ಕಪಿಲಾ ಹೊಳೆಯ ಸೇತುವೆ ಮೇಲೆ ಪತ್ತೆಯಾಗಿವೆ.

ಈತ ಹೊಳೆ ನೀರಿಗೆ ಬಿದ್ದು ಮೃತಪಟ್ಟಿರಬಹುದೇ ಎಂಬ ನಿಟ್ಟಿನಲ್ಲಿ ಹೊಳೆಯ ನೀರಿನಲ್ಲಿ ಹುಡುಕಾಡಿದರೂ ಈತ ಪತ್ತೆಯಾಗಿಲ್ಲ ಎಂದು ತಿಳಿಸಿರುವ ಪೊಲೀಸರು, ಈತನ ಬಗ್ಗೆ ಮಾಹಿತಿ ಇರುವವರು ಸರಗೂರು ಠಾಣೆ ಪಿಎಸ್‌ಐ ದೂರವಾಣಿ ಸಂಖ್ಯೆ 9480805064 ಅಥವಾ ಮೈಸೂರು ಜಿಲ್ಲಾ ಕಂಟ್ರೋಲ್ ರೂಂ ಸಂಖ್ಯೆ 0821–2444800 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ರಾಜ್ಯಮಟ್ಟದ ಸ್ಪರ್ಧೆಗೆ ಲೇಖನ ಆಹ್ವಾನ

ಮೈಸೂರು,ಜೂ.9–ಪ್ರಗತಿಪರ ಚಿಂತಕ, ವಿಚಾರವಾದಿ ಪ್ರೊ.ಕೆ.ರಾಮದಾಸರ ನೆನಪಿನಲ್ಲಿ ರಾಜ್ಯ ಮಟ್ಟದ ಲೇಖನ ಸ್ಪರ್ಧೆಗಾಗಿ ಸಮಾಜಮುಖಿ ಚಿಂತನೆಯ ಲೇಖನ ಗಳನ್ನು ಆಹ್ವಾನಿಸಿದ್ದು, ಅದರ ದಿನಾಂಕವನ್ನು ಜೂ.18ರವರೆಗೆ ವಿಸ್ತರಿಸಲಾಗಿದೆ.

ಹಿಂದೂ ಸಮಾಜದಲ್ಲಿನ ಮೂಢನಂಬಿಕೆ ದೇಶದ ಅಭಿವೃದ್ಧಿಗೆ ಪೂರಕವೇ, ಮಾರಕವೇ ವಿಷಯವನ್ನು ಲೇಖನ ಒಳಗೊಂಡಿರಬೇಕು. ಅಲ್ಲದೆ ವಾಸ್ತವಾಂಶವನ್ನು ತಿಳಿಸುವಂತಿರ ಬೇಕು. ಇದು ಎಲ್ಲೂ ಪ್ರಕಟವಾಗಿರಬಾರದು. ಕನ್ನಡದಲ್ಲಿದ್ದು, ವಿಷಯಕ್ಕೆ ಮಾತ್ರ ಸಂಬಂ ಧಿಸಿದ ಲೇಖನವಾಗಿರಬೇಕು. ಇದನ್ನು ಜೂ.18ರೊಳಗೆ ತಲುಪಿಸಲು ಕೋರಲಾಗಿದೆ. ಆಯ್ಕೆಯಾದ ಲೇಖನಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ (ನಗದು, ಪ್ರಶಸ್ತಿ ಪತ್ರ) ನೀಡಲಾಗುವುದು. ಪ್ರಶಸ್ತಿಯನ್ನು ಜೂ.22ರಂದು ಮೈಸೂರಿನ ರಂಗಾಯಣದಲ್ಲಿ ನಡೆಯುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 7019441509 ಸಂಪರ್ಕಿಸಬಹುದು.

ಹಿಂದೂ ತ್ರಿಮತಸ್ಥ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಜೂ. 9 – ಮೈಸೂರಿನ ಆದರ್ಶ ಸೇವಾ ಸಂಘವು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ತೇರ್ಗಡೆಯಾಗಿರುವ ಹಿಂದೂ ತ್ರಿಮತಸ್ಥ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಆದರ್ಶ ಸೇವಾ ಸಂಘದ ವೆಬ್‌ಸೈಟ್ adarshasevasnangha@gmailcom or adarshasevasangha. org ಮೂಲಕ ಮಾಹಿತಿ ಒದಗಿಸಿ, ಅನುಮತಿಸಿದ ನಂತರ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲಾತಿ ಗಳೊಂದಿಗೆ ಜೂ. 10 ರಿಂದ 20 ರೊಳಗೆ ಸಂಜೆ 4 ರಿಂದ ಸಂಜೆ 6 ಗಂಟೆಯವರೆಗೆ ಸಂಘದ ಕಚೇರಿಗೆ ಖುದ್ದಾಗಿ ಸಲ್ಲಿತಕ್ಕದ್ದು. ಹೆಚ್ಚಿನ ಮಾಹಿತಿಗೆ ದೂ. 0821–3559202, ಮೊ. 9480166274 ಸಂಪರ್ಕಿಸಬಹುದು.

ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಎರಡು ದಿನದ ಅಂತಾರಾಷ್ಟ್ರೀಯ ಕಾರ್ಯಾಗಾರ

ಮೈಸೂರು, ಜೂ. 9– ಮೈಸೂರಿನ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ & ರಿಸರ್ಚ್ (ಜೆಎಸ್‌ಎಸ್ ಎಎಚ್‌ಇಆರ್)ನ ಸ್ಕೂಲ್ ಆಫ್ ಲೈಫ್ ಸೈನ್ಸಸ್ ವತಿಯಿಂದ 'ವೃತ್ತಿ ವೇಗವರ್ಧಕ 2.0: ಯೋಜನೆ, ತಯಾರಿ ಮತ್ತು ಜೀವ ವಿಜ್ಞಾನಗಳಲ್ಲಿ ಸಮೃದ್ಧಿ' ಕುರಿತು ಅಂತಾರಾಷ್ಟ್ರೀಯ ಕಾರ್ಯಾಗಾರ ನಡೆಯಿತು.

ಜೀವ ವಿಜ್ಞಾನಗಳ ಕ್ರಿಯಾತ್ಮಕ ಕ್ಷೇತ್ರದಲ್ಲಿ ಶ್ರೇಷ್ಠತೆ ಸಾಧಿಸಲು ಅಗತ್ಯವಾದ ಕೌಶಲ ಮತ್ತು ತಂತ್ರಗಳ ಕುರಿತು ಸ್ನಾತಕೋತ್ತರ (ಎಂ.ಎಸ್ಸಿ) ಮತ್ತು ಡಾಕ್ಟರೇಟ್ (ಪಿಎಚ್.ಡಿ) ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು, ಪ್ರೇರೇಪಿಸಲು ಮತ್ತು ಮಾರ್ಗದರ್ಶನ ನೀಡಲು ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿದ ಉಪ ಕುಲಪತಿ ಡಾ. ಎಚ್. ಬಸವನಗೌಡಪ್ಪ, ಜೀವ ವಿಜ್ಞಾನದ ಭೂದೃಶ್ಯವನ್ನು ಯೋಜಿಸುವ ಮತ್ತು ನ್ಯಾವಿಗೇಟ್ ಮಾಡುವ ಶಕ್ತಿ, ಯಶಸ್ಸಿಗೆ ಸಿದ್ಧತೆ, ಕೌಶಲ ಮತ್ತು ಜಾಲಗಳನ್ನು ನಿರ್ಮಿಸುವುದು, ಉದ್ದೇಶದ ಮೂಲಕ ಸಮೃದ್ಧಿ ಮತ್ತು ಪರಿಣಾಮ ಬೀರುವ ಶಕ್ತಿಯನ್ನು ಒತ್ತಿ ಹೇಳಿದರು. ಮಹತ್ವಾಕಾಂಕ್ಷಿ ಜೀವ ವಿಜ್ಞಾನ ವೃತ್ತಿಪರರಿಗೆ ಅಂತರಶಿಸ್ತೀಯ ಕೌಶಲಗಳು, ವೈಜ್ಞಾನಿಕ ಸಂವಹನ ಮತ್ತು ಉದ್ಯಮ ಸಿದ್ಧತೆಯ ಹೆಚ್ಚುತ್ತಿರುವ ಪ್ರಾಮುಖ್ಯತೆಯನ್ನು ಕೂಡ ಅವರು ನೆರೆದಿದ್ದವರಿಗೆ ತಿಳಿಸಿದರು.



ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಎರಡು ದಿನದ ಅಂತಾರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ ನೀಡಲಾಯಿತು.

ಬೆಂಗಳೂರಿನ ಬಯೋಆರ್ಥಾ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ತಂತ್ರಜ್ಞಾನ ಅಧಿಕಾರಿ ಮತ್ತು ಸಹ–ಸಂಸ್ಥಾಪಕರಾದ ಶ್ರೀ ಗಣೇಶ್ ಪ್ರಸಾದ್ ಯುಜಿ ಅವರು, ವಿದ್ಯಾರ್ಥಿಗಳು ತಾರ್ಕಿಕವಾಗಿ ಯೋಚಿಸಿ ತಮ್ಮ ವೃತ್ತಿಜೀವನಕ್ಕೆ ಉತ್ತಮವಾಗಿ ಯೋಜಿಸುವಂತೆ ಒತ್ತಾಯಿಸಿದರು. ಅವರು ವಿವಿಧ ಅವಕಾಶಗಳ ಬಗ್ಗೆ ವಿವರಿಸಿದರು ಮತ್ತು ಇದೆಲ್ಲವೂ ವ್ಯಕ್ತಿಯ ಗುರಿ, ಸಮರ್ಪಣೆ, ಶಿಸ್ತು, ನಿರ್ಣಯ ಮತ್ತು ಕಠಿಣ ಪರಿಶ್ರಮವನ್ನು ಅವಲಂಬಿಸಿರುತ್ತದೆ ಎಂದು ಒತ್ತಿ ಹೇಳಿದರು.

ಜೀವ ವಿಜ್ಞಾನ ನಿಕಾಯದ ಡೀನ್ ಡಾ. ಕೆ.ಎ. ರವೀಶ, ಈ ಉಪಕ್ರಮವು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿ ಮತ್ತು ಜಾಗತಿಕ ವೈಜ್ಞಾನಿಕ ಸವಾಲುಗಳಿಗೆ ಸಿದ್ಧತೆಗಾಗಿ ಸಂಸ್ಥೆಯ ಬದ್ಧತೆಯಲ್ಲಿ ಒಂದು ಹೆಜ್ಜೆ ಮುಂದಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲದೆ ವೃತ್ತಿಜೀವನದಲ್ಲಿ ಏಳಿಗೆ ಸಾಧಿಸಲು ಯೋಜನೆ ಮತ್ತು ಸಿದ್ಧತೆಯ ಜೊತೆಗೆ ಕಾರ್ಯಕ್ಷಮತೆಯ ಮಹತ್ವವನ್ನು ಒತ್ತಿ ಹೇಳಿದರು.

ಕಾರ್ಯಾಗಾರದಲ್ಲಿ ವಿವಿಧ ಕೈಗಾರಿಕೆ, ಸಂಶೋಧನೆ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ತಜ್ಞರು (ಭಾರತದ ಭಾರತೀಯ ವಿಜ್ಞಾನ ಸಂಸ್ಥೆ – ಡಾ. ಸಂಗೀನಾ ಸಲಾಂ, ಬಯೋಕಾನ್ ಅಕಾಡೆಮಿ – ಡಾ. ರಾಮ ಗೋಪಾಲ್ ರಾವ್, ಬಯೋಕಾನ್ ಲಿಮಿಟೆಡ್ – ಶ್ರೀ ಸುರೇಶ್ ಶ್ರೀಕಂಠಯ್ಯ, ಸಿಂಜೀನ್ ಇಂಟರ್‌ನ್ಯಾಷನಲ್ – ಡಾ. ಸುನಿಲ್ ಕುಮಾರ್ ಸಿ.ಆರ್, ಬಯೋಆರ್ಥಾ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್– ಶ್ರೀ ಗಣೇಶ್ ಪ್ರಸಾದ್ ಯು.ಜಿ, ಯುನೈಟೆಡ್ ಕಿಂಗ್‌ಡಮ್ನ ಬಿಬಿಐ ಸೊಲ್ಯೂಷನ್ಸ್ – ಡಾ. ಸುನಿಲ್ ಕುಮಾರ್ ಪಾರ್ಥಸಾರಥಿ, ಕ್ಲಾರಿಯೊ – ಕನ್ಯಾ ಕೆ.ಟಿ. ಮತ್ತು ಯುಎಸ್‌ಎ ನ ಯುಟಾ ವಿಶ್ವವಿದ್ಯಾಲಯ – ಡಾ. ಶಾನ್ಲಿ ಜಾಕೋಬ್) ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

ಎರಡು ತಿಂಗಳಲ್ಲಿ ಏಳು ಮಂದಿ ರೈಲಿಗೆ ಸಿಲುಕಿ ಸಾವು

ಮೈಸೂರು, ಜೂ. 9– ಕಳೆದ ಎರಡು ತಿಂಗಳಲ್ಲಿ ರೈಲಿಗೆ ಸಿಲುಕಿ ಏಳು ಮಂದಿ ಅಪರಿಚಿತರು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ. ಬ್ಯಾಡರಹಳ್ಳಿ–ಯಲಿಯೂರು ರೈಲು ನಿಲ್ದಾಣಗಳ ನಡುವೆ ಏ. 11ರಂದು ಸುಮಾರು 45 ವರ್ಷದ ವ್ಯಕ್ತಿ ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾನೆ.

ಅಕ್ಕಿಹೆಬ್ಬಾಳು ರೈಲು ನಿಲ್ದಾಣದ ಟ್ರ್ಯಾಕ್ ಹತ್ತಿರ ಏ. 26ರಂದು ಸುಮಾರು 55 ವರ್ಷದ ವ್ಯಕ್ತಿಯೋರ್ವ ರೈಲಿಗೆ ಸಿಲುಕಿ ಸಾವೀಗೀಡಾಗಿದ್ದಾನೆ.

ಕೆ.ಆರ್.ನಗರ ರೈಲು ನಿಲ್ದಾಣದಲ್ಲಿ ಮಾ. 26ರಂದು ರೈಲಿಗೆ ಸಿಲುಕಿ ಗಾಯಗೊಂಡಿದ್ದ ಸುಮಾರು 75 ವರ್ಷದ ಅಪರಿಚಿತ ವ್ಯಕ್ತಿಯನ್ನು ಚಿಕಿತ್ಸೆಗಾಗಿ ಕೆ.ಆರ್.ನಗರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈತ ಚಿಕಿತ್ಸೆ ಫಲಕಾರಿಯಾಗದೇ ಏ. 28ರಂದು ಸಾವನ್ನಪ್ಪಿದ್ದಾನೆ.

ಎಬಿಬಿಸಿ–ಬೆಳಗೊಳ ರೈಲು ನಿಲ್ದಾಣಗಳ ನಡುವೆ ಏ. 30ರಂದು ಸುಮಾರು 50ರಿಂದ 55 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾನೆ.

ನಾಗನಹಳ್ಳಿ–ಪಾಂಡವಪುರ ರೈಲು ನಿಲ್ದಾಣಗಳ ನಡುವೆ ಮೇ 2ರಂದು ಸುಮಾರು 30ರಿಂದ 35 ವರ್ಷದ ಅಪರಿಚಿತ ವ್ಯಕ್ತಿ ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾನೆ. ಎಂಎಸ್‌ಜಿಟಿ–ನಾಗನಹಳ್ಳಿ ರೈಲು ನಿಲ್ದಾಣಗಳ ನಡುವೆ ಮೇ 15ರಂದು ಸುಮಾರು 40ರಿಂದ 45 ವರ್ಷದ ಮಹಿಳೆ ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾಳೆ. ಅಶೋಕಪುರಂ–ಕಡಕೊಳ ರೈಲು ನಿಲ್ದಾಣಗಳ ನಡುವೆ ಮೇ 29ರಂದು ಸುಮಾರು 45ರಿಂದ 50 ವರ್ಷದ ಅಪರಿಚಿತ ವ್ಯಕ್ತಿ ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾನೆ.

ಎಲ್ಲಾ ಪ್ರಕರಣಗಳೂ ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಇವರ ಬಗ್ಗೆ ಮಾಹಿತಿ ಇರುವವರು ರೈಲ್ವೆ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ 0821–251679 ಅಥವಾ 9480802122 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ಮಹಿಳೆ ಸೇರಿ ಐವರು ಅಪರಿಚಿತರ ಸಾವು

ಮೈಸೂರು, ಜೂ. 9– ಮಹಿಳೆ ಸೇರಿ ಐವರು ಅಪರಿಚಿತರು ಸಾವನ್ನಪ್ಪಿರುವ ಬಗ್ಗೆ ದೇವರಾಜ ಠಾಣೆ ಮತ್ತು ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

ಮೈಸೂರು ಅರಮನೆ ವರಾಹ ಗೇಟ್ ಬಳಿ ಇರುವ ಬಸ್ ನಿಲ್ದಾಣದಲ್ಲಿ ಮೇ 27ರಂದು ಸುಮಾರು 40ರಿಂದ 45 ವರ್ಷದ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾನೆ. ಈತನ ಎಡಗೈ ಕಿರುಬೆರಳು ಇರುವುದಿಲ್ಲ. ಎದೆಯ ಎಡ ಭಾಗದಲ್ಲಿ ಕಪ್ಪು ಕಾರೇಳು ಇರುತ್ತದೆ.

ಕೆ.ಆರ್.ಆಸ್ಪತ್ರೆಯ ಅಪಘಾತ ಚಿಕಿತ್ಸಾ ವಿಭಾಗದ ಮುಂಭಾಗದಲ್ಲಿ ಜೂ. 3ರಂದು ಸುಮಾರು 50 ವರ್ಷದ ಮಹಿಳೆ ಮಲಗಿದ್ದ ಸ್ಥಿತಿಯಲ್ಲೇ ಮೃತಪಟ್ಟಿದ್ದಾಳೆ. ಈಕೆಯ ಎಡಗೈಯಲ್ಲಿ ಹೂವಿನ ಚಿತ್ರವಿರುವ ಹಚ್ಚೆ ಹಾಕಲಾಗಿದೆ. ಇವೆರಡೂ ಪ್ರಕರಣಗಳು ದೇವರಾಜ ಠಾಣೆಯಲ್ಲಿ ದಾಖಲಾಗಿದ್ದು, ಇವರ ವಾರಸುದಾರರು ದೇವರಾಜ ಠಾಣೆ ಪಿಐ ಮೊಬೈಲ್ ಸಂಖ್ಯೆ 9480802231 ಅಥವಾ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 0821–2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಮೈಸೂರು ರೈಲು ನಿಲ್ದಾಣದ ನಂ. 16236 ರೈಲು ಗಾಡಿಯ ಕೋಚ್‌ನಲ್ಲಿ ಮಾ. 31ರಂದು ಅಸ್ವಸ್ಥನಾಗಿ ಬಿದ್ದಿದ್ದ ಸುಮಾರು 35ರಿಂದ 40 ವರ್ಷದ ಅಪರಿಚಿತನನ್ನು ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈತನ ಬಲಗೈ ತೋಳಿನ ಮೇಲೆ AS ಎಂದು ಹಚ್ಚೆ ಹಾಕಲಾಗಿದ್ದ, ಎಡಗೈ ತೋಳಿನ ಮೇಲೆ BOB MARLEY ಎಂಬ ಹಚ್ಚೆ ಗುರುತಿದೆ.

ಮೈಸೂರು ರೈಲ್ವೆ ನಿಲ್ದಾಣದ ವೇದಿಕೆ 3ರಲ್ಲಿ ಏ. 26ರಂದು ಅಸ್ವಸ್ಥನಾಗಿ ಮಲಗಿದ್ದ ಸುಮಾರು 60ರಿಂದ 65 ವರ್ಷದ ವ್ಯಕ್ತಿಯನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಈತ ಚಿಕಿತ್ಸೆ ಫಲಕಾರಿಯಾಗದೇ ಮೇ 3ರಂದು ಸಾವಿಗೀಡಾಗಿದ್ದಾನೆ. ಮೈಸೂರು ರೈಲು ನಿಲ್ದಾಣ ಯಾರ್ಡ್‌ನ ಅಶೋಕಪುರಂ ರೈಲು ನಿಲ್ದಾಣದ ಕೊನೆಯಲ್ಲಿ ಪೋಲ್ ನಂಬರ್ 137/58ರ ರೈಲು ಹಳಿಯ ಬಳಿ ಸುಮಾರು 40ರಿಂದ 45 ವರ್ಷದ ಅಪರಿಚಿತ ವ್ಯಕ್ತಿ ಮೇ 12ರಂದು ಮೃತಪಟ್ಟಿದ್ದಾನೆ.

ಈ ಮೂರೂ ಪ್ರಕರಣಗಳು ಮೈಸೂರು ರೈಲ್ವೆ ಪ್ರಕರಣಗಳು ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಇವರ ವಾರಸುದಾರರು ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2516579 ಅಥವಾ 9480802122 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಭಾರತದ ವಾಯು ರಕ್ಷಣಾ ವ್ಯವಸ್ಥೆ ಬಲವರ್ಧನೆ: ಶಸ್ತ್ರಾಸ್ತ್ರ ಖರೀದಿಗೆ 30,000 ಕೋಟಿ

ನವದೆಹಲಿ,ಜೂ.9– ಇತ್ತೀಚೆಗೆ ನಡೆದ ಸೇನಾ ಸಂಘರ್ಷದಲ್ಲಿ ಪಾಕಿಸ್ತಾನದ ಯುದ್ಧ ವಿಮಾನ, ಕ್ಷಿಪಣಿ ಹಾಗೂ ಡ್ರೋನ್ ದಾಳಿಯ ಯತ್ನವನ್ನು ತಕ್ಕ ಉತ್ತರದೊಂದಿಗೆ ಸಮರ್ಥವಾಗಿ ಎದುರಿಸಿದ ಬೆನ್ನಲ್ಲೇ, ಭಾರತೀಯ ವಾಯು ರಕ್ಷಣಾ ಪಡೆಯ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸುವತ್ತ ರಕ್ಷಣಾ ಇಲಾಖೆ ಹೆಜ್ಜೆ ಇಟ್ಟಿದೆ.

ಅತ್ಯಾಧುನಿಕ ಖಂಡಾಂತರ ಕ್ಷಿಪಣಿಯ ಖರೀದಿ ಮೂಲಕ ಭಾರತೀಯ ಸೇನೆಯ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ರಕ್ಷಣಾ ಇಲಾಖೆಯು 30 ಸಾವಿರ ಕೋಟಿ ಮೊತ್ತದ ಕ್ಷಿಪಣಿ ವ್ಯವಸ್ಥೆ ಖರೀದಿಗೆ ಮುಂದಾಗಿದೆ.

ದೇಶದ ಪಶ್ಚಿಮ ಹಾಗೂ ಉತ್ತರದ ಗಡಿ ಭಾಗದಲ್ಲಿ ತ್ವರಿತವಾಗಿ ಕಾರ್ಯಪ್ರವೃತ್ತರಾಗುವ ಸೇನೆಯ ವಾಯು ರಕ್ಷಣೆಯ ಮೂರು ತುಕಡಿಗಳಿಗೆ ತ್ವರಿತವಾಗಿ ಪ್ರಹಾರ ನಡೆಸುವ ಖಂಡಾಂತರ ಕ್ಷಿಪಣಿ ಖರೀದಿಸುವ ಪ್ರಸ್ತಾವನೆಯನ್ನು ಶೀಘ್ರದಲ್ಲಿ ರಕ್ಷಣಾ ಇಲಾಖೆ ಪೂರ್ಣಗೊಳಿಸಲಿದೆ ಎಂದು ಅಧಿಕಾರಿಗಳು ಹೇಳಿರುವುದಾಗಿ ಎಎನ್‌ಐ ವರದಿ ಮಾಡಿದೆ.



ಡಿಆರ್‌ಡಿಒ ಅಭಿವೃದ್ಧಿಪಡಿಸಿದ ವಾಯು ರಕ್ಷಣಾ ವ್ಯವಸ್ಥೆಯನ್ನು ಖರೀದಿಸಲು ಇಲಾಖೆ ಮುಂದಾಗಿದೆ. ಗುರಿ ಮತ್ತದರ ಮಾರ್ಗವನ್ನು ತ್ವರಿತವಾಗಿ ಪತ್ತೆ ಮಾಡುವ ಸಾಮರ್ಥ್ಯವಿರುವ ಈ ರಕ್ಷಣಾ ಸಾಧನವು ಶತ್ರುಗಳ ದಾಳಿಯನ್ನು ತ್ವರಿತವಾಗಿ ನಾಶಪಡಿಸುವ ಸಾಮರ್ಥ್ಯ ಹೊಂದಿದೆ. ಹಾಲಿ ಇರುವ ಎಂಆರ್‌ಎಸ್‌ಎಂ ಮತ್ತು ಆಕಾಶ್‌ಗಿಂತ ಸುಧಾರಿತ ಸಾಧನ ಇದಾಗಿದ್ದು, 30 ಕಿ.ಮೀ. ಅಂತರದಲ್ಲೇ ಶತ್ರುಗಳ ಕ್ಷಿಪಣಿ ದಾಳಿಯನ್ನು ನಿಷ್ಕ್ರಿಯಗೊಳಿಸಲಿದೆ. ಪರೀಕ್ಷಾರ್ಥ ಪ್ರಯೋಗ ಸಂದರ್ಭದಲ್ಲಿ ರಾತ್ರಿ ಮತ್ತು ಹಗಲು ಎರಡೂ ಕಾಲಮಾನಗಳಲ್ಲಿ ಉತ್ತಮ ಫಲಿತಾಂಶ ನೀಡಿದೆ.

ಇತ್ತೀಚೆಗೆ ನಡೆದ ನಾಲ್ಕು ದಿನಗಳ ಸೇನಾ ಸಂಘರ್ಷದಲ್ಲಿ ಪಾಕಿಸ್ತಾನವು ಚೀನಾ ನಿರ್ಮಿತ ಶಸ್ತ್ರಾಸ್ತ್ರಗಳನ್ನು ಬಳಸಿತ್ತು. ಇವುಗಳಲ್ಲಿ ಬಹುತೇಕ ಕ್ಷಿಪಣಿಗಳನ್ನು ಭಾರತೀಯ ಸೇನೆಯ ಎಲ್–70 ಮತ್ತು ಝುಡ್‌ಯು–23 ವಾಯು ರಕ್ಷಣಾ ಬಂದೂಕುಗಳನ್ನು ಬಳಸಿ ನಾಶಪಡಿಸಿದವು. ಯುದ್ಧದಲ್ಲಿ ಆಕಾಶ್ ಮತ್ತು ಎಂಆರ್‌ಎಸ್‌ಎಎಂ ಪ್ರಮುಖ ಪಾತ್ರ ವಹಿಸಿದವು. ಭಾರತೀಯ ವಾಯು ಸೇನೆಯು ಸ್ಪೈಡರ್‌ಡಬ್ಲೂಆರ್ ಮತ್ತು ಸುದರ್ಶನ ಎಸ್–400 ವಾಯು ರಕ್ಷಣಾ ವ್ಯವಸ್ಥೆಯನ್ನು ಸಮರ್ಥವಾಗಿ ಬಳಸಿಕೊಂಡಿತು.

ಸೇನಾ ವಾಯು ರಕ್ಷಣಾ ವ್ಯವಸ್ಥೆಯು ಹೊಸ ರಾಡಾರ್, ಜಾಮರ್‌ನೊಂದಿಗೆ ಕಡಿಮೆ ಅಂತರದ ವಾಯು ರಕ್ಷಣಾ ವ್ಯವಸ್ಥೆ, ಲೇಸರ್ ಆಧಾರಿತ ರಕ್ಷಣಾ ವ್ಯವಸ್ಥೆಯನ್ನೂ ಹೊಂದಲಿದೆ ಎಂದು ವರದಿಯಾಗಿದೆ.

ಮಹಾಕುಂಭ ಕಾಲ್ತುಳಿತ: ಪರಿಹಾರ ನೀಡುವಲ್ಲಿ ವಿಳಂಬ

ಉತ್ತರಪ್ರದೇಶ ಸರ್ಕಾರಕ್ಕೆ ಅಲಹಾಬಾದ್ ಹೈಕೋರ್ಟ್ ಛೀಮಾರಿ

ಲಖನೌ, ಜೂ.9– ಕಳೆದ ಜನವರಿ 29ರಂದು ಮೌನಿ ಅಮವಾಸ್ಯೆಯಂದು ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಹಲವು ಭಕ್ತರು ಪ್ರಾಣ ಕಳೆದುಕೊಂಡಿದ್ದರು. ಮೃತರ ಕುಟುಂಬಗಳಿಗೆ ಪರಿಹಾರ ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ ಇಲ್ಲಿಯವರೆಗೆ ಕುಟುಂಬಗಳಿಗೆ ಪರಿಹಾರ ಸಿಕ್ಕಿಲ್ಲ. ಇದಕ್ಕಾಗಿ ಅಲಹಾಬಾದ್ ಹೈಕೋರ್ಟ್ ಉತ್ತರಪ್ರದೇಶ ಸರ್ಕಾರಕ್ಕೆ ಛೀಮಾರಿ ಹಾಕಿದೆ.

ನ್ಯಾಯಾಲಯದ ರಜಾ ಪೀಠವು ಸರ್ಕಾರದ ವರ್ತನೆಯನ್ನು 'ಅಸ್ಥಿರ' ಮತ್ತು 'ನಾಗರಿಕರ ನೋವಿನ ಬಗ್ಗೆ ಅಸಡ್ಡೆ' ಎಂದು ಕರೆದಿದೆ. ಉದಯ್ ಪ್ರತಾಪ್ ಸಿಂಗ್ ಅವರ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿ ಸೌಮಿತ್ರ ದಯಾಳ್ ಸಿಂಗ್ ಮತ್ತು ನ್ಯಾಯಮೂರ್ತಿ ಸಂದೀಪ್ ಜೈನ್ ಅವರ ವಿಭಾಗೀಯ ಪೀಠವು ಈ ಕಠಿಣ ಹೇಳಿಕೆ ನೀಡಿದೆ.

ಸರ್ಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯ ಬಗ್ಗೆ ಪ್ರಶ್ನೆ ಎತ್ತಿದ್ದ ಅರ್ಜಿದಾರರಾದ ಉದಯ್ ಪ್ರತಾಪ್ ಸಿಂಗ್ ಅವರ ಪತ್ನಿ 52 ವರ್ಷದ ಸುನೈನಾ ದೇವಿ ಕುಂಭ ಕಾಲ್ತುಳಿತದಲ್ಲಿ ಗಂಭೀರ ಗಾಯಗಳಿಂದಾಗಿ ಸಾವನ್ನಪ್ಪಿದ್ದಾರೆ ಎಂದು ನ್ಯಾಯಾಲಯ ಹೇಳಿದೆ. ಈ ಪ್ರಕರಣದಲ್ಲಿ ವಿಶೇಷವೆಂದರೆ ಮಹಿಳೆಯನ್ನು ಯಾವಾಗ ಮತ್ತು ಯಾವ ಸ್ಥಿತಿಯಲ್ಲಿ ಆಸ್ಪತ್ರೆಗೆ ತರಲಾಯಿತು ಎಂಬುದರ ಕುರಿತು ಮರಣೋತ್ತರ ಪರೀಕ್ಷೆ ನಡೆಸಲಾಗಿಲ್ಲ ಅಥವಾ ಕುಟುಂಬಕ್ಕೆ ತಿಳಿಸಲಾಗಿಲ್ಲ ಎಂದು ಅವರು ಹೇಳಿದರು. ನ್ಯಾಯಾಲಯವು ಸರ್ಕಾರಿ ಸಂಸ್ಥೆಗಳನ್ನು ಖಂಡಿಸಿತು. ಇದು ಗಂಭೀರ ಲೋಪ ಎಂದು ಕರೆದಿದೆ.

ಸರ್ಕಾರವನ್ನು ಪ್ರಶ್ನಿಸಿದ ಪೀಠವು, ಸರ್ಕಾರವು ಮೃತರ ಸಂಬಂಧಿಕರಿಗೆ ಪರಿಹಾರ ನೀಡುವ ಬಗ್ಗೆ ಮಾತನಾಡಿದ್ದರೆ, ಅದನ್ನು ಸಮಯಕ್ಕೆ ಸರಿಯಾಗಿ ಪಾಲಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದೆ. ನಾಗರಿಕರ ಯಾವುದೇ ತಪ್ಪಿಲ್ಲ ಮತ್ತು ಅಂತಹ ದುರಂತಗಳಲ್ಲಿ ಬಲಿಪಶು ಕುಟುಂಬಗಳಿಗೆ ಆರೈಕೆ ಮತ್ತು ಸಹಾಯವನ್ನು ಖಚಿತಪಡಿಸಿಕೊಳ್ಳುವುದು ರಾಜ್ಯದ ಕರ್ತವ್ಯವಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಭಾರತೀಯ ಜೈನ್ ಸಂಘಟನೆಯಿಂದ ಮೈಸೂರಿನಲ್ಲಿ ಪರಿಸರ ದಿನಾಚರಣೆ

ಮೈಸೂರು, ಜೂ. 9– ಭಾರತೀಯ ಜೈನ್ ಸಂಘಟನೆ ಮೈಸೂರು ಶಾಖೆಯ ಆಶ್ರಯದಲ್ಲಿ ವಿಶ್ವ ಪರಿಸರ ದಿನವನ್ನು ವಿಭಿನ್ನ ಕಾರ್ಯಕ್ರಮಗಳ ಮೂಲಕ ಆಚರಿಸಲಾಯಿತು. ಬೆಳಿಗ್ಗೆ ರಾಯಲ್ ಸಿಟಿ ಲೇಔಟ್ ಪ್ರಾಂಗಣದಲ್ಲಿ ವೃಕ್ಷಾರೋಪಣಾ ಕಾರ್ಯಕ್ರಮ ನಡೆಯಿತು.




ಸಾಮೂಹಿಕ ನಮೋಕಾರ ಮಂತ್ರ ಪಠಣದಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಉಪಾಧ್ಯಕ್ಷ ಅಮಿತ್ ಚೌಹಾನ್ ಸ್ವಾಗತಿಸಿದರು. ಮಹಿಳಾ ಘಟಕದ ಅಧ್ಯಕ್ಷೆ ಶರ್ಮಿಲಾ ಧೋಕ್ಕಾ ಪರಿಸರ ದಿನದ ಮಹತ್ವವನ್ನು ವಿವರಿಸಿದರು.

ಆರ್ಕಿಟೆಕ್ಟ್ ರಾಜೇಶ್ ಸಂಚೆತಿ ಮಾತನಾಡಿ, ಪರಿಸರ ಸಂರಕ್ಷಣೆಯು ಪ್ರತಿಯೊಬ್ಬರ ಪವಿತ್ರ ಕರ್ತವ್ಯವಾಗಿದೆ. ಇಂದಿನ ಆಧುನಿಕತೆಯ ಅತಿವ್ಯಾಪ್ತಿಯಲ್ಲಿ ಪರಿಸರ ಹೆಚ್ಚು ಹಾನಿಗೊಳಗಾಗುತ್ತಿದೆ. ಪರಿಸರವೇ ನಾಶವಾಗುತ್ತಿದ್ದರೆ ಜೀವಿಗಳು ಹೇಗೆ ಸುರಕ್ಷಿತವಾಗಿರಲು ಸಾಧ್ಯ ಎಂದರು.

ಸಂಘಟನೆಯ ರಾಜ್ಯ ಮುಖ್ಯ ಕಾರ್ಯದರ್ಶಿ ಪ್ರಕಾಶ ಗುಲೇಚಾ ಮತ್ತು ರಾಯಲ್ ಸಿಟಿ ಲೇಔಟ್‌ನ ಹಿರಿಯ ಸದಸ್ಯ ಬಿಮಲ್ ಜೈನ್ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಮುಖ್ಯ ಕಾರ್ಯದರ್ಶಿ ದೀಪಕ್ ಬೋಹ್ರಾ ಕೃತಜ್ಞತೆ ಸಲ್ಲಿಸಿದರು.

ಉಪಾಧ್ಯಕ್ಷರಾದ ನೇಮಿಚಂದ್ ಬಡೋಲಾ, ಖಜಾಂಚಿ ಮನೋಹರ್ ಸಾಂಖಲಾ ಮತ್ತು ಮಹಿಳಾ ಘಟಕದ ಕಾರ್ಯದರ್ಶಿ ಸೀಮಾ ಬೋಹ್ರಾ, ಕುಶಲ್ ಪಾಲರೇಚಾ, ಕಾರ್ಯದರ್ಶಿ ರಾಜೇಂದ್ರ ದೇಶರಲಾ, ನವರತ್ನಮಲ್ ಪಿತಲಿಯಾ, ಗೌತಮ್ ಗಾಂಧಿ, ದಿನೇಶ್ ಬೋಹ್ರಾ, ಮಹಾವೀರ್ ಧೋಕ್ಕಾ, ರಾಜೇಶ್ ಸಿಂಗ್, ಕೈಲಾಶ್ ಭಂಡಾರಿ, ಸ್ವಾತಿ ಜೈನ್, ರೇಖಾ ಮುಥಾ, ಅನಿತಾ ಗಾಡಿಯಾ, ಸುನಿತಾ ಬಡೋಲಾ, ಸಂಗೀತಾ ಗುಲೇಚಾ ಉಪಸ್ಥಿತರಿದ್ದರು.

ಕಾಂಗ್ರೆಸ್ ಶಾಸಕ ಲಕ್ಷ್ಮಣ್ ಸವದಿ ಕಾರು ಅಪಘಾತ



ಬೆಳಗಾವಿ: ಅಥಣಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಲಕ್ಷ್ಮಣ್ ಸವದಿ ತೆರಳುತ್ತಿದ್ದ ಕಾರು ಇಂದು ಅಪಘಾತಕ್ಕೀಡಾಗಿದೆ. ಅಥಣಿಯಿಂದ ಬೆಂಗಳೂರಿನತ್ತ ಪ್ರಯಾಣಿಸುತ್ತಿದ್ದ ವೇಳೆ ಬೆಳಗಾವಿಯ ಅಥಣಿ ತಾಲೂಕಿನ ದರೂರು ಗ್ರಾಮದ ಬಳಿ ಪಿಕಪ್ ವಾಹನ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಲಕ್ಷ್ಮಣ್ ಸವದಿ ಅವರ ಕಾರಿನ ಮುಂಭಾಗ ಜಖಂಗೊಂಡಿದ್ದು ಸವದಿ ಅವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಅಥಣಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಸೂಟ್‌ಕೇಸ್‌ನಲ್ಲಿ ಬಾಲಕಿ ಶವ ಕೇಸ್: ತನಿಖೆಯ ರೋಚಕತೆ ಬಿಚ್ಚಿಟ್ಟ ಎಸ್‌ಪಿ

ಬೆಂಗಳೂರು, ಜೂ. 9– ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲೂಕಿನ ಹಳೇ ಚಂದಾಪುರ ರೈಲ್ವೆ ಬ್ರಿಡ್ಜ್ ಬಳಿ ಸೂಟ್‌ಕೇಸ್‌ನಲ್ಲಿ ಪತ್ತೆಯಾಗಿದ್ದ ಅಪರಿಚಿತ ಬಾಲಕಿಯ ಶವ ಪ್ರಕರಣವನ್ನು ಸೂರ್ಯನಗರ ಠಾಣಾ ಪೊಲೀಸರು ಭೇದಿಸಿದ್ದಾರೆ. ಪ್ರಕರಣ ಸಂಬಂಧ ಸೂರ್ಯನಗರ ಠಾಣಾ ಪೊಲೀಸರು ಏಳು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳು ಪೊಲೀಸರ ಬಲೆಗೆ ಬಿದ್ದಿದ್ದು ಹೇಗೆ ಬೆಂಗಳೂರು ಟು ಬಿಹಾರ ಪೊಲೀಸರ ಕಾರ್ಯಾಚರಣೆಗೆ ಹೇಗಿತ್ತು ಎಂಬುವುದನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ ಬಾಬಾ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಬಿಹಾರ ಮೂಲದ ಅಶಿಕ್‌ಕುಮಾರ್ (22) ಮುಖೇಶ್ ರಾಜಬನ್ಸಿ (35), ಇಂದು ದೇವಿ (32) ರಾಜರಾಮ್ ಕುಮಾರ್ (18) ಪಿಂಟುಕುಮಾರ್ (18), ಕಾಲು ಕುಮಾರ್(17) ರಾಜುಕುಮಾರ್(17) ಬಂಧಿತರು. ಪ್ರಕರಣದ ಎ1 ಅಶಿಕ್ ಕುಮಾರ್ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಬಳಿಕ ಕೊಲೆ ಮಾಡಿದ್ದಾನೆ. ನಂತರ ಎಲ್ಲರೂ ಸೇರಿಕೊಂಡು ಬಾಲಕಿಯ ಶವವನ್ನು ಸೂಟಕೇಸ್‌ನಲ್ಲಿ ಹಾಕಿ ರೈಲ್ವೆ ಹಳಿ ಪಕ್ಕದಲ್ಲಿ ಎಸೆದು ಹೋಗಿದ್ದಾರೆ ಎಂಬುದು ಪೊಲೀಸ್ ತನಿಖೆಯಲ್ಲಿ ಬಹಿರಂಗವಾಗಿದೆ.

ವಿವರ: ಮೇ 21 ರಂದು ರೈಲ್ವೆ ಬ್ರಿಡ್ಜ್ ಬಳಿ ಸೂಟ್‌ಕೇಸ್‌ನಲ್ಲಿ ಬಾಲಕಿಯ ಶವ ಪತ್ತೆಯಾಗಿತ್ತು. ಮಾಹಿತಿ ತಿಳಿದ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ, ಸೂಟ್‌ಕೇಸ್‌ನಲ್ಲಿ 17 ರಿಂದ 18 ವರ್ಷದ ಬಾಲಕಿಯ ಶವವಿದ್ದ ಸೂಟ್‌ಕೇಸ್ ಅನ್ನು ರೈಲಿನಿಂದ ಬಿಸಾಡಿರಬಹುದೆಂಬ ಅನುಮಾನ ಇತ್ತು. ಆಗ ಬಾಲಕಿಯ ಗುರುತು ಪತ್ತೆ ಆಗಿರಲಿಲ್ಲ. ಈ ಪ್ರಕರಣದ ತನಿಖೆಗೆ ಮೂರು ತಂಡಗಳನ್ನು ರಚಿಸಲಾಗಿತ್ತು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ ಬಾಬಾ ತಿಳಿಸಿದರು.

ಬಾಲಕಿಯ ಶವ ಪತ್ತೆಯಾದ ಬಗ್ಗೆ ಎಲ್ಲಾ ರಾಜ್ಯಗಳಿಗೂ ಮಾಹಿತಿ ನೀಡಲಾಗಿತ್ತು. ಮೂರು ದಿನದ ಬಳಿಕ ಬಿಹಾರದಿಂದ ಮೃತ ಬಾಲಕಿಯ ತಂದೆಯ ಕರೆ ಬಂತು. ನಮ್ಮ ಮಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಬಿಹಾರದಲ್ಲಿ ದೂರು ನೀಡಿದ್ದೇನೆ ಎಂದು ಹೇಳಿದರು. ಅವರನ್ನು ಬೆಂಗಳೂರಿಗೆ ಕರೆಸಿಕೊಂಡೆವು. ಬೆಂಗಳೂರಿಗೆ ಬಂದ ಅವರು ಮೃತಳ ಗುರುತು ಪತ್ತೆ ಹಚ್ಚಿದರು.

ರೀನಾ ಕುಮಾರಿ ಅವರನ್ನು ಅಪಹರಿಸಿಕೊಂಡು ಬಂದ ವ್ಯಕ್ತಿಯ ಹೆಸರು ಕೂಡ ಗೊತ್ತಾಗಿತ್ತು. ರೀನಾ ಕುಮಾರಿಯೇ ತನ್ನ ಪೋಷಕರಿಗೆ ಈ ವ್ಯಕ್ತಿ ಜೊತೆಗೆ ಬಂದಿರುವುದಾಗಿ ಹೇಳಿದ್ದರು. ಘಟನೆ ನಡೆದ ಬಳಿಕ ಎಲ್ಲಾ ಆರೋಪಿಗಳು ಬಿಹಾರಕ್ಕೆ ಹೋಗಿದ್ದರು. ಈ ವಿಚಾರ ಗೊತ್ತಾಗುತ್ತಿದ್ದಂತೆ ನಮ್ಮ ಪೊಲೀಸರು ಬಿಹಾರಕ್ಕೆ ತೆರಳಿ ಏಳೂ ಆರೋಪಿಗಳನ್ನು ಬಂಧಿಸಿದ್ದಾರೆ.

ಓರ್ವ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ, ಇಬ್ಬರು ರೀನಾ ಕುಮಾರಿಯ ಅಕ್ಕ ಪಕ್ಕ ಊರಿನವರು ಎಂದು ಎಸ್ಪಿ ತಿಳಿಸಿದ್ದಾರೆ.

ವಿವಾಹವಾಗುತ್ತೇನೆ ಎಂದು ರೀನಾ ಕುಮಾರಿ ಅವರನ್ನು ಆರೋಪಿ ಅಶಿಕ್‌ಕುಮಾರ್ ಬೆಂಗಳೂರಿಗೆ ಕರೆ ತಂದಿದ್ದಾನೆ. ಆದರೆ, ಈಗಾಗಲೇ ಮದುವೆ ಆಗಿ ಮಕ್ಕಳಿರುವ ವಿಚಾರ ರೀನಾ ಕುಮಾರಿಗೆ ಗೊತ್ತಾಗಿದೆ. ಇದೇ ವಿಚಾರವಾಗಿ ಇಬ್ಬರ ಮಧ್ಯೆ ಗಲಾಟೆಯಾಗಿದೆ. ಈ ವೇಳೆ ಆರೋಪಿ ಅಶಿಕ್ ಕುಮಾರ್, ಬಾಲಕಿ ರೀನಾ ಕುಮಾರಿ ಕತ್ತು ಹಿಸುಕಿ ಕೊಲೆ ಮಾಡಿ ಸೂಟ್‌ಕೇಸ್‌ನಲ್ಲಿ ಮೃತದೇಹವನ್ನು ಹಾಕಿದ್ದಾನೆ. ನಂತರ ಎಲ್ಲರೂ ಸೇರಿಕೊಂಡು ರೈಲ್ವೆ ಹಳಿ ಬಳಿ ಮೃತದೇಹ ಬಿಸಾಡಿ ಪರಾರಿಯಾಗಿದ್ದಾರೆ.

ಸದ್ಗುರು ಶ್ರೀಮಹಾದೇವ ತಾತ ಪ್ರಾಥಮಿಕ ಶಾಲೆ ಕಟ್ಟಡ ಉದ್ಘಾಟನೆ

ಮನುಷ್ಯನ ಆತ್ಮ, ವ್ಯಕ್ತಿತ್ವ ವಿಕಾಸಕ್ಕೆ ಶಿಕ್ಷಣ, ಜ್ಞಾನ ಅಗತ್ಯ: ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಸದ್ಗುರು ಮಹಾದೇವ ತಾತ ಪ್ರಾಥಮಿಕ ಶಾಲೆ ಕಟ್ಟಡವನ್ನು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ನಂಜನಗೂಡು, ಜೂ.9– ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಸಂಸ್ಕಾರಯುತ, ಗುಣಮಟ್ಟದ ಶಿಕ್ಷಣ ಒದಗಿಸುವ ಸಲುವಾಗಿ ಮಹಾದೇವ ತಾತ ಭಕ್ತ ಮಂಡಳಿ ವತಿಯಿಂದ ಸದ್ಗುರು ಮಹಾದೇವ ತಾತ ಪ್ರಾಥಮಿಕ ಶಾಲೆಯ ನೂತನ ಭವ್ಯ ಕಟ್ಟಡ ನಿರ್ಮಾಣವಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸುತ್ತೂರು ಕ್ಷೇತ್ರದ ವೀರ ಸಿಂಹಾಸನ ಮಠದ ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಸಂಗಮ ಕ್ಷೇತ್ರದಲ್ಲಿರುವ ಶ್ರೀ ಸದ್ಗುರು ಮಹಾದೇವ ತಾತ ಭಕ್ತ ಮಂಡಳಿ ವತಿಯಿಂದ ನಿರ್ಮಿಸಲಾಗಿರುವ ಪ್ರಾಥಮಿಕ ಶಾಲೆಯ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನಿಗೆ ಜ್ಞಾನವೇ ಸಂಪತ್ತು, 'ವಿದ್ಯಾ ಸರ್ವತ್ರ ಪೂಜ್ಯತೆ' ಎಂಬಂತೆ ಜ್ಞಾನ ಸಂಪಾದಿಸಿದಲ್ಲಿ ಎಲ್ಲಾ ಕಡೆ ಗೌರವಿಸಲ್ಪಡುತ್ತಾನೆ. ಆಧುನಿಕ ಸ್ಪರ್ಧಾತ್ಮಕ ಯುಗದಲ್ಲಿ ಕೃತಕ ಬುದ್ಧಿಮತ್ತೆ ಮೂಲಕ ಮನುಷ್ಯನ ಅನೇಕ ಸಮಸ್ಯೆಗಳಿಗೆ ಪರಿಹಾರ ಪಡೆಯಬಹುದಾಗಿದೆ. ಜೊತೆಗೆ ಅಂತಹ ಕೃತಕ ಬುದ್ಧಿಮತ್ತೆ ಯುಗದಲ್ಲಿ ಮನುಷ್ಯ ಜ್ಞಾನ ಸಂಪಾದಿಸಿದಲ್ಲಿ ಮಾತ್ರ ಬದುಕಲು ಸಾಧ್ಯ. ಆದ್ದರಿಂದ ಮನುಷ್ಯನ ಆತ್ಮ, ವ್ಯಕ್ತಿತ್ವ ವಿಕಾಸಕ್ಕೆ ಶಿಕ್ಷಣ, ಜ್ಞಾನ ಸಂಪಾದಿಸಬೇಕು. ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಳಿಸುವ ಸಲುವಾಗಿ ಹಾಗೂ ಉತ್ತಮ ಧಾರ್ಮಿಕ ವಾತಾವರಣದಲ್ಲಿ ಗ್ರಾಮೀಣ ಮಕ್ಕಳಿಗೆ ಸಂಸ್ಕಾರಯುತ, ಗುಣಮಟ್ಟದ ಶಿಕ್ಷಣ ಒದಗಿಸುವ ಸಲುವಾಗಿ ಸದ್ಗುರು ಮಹಾದೇವ ತಾತ ಭಕ್ತ ಮಂಡಳಿ ವತಿಯಿಂದ ನೂತನ ಶಾಲಾ ಕಟ್ಟಡ ಪ್ರಾರಂಭೋತ್ಸವ ಮಾಡಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಆಧುನಿಕತೆ ಭರಾಟೆಯ ನಡುವೆ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಘಟಿಸುತ್ತಿವೆ. ಅಂತಹ ಬದಲಾವಣೆಗೆ ಹೊಂದಿಕೊಂಡು ಶಾಲಾ ಆಡಳಿತ ಮಂಡಳಿ ಮತ್ತು ಶಿಕ್ಷಕರು ಮೌಲ್ಯಯುತ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ದೊರಕಿಸಿಕೊಡಿ ಎಂದು ಕಿವಿಮಾತು ಹೇಳಿದರು.


ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ ಸಂಗಮ ಕ್ಷೇತ್ರ ಪವಾಡ ಕ್ಷೇತ್ರವಾಗಿದ್ದು, ಬಸವಣ್ಣನವರ ದಾಸೋಹ ಕಾಯಕ ಶಿಕ್ಷಣಕ್ಕೆ ಆದ್ಯತೆ ನೀಡಿ ಕೆಲಸ ಮಾಡುತ್ತಿದೆ. ಪ್ರವಾಹದ ವೇಳೆ ಈ ಕ್ಷೇತ್ರ ಮುಳುಗಡೆಯಾಗಿತ್ತು. ಪ್ರವಾಹ ತಪ್ಪಿಸುವ ಸಲುವಾಗಿ ನಾನು ಶಾಸಕನಾಗಿದ್ದ ವೇಳೆ ತಡೆಗೋಡೆ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿ ತಡೆಗೋಡೆ ನಿರ್ಮಿಸಿ ಕೊಟ್ಟಿದ್ದೇನೆ ಎಂದರು.

ಮಾಜಿ ಶಾಸಕ ಕೇಶವಮೂರ್ತಿ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯ ಪ್ರಾರಂಭಿಸಿ ಉತ್ತಮ ಶಿಕ್ಷಣ ದೊರಕಿಸಿಕೊಡಲು ನೆರವಾಗಿ ಎಂದರು.

ಸಮಾರಂಭದಲ್ಲಿ ದೇವನೂರು ಗುರುಮಲ್ಲೇಶ್ವರ ಮಠದ ಮಹಾಂತ ಸ್ವಾಮೀಜಿ, ಸಾಲೂರು ಬೃಹನ್ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಉಕ್ಕಿನಕಂತೆ ಮಠದ ಸಾಂಬ ಸದಾಶಿವ ಸ್ವಾಮೀಜಿ, ಶಿರಮಳ್ಳಿ ಮಠದ ಇಮ್ಮಡಿ ಮುರುಘೀ ಸ್ವಾಮೀಜಿ, ಹುಲ್ಲಹಳ್ಳಿ ಮಠದ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ಹರಗುರು ಚರಮೂರ್ತಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಶಾಸಕರಾದ ಅನಿಲ್ ಕುಮಾರ್, ಗಣೇಶ್ ಪ್ರಸಾದ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಶ್ರೀಮಹಾದೇವ ತಾತ ಭಕ್ತ ಮಂಡಳಿ ಅಧ್ಯಕ್ಷ ಶಿವರಾಜಪ್ಪ, ನಿರ್ದೇಶಕರಾದ ಹೆಚ್.ಎಂ.ಕೆಂಡಗಣ್ಣಪ್ಪ, ಎಂ.ಮಾದಪ್ಪ, ಸಂಗಣ್ಣ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

> ಸದ್ಗುರು ಮಹಾದೇವ ತಾತಾರವರು ಸೂಕ್ಷ್ಮಮತಿ ಉತ್ತಮ ಜ್ಞಾನಿಗಳಾಗಿದ್ದರು. ಅವರು ಜನರಿಗಾಗಿ ಬದುಕಿದ್ದರು. ಅವರು ಪ್ರೇರಕ ಶಕ್ತಿಯಾಗಿ ಇಂದಿಗೂ ಎಲ್ಲಾ ಭಕ್ತರಿಗೆ ಪ್ರೇರಣೆ ನೀಡುತ್ತಿದ್ದಾರೆ. ಶಾಮನೂರು ಶಿವಶಂಕರಪ್ಪ ಅವರ ಕುಟುಂಬ ಸದ್ಗುರು ಮಹಾದೇವತಾತರ ಬಗ್ಗೆ ಅಪಾರ ಭಕ್ತಿ ಇಟ್ಟಿದ್ದಾರೆ. ಆದ್ದರಿಂದಲೇ ಈ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸಲು ಶಿಕ್ಷಣ ಸಂಸ್ಥೆ ನಿರ್ಮಿಸಿದ್ದಾರೆ. ದಾನಿಗಳ ನೆರವಿನಿಂದ ಇಲ್ಲಿ ಉತ್ತಮ ಶಾಲಾ ಕಟ್ಟಡ ನಿರ್ಮಿಸಿದ್ದಾರೆ.
> – ಜಿ.ಟಿ.ದೇವೇಗೌಡ, ಶಾಸಕ.

ನಿವೃತ್ತ ಮುಖ್ಯ ಶಿಕ್ಷಕರಿಗೆ ಬೀಳ್ಕೊಡುಗೆ



ನಿವೃತ್ತ ಮುಖ್ಯ ಶಿಕ್ಷಕ ಎಂ.ಕೊಂಗಯ್ಯ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ತಿ.ನರಸೀಪುರ, ಜೂ.9– ಸಮಾಜಮುಖಿಯಾಗಿ, ನಿಸ್ವಾರ್ಥದಿಂದ ಕೆಲಸ ನಿರ್ವಹಿಸುವ ಶಿಕ್ಷಕರನ್ನು ಸಮಾಜ ಖಂಡಿತವಾಗಿ ಗೌರವಿಸುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ ತಿಳಿಸಿದರು.

ತಾಲೂಕಿನ ಸಿ.ಬಿ.ಹುಂಡಿ ಕ್ಲಸ್ಟರ್ ವ್ಯಾಪ್ತಿಯ ಚಂದಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಮುಖ್ಯ ಶಿಕ್ಷಕ ಎಂ.ಕೊಂಗಯ್ಯ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು, ತಾವು ಕಲಿತ ಜ್ಞಾನವನ್ನು ಮಕ್ಕಳಿಗೆ ಕಲಿಸಿ ಮಕ್ಕಳಲ್ಲಿ ಜ್ಞಾನ ಮತ್ತು ಜವಾಬ್ದಾರಿಗಳನ್ನು ತಿಳಿಸುವಂತವರು ಶಿಕ್ಷಕರು ಎಂದರು.

ಮುಖ್ಯ ಶಿಕ್ಷಕ ಕಪ್ಪು ಚುಕ್ಕೆ ಇಲ್ಲದೆ, ಆರೋಪಗಳಿಲ್ಲದೆ ಯಶಸ್ವಿಯಾಗಿ ಮುನ್ನಡೆದರೆ ಅದಕ್ಕಿಂತ ಗೌರವ ಮತ್ತು ಸಾರ್ಥಕ ಸೇವೆ ಮತ್ತೊಂದಿಲ್ಲ. ಎಂ.ಕೊಂಗಯ್ಯ ಸಹ ಇದುವರೆಗೂ ಯಾವ ಆರೋಪ ಇಲ್ಲದೆ ಎಲ್ಲರ ಜೊತೆ ಅತ್ಯಂತ ವಿಶ್ವಾಸಾರ್ಹರಾಗಿ ತಮ್ಮ ವೃತ್ತಿ ಜೀವನ ಮುಗಿಸಿ ನಿವೃತ್ತಿ ದಡ ಸೇರಿರುವುದು ಅವರ ನಿಸ್ವಾರ್ಥ ಸೇವೆಯನ್ನು ಪ್ರಾಮಾಣೀಕರಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇಸಿಓ ಜಗದೀಶ್, ಬಿಆರ್‌ಸಿ ಮಹದೇವಸ್ವಾಮಿ, ಸಿಆರ್‌ಪಿ ಚೆಲುವರಾಜು, ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಶಿಕ್ಷಕರ ಸಂಘದ ಅಧ್ಯಕ್ಷ ಟಿ.ಎಸ್. ಸುಬ್ಬಣ್ಣ, ಜಿಲ್ಲಾ ಸಂಘದ ಪ್ರಧಾನ ಕಾರ್ಯ ದರ್ಶಿ ಮಲ್ಲಣ್ಣ, ಸಹ ಕಾರ್ಯದರ್ಶಿ ಕೆ.ವಿ.ಚಿತ್ರ ವಿಶಾಲಾಕ್ಷಿ, ಸಿದ್ದಮಲ್ಲಪ್ಪ, ಶಿಕ್ಷಕರಾದ ಸೂರ್ಯ ಕುಮಾರ್, ಜಯರಾಮ್, ಎಸ್. ಜ್ಯೋತಿ, ಶಾಂಭವಿ, ಗೀತಾ, ಎಸ್‌ಡಿಎಂಸಿ ಅಧ್ಯಕ್ಷ ಮಾದಲಾಂಬಿಕೆ, ಮುಖ್ಯ ಶಿಕ್ಷಕ ಧರ್ಮೇಂದ್ರ ಪ್ರಸಾದ್, ಗ್ರೀಟಾ, ಚಂದ್ರ ಕುಮಾರಿ, ಶಾಂತರಾಜು, ಅಡುಗೆ ಸಿಬ್ಬಂದಿ ಮಹದೇವಮ್ಮ, ಹೇಮಾ, ಕೊಂಗಯ್ಯನವರ ಪತ್ನಿ ಜಯಲಕ್ಷ್ಮಿ, ಪುತ್ರರಾದ ಕೇಶವ್‌ರಾಜ್, ಕಿಶೋರ್ ಗೌಡ, ಸೊಸೆ ನಿವೇದಿತಾ ಇತರರಿದ್ದರು.

ಪ್ರತಿಭಾ ಪುರಸ್ಕಾರ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಿ

ಶಾಸಕ ಡಿ.ರವಿಶಂಕರ್



95ಕ್ಕಿಂತ ಹೆಚ್ಚು ಅಂಕ ಪಡೆದ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಜೂ.9– ನೌಕರರ ಸಂಘಟನೆಗಳು ಸೇರಿದಂತೆ ಇತರ ಸಂಘ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಪ್ರೋತ್ಸಾಹ ನೀಡಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದಿಂದ ನಡೆದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಕಾರ್ಯಕ್ರಮಗಳಿಗೆ ನಾನು ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದರು.

ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರಮುಖ ಘಟ್ಟವಾಗಿದ್ದು, ಇದನ್ನು ಅರಿತು ಓದಿನ ಕಡೆಗೆ ಹೆಚ್ಚು ಒತ್ತು ನೀಡಬೇಕು. ಮೊಬೈಲ್ ಬಳಕೆಯಿಂದ ದೂರ ಇರಬೇಕು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಬೇಸರ ತಂದಿದ್ದು, ಮುಂದಿನ ವರ್ಷ ಉತ್ತಮ ಸಾಧನೆ ಮಾಡಲು ಶಿಕ್ಷಣ ಇಲಾಖೆ ಸಹಕಾರ ನೀಡಬೇಕು ಎಂದರು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರ ಪ್ರಗತಿ ಸಾಧಿಸಿದಾಗ ಮಾತ್ರ ಮುಂದುವರೆದ ರಾಷ್ಟ್ರವಾಗಲು ಸಾಧ್ಯ. ಅದಕ್ಕಾಗಿ ನಾನು ಈ 2 ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡುತ್ತಿದ್ದು, ಶಿಕ್ಷಣ ಇಲಾಖೆ ಎಲ್ಲಾ ಸಿಬ್ಬಂದಿ ಮತ್ತು ಭೋದಕ ವೃಂದ ಉತ್ತಮವಾಗಿ ಕೆಲಸ ಮಾಡುವ ಮೂಲಕ ಶಿಕ್ಷಿತ ಸಮಾಜ ನಿರ್ಮಾಣಕ್ಕೆ ಕಾರಣರಾಗಬೇಕೆಂದು ಕೋರಿದರು.

ಪುರಸಭೆ ಸದಸ್ಯ ನಟರಾಜು, ಸಂಘದ ಅಧ್ಯಕ್ಷ ಎಸ್.ವಸಂತಕುಮಾರ್, ಬಿಇಓ ಆರ್.ಕೃಷ್ಣಪ್ಪ, ಕಾಂಗ್ರೆಸ್ ಮುಖಂಡ ಜಿ.ಎಸ್.ವೆಂಕಟೇಶ್ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ 95ಕ್ಕಿಂತ ಹೆಚ್ಚು ಅಂಕ ಪಡೆದ 46 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಲ್ಲದೇ ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಸಂಘದ ಪದಾಧಿಕಾರಿಗಳಾದ ಗೋವಿಂದರಾಜು, ಜ್ಯೋತಿಕುಮಾರ್, ರಾಜೇಶ್ವರಿ, ಬೋಜೇಗೌಡ, ಸತೀಶ್, ಸುಮಿತ್ರ, ಚೆಲುವರಾಜು, ಲೋಕೇಶ್, ಮುತ್ತಕ್ಕ ಕಿರಗಿಮಠ, ಓ.ಎನ್.ಚಾರಿತ್ರ, ರೇವಣ್ಣ, ಪಿ. ಶೋಭಾ, ನಾಗರಾಜು, ಮಂಜುನಾಥ್, ಭಾಸ್ಕರ್ ಮತ್ತಿತರರಿದ್ದರು.

ಹೆಬ್ಬಲಗುಪ್ಪೆ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ



ಹೆಬ್ಬಲಗುಪ್ಪೆಯಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು

ಸರಗೂರು, ಜೂ.9– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದ ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೃಷಿ ಮೇಲ್ವಿಚಾರಕ ಬಿ.ಜೆ. ರಾಜು ಮಕ್ಕಳಿಗೆ ಗಿಡಗಳನ್ನು ವಿತರಿಸಿ ಮಾತನಾಡಿ, ಪ್ರತಿ ವರ್ಷ ಜೂ.5 ರಂದು ವಿಶ್ವ ಪರಿಸರ ದಿನಾಚರಣೆ ಆಚರಿಸಲಾಗುತ್ತದೆ. ಇದರ ಉದ್ದೇಶ ಪರಿಸರ ಸಂರಕ್ಷಣೆ ಮಾಡುವುದು. ಗಿಡಗಳನ್ನು ನೆಟ್ಟು ಬೆಳೆಸುವುದರಿಂದ ನಮಗೆ ಶುದ್ಧ ಆಮ್ಲಜನಕ, ಮಳೆ, ನೆರಳು, ಭೂ ಕುಸಿತ ತಡೆಗಟ್ಟುವುದು ಸೇರಿದಂತೆ ಹತ್ತಾರು ಪ್ರಯೋಜನವಾಗಲಿದೆ ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ರಾಜ್ಯಾದ್ಯಂತ ಶಾಲಾ–ಕಾಲೇಜು, ಕೆರೆ ಅಂಗಳದಲ್ಲಿ ಗಿಡ ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಲಾಗುತ್ತಿದೆ. ನಗರೀಕರಣ ಹೆಚ್ಚಾದಂತೆ ಮರಗಳು ಕಡಿಮೆ ಆಗುತ್ತಿದೆ. ಕಾಡು ಬೆಳೆಸಿ ನಾಡು ಉಳಿಸಿ ಎಂಬ ನಾಣ್ನುಡಿಯಂತೆ ಭೂ ಸವಕಳಿ ತಡೆಗಟ್ಟಲು, ಮಳೆ ಮತ್ತು ಅಂತರ್ಜಲ ಮಟ್ಟ ಹೆಚ್ಚಿಸಲು, ಮರಗಳನ್ನು ನೆಡುತ್ತಾ ಕಾಡುಗಳನ್ನು ಉಳಿಸುತ್ತಾ ಹೋಗಬೇಕು ಎಂದರು.

ಪ್ರೌಢಶಾಲೆ ಶಿಕ್ಷಕ ಎಂ.ಮಾದೇಶ್ ಮಾತನಾಡಿ, ಈಗಿನ ಮಕ್ಕಳಿಗೆ ಮರಗಳ ಹೆಸರು ಗೊತ್ತಿಲ್ಲದ ಪರಿಸ್ಥಿತಿ ಉದ್ಭವ ಆಗಿದೆ. ಪ್ರಾಣಿ ಪಕ್ಷಿಗಳು ತಿಂದ ಹಣ್ಣುಗಳ ಬೀಜಗಳು ಭೂಮಿಗೆ ಬಿದ್ದಿದ್ದರಿಂದ ಎಲ್ಲಾ ಕಡೆ ಮರಗಳು ಕಂಡುಬರುತ್ತಿದೆ ಎಂದು ಅಭಿಪ್ರಾಯಪಟ್ಟರು.

ಯಾವ ಮರದ ಎಲೆಗಳು ಚಿಕ್ಕದಾಗಿರುತ್ತೋ ಆ ಮರಗಳಲ್ಲಿ ಕಡಿಮೆ ಆಮ್ಲಜನಕ ಬಿಡುಗಡೆ ಆಗುತ್ತದೆ. ಆದರೆ ಜನರು ಆ ಮರದಲ್ಲಿ ದುಷ್ಟಶಕ್ತಿ ಇದೆ ಎಂದು ಬಿಂಬಿಸುತ್ತಾರೆ. ಎಲ್ಲಾ ಮರಗಿಡಗಳು ನಮಗೆ ಆಮ್ಲಜನಕ ಕೊಡುತ್ತದೆ. ಮನುಷ್ಯರ ದೂರಾಲೋಚನೆಯಿಂದಾಗಿ ಕಾಡುಗಳ ನಾಶ ಆಗುತ್ತಿದೆ ಎಂದರು.

ಹೆಬ್ಬಲಗುಪ್ಪೆ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಸೋಮೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕ ಬಿ.ಜೆ. ಮಹಾದೇವ, ಒಕ್ಕೂಟದ ಅಧ್ಯಕ್ಷೆ ಸುನಂದ, ಕೃಷ್ಣಮೂರ್ತಿ, ಸೇವಾ ಪ್ರತಿನಿಧಿ ದೇವಿಕಾ ಉಪಸ್ಥಿತರಿದ್ದರು.

ಕಣ್ಮರೆಯಾಗಿದ್ದ ಮೂವರು ಅಪ್ರಾಪ್ತ ಬಾಲಕಿಯರು ಪತ್ತೆ

ನಂಜನಗೂಡು, ಜೂ.9– ಆಟವಾಡಲು ತೆರಳುವುದಾಗಿ ತಿಳಿಸಿ ಮನೆಯಿಂದ ಹೊರ ಹೋಗಿ ಕಣ್ಮರೆಯಾಗಿದ್ದ ಮೂವರು ಅಪ್ರಾಪ್ತ ಬಾಲಕಿಯರು ಸೋಮವಾರ ಅಜ್ಜಿ ಮನೆಯಲ್ಲಿ ಪ್ರತ್ಯಕ್ಷವಾಗುವ ಮೂಲಕ ಪೋಷಕರ ಆತಂಕ ದೂರವಾಗಿಸಿದ್ದಾರೆ.

ನಗರದ ಅಶೋಕಪುರಂ ಬಡಾವಣೆ ನಿವಾಸಿಗಳಾದ ಈ ಮೂವರು ಬಾಲಕಿಯರು ಭಾನುವಾರ ಮಧ್ಯಾಹ್ನ 12.30ರಲ್ಲಿ ಆಟವಾಡಲು ತೆರಳುವುದಾಗಿ ತಿಳಿಸಿ ಮನೆಯಿಂದ ಹೊರ ಹೋದವರು ವಾಪಸ್ ಮನೆಗೆ ಆಗಮಿಸಿರಲಿಲ್ಲ. ಹೀಗಾಗಿ ಆತಂಕಗೊಂಡಿದ್ದ ಪೋಷಕರು ನಂಜನಗೂಡು ಪಟ್ಟಣ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸಿಪಿಐ ರವೀಂದ್ರ ನೇತೃತ್ವದ ತಂಡ ರಚಿಸಿ ಮಕ್ಕಳ ಹುಡುಕಾಟಕ್ಕೆ ಮುಂದಾದ ವೇಳೆ ಕಣ್ಮರೆಯಾಗಿದ್ದ ಮಕ್ಕಳು ಹಾಸನ ಮೂಲಕ ಕುಕ್ಕೆ ಸುಬ್ರಹ್ಮಣ್ಯಕ್ಕೆ ತೆರಳಿರುವ ಬಗ್ಗೆ ಮಾಹಿತಿ ಲಭ್ಯವಾಯಿತು. ಆದರೆ ಅಲ್ಲಿಂದ ಸೋಮವಾರ ಸಂಜೆ ವೇಳೆಗೆ ಮೈಸೂರಿನಲ್ಲಿರುವ ಓರ್ವ ಬಾಲಕಿಯ ಅಜ್ಜಿ ಮನೆಗೆ ಹಿಂತಿರುಗಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಮಾಹಿತಿ ಪಡೆದ ಪೋಷಕರು ಮಕ್ಕಳನ್ನು ಮನೆಗೆ ಕರೆದೊಯ್ದಿದ್ದಾರೆ. ಇನ್ನು ಮೂವರು ಮಕ್ಕಳು ಏಕಾಏಕಿ ಕಾಣೆಯಾಗಿದ್ದರಿಂದ ಆತಂಕಗೊಂಡಿದ್ದ ಸ್ಥಳೀಯರು ಕೊನೆಗೆ ಸುರಕ್ಷಿತವಾಗಿ 3 ಮಕ್ಕಳು ಹಿಂತಿರುಗಿದ್ದರಿಂದ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಮೂಗೂರಲ್ಲಿ ವಿಜೃಂಭಣೆಯ ಕಂಡಾಯ ಉತ್ಸವ



ಮೂಗೂರಿನ ಶ್ರೀರಾಮ ಕಾಲೋನಿ ನಿವಾಸಿಗಳಿಂದ ಕುರುಬನ ಕಟ್ಟೆ ಕಂಡಾಯ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಸಮುದಾಯದ ಮುಖಂಡರು, ನೀಲಗಾರರು, ಯಜಮಾನರು, ಗ್ರಾಮಸ್ಥರು ಉಪಸ್ಥಿತರಿದ್ದರು

ನಾಲ್ವಡಿ ಜಯಂತಿ: ಕೋಟೆಯಲ್ಲಿ ರಕ್ತದಾನ ಶಿಬಿರ



ರಕ್ತದಾನ ಶಿಬಿರವನ್ನು ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಉದ್ಘಾಟಿಸಿದರು

ಹೆಚ್.ಡಿ.ಕೋಟೆ, ಜೂ.9– ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಹಾರ್ಟ್ ಸಂಸ್ಥೆ ಮೈಸೂರು, ದೀಪು ಅರಸ್ ಪಾರ್ಥ ಬ್ರಿಕ್ಸ್ ಇಂಡಸ್ಟ್ರೀ, ಆರೋಗ್ಯ ಇಲಾಖೆ ಹೆಚ್.ಡಿ.ಕೋಟೆ, ರಕ್ತನಿಧಿ ಕೇಂದ್ರ ಕೆ.ಆರ್.ಆಸ್ಪತ್ರೆ, ತಾಲೂಕು ಅರಸು ಸಂಘ, ವಿಶ್ವಕರ್ಮ ಯುವ ಬ್ರಿಗೇಡ್, ಕರ್ನಾಟಕ ರಕ್ಷಣಾ ವೇದಿಕೆ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿರುವ ಆಯುರ್ವೇದ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ನಡೆಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಿಬಿರ ಉದ್ಘಾಟಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಏಷ್ಯಾದಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳಲ್ಲಿ ಮೈಸೂರು ರಾಜ ಮನೆತನ ಪ್ರಸಿದ್ಧಿ ಪಡೆದಿದೆ. ರಾಜ್ಯದಲ್ಲಿ ವಿದ್ಯುತ್ ಸ್ಥಾವರ, ಅಣೆಕಟ್ಟುಗಳನ್ನು ನಿರ್ಮಿಸಿ ರೈತರ ಬಾಳಲ್ಲಿ ಹೊಸ ಚೈತನ್ಯ ತುಂಬಿದ ಮಹಾನ್ ವ್ಯಕ್ತಿ ನಾಲ್ವಡಿ ಅವರು ಹುಟ್ಟಿದ ದಿನದಂದು ರಕ್ತದಾನ ಶಿಬಿರ ಆಯೋಜಿಸಿರುವುದು ಶ್ಲಾಘನೀಯ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು ಎಂದರು.

ಇದೇ ವೇಳೆ ರಕ್ತದಾನ ಶಿಬಿರದಲ್ಲಿ 20 ಮಂದಿ ರಕ್ತದಾನ ಮಾಡಿದರು. ಈ ವೇಳೆ ಕೆ.ಆರ್.ಆಸ್ಪತ್ರೆ ರಕ್ತನಿಧಿ ಕೇಂದ್ರದ ಮುಖ್ಯಸ್ಥೆ ಡಾ.ಕುಸುಮ, ಹಾರ್ಟ್ ಸಂಸ್ಥೆ ಅಧ್ಯಕ್ಷ ಶಿವಕುಮಾರ, ಪಾರ್ಥ ಬ್ರಿಕ್ಸ್ ಮಾಲೀಕರು ಹಾಗೂ ಕೋಟೆ ತಾಲೂಕು ಅರಸು ಸಂಘದ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಉಪಾಧ್ಯಕ್ಷ ದೀಪು ಅರಸ್, ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್. ಅರಸ್, ಡಾ.ಪ್ರಜ್ವಲ್, ಆಯುರ್ವೇದ ಆಸ್ಪತ್ರೆಯ ಡಾ.ಕುಮಾರಿ, ಹಾರ್ಟ್ ಸಂಸ್ಥೆ ಸಂಯೋಜಕ ಶಿವಲಿಂಗ, ಸಿಂಧು ದೀಪು ಅರಸ್, ಆಸ್ಪತ್ರೆ ಸಿಬ್ಬಂದಿ ವರ್ಗ, ಸಾರ್ವಜನಿಕರು ಇದ್ದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ



ಹುಣಸೂರು ತಾಲೂಕಿನ ಬೋಳನಹಳ್ಳಿ ಗ್ರಾಪಂ ನೂತನ ಅಧ್ಯಕ್ಷ ರವಿ ಆರ್.ಬಿ ಹಾಗೂ ಉಪಾಧ್ಯಕ್ಷೆ ಭವ್ಯ ಅವರು ಶಾಸಕ ಜಿ.ಡಿ.ಹರೀಶ್‌ಗೌಡ, ಕೆಎಂಎಫ್ ನಿರ್ದೇಶಕ ವಿಕೆಎಸ್ ಕುಮಾರ್ ಅವರನ್ನು ಸನ್ಮಾನಿಸಿದರು. ಈ ವೇಳೆ ಜೆಡಿಎಸ್ ಮುಖಂಡರಾದ ಲೋಕೇಶ್, ಗ್ರಾಪಂನ ಎಲ್ಲಾ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಉಪಾಧ್ಯಕ್ಷರು, ಸದಸ್ಯರು ಹಾಜರಿದ್ದರು.

ಸಮವಸ್ತ್ರ, ನೋಟ್‌ಬುಕ್ ವಿತರಣೆ



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ನೋಟ್‌ಬುಕ್ ವಿತರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ, ಶಿಕ್ಷಕರಾದ ಜಯಪ್ರಕಾಶ್, ಪ್ರಸನ್ನ, ಮಹೇಶ್, ಭಾಗ್ಯ, ಗಿರಿಜಾಮಣಿ, ಗೀತಾ, ಶಾಲಿನಿ, ಮಾಜಿ ಅಧ್ಯಕ್ಷ ಸದಾಶಿವ ಹಾಜರಿದ್ದರು.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಹೆಚ್.ಡಿ.ಕೋಟೆ, ಜೂ.9– ಕೋಟೆ ಮತ್ತು ಸರಗೂರು ತಾಲೂಕಿನ ತೋಟಗಾರಿಕೆ ಇಲಾಖೆ ವತಿಯಿಂದ 2025–26ನೇ ಸಾಲಿನ ವಿವಿಧ ಯೋಜನೆಗಳಡಿ ಸಹಾಯಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಧಾನಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಪ್ರತಿ ಹನಿ ಅಧಿಕ ಬೆಳೆ ಕಾರ್ಯಕ್ರಮದಡಿ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಲು ಎಲ್ಲಾ ವರ್ಗದ ರೈತರಿಗೆ 2.00 ಹೆಕ್ಟೇರ್‌ವರೆಗೆ ಶೇ.90% ಸಹಾಯಧನ ನೀಡಲಾಗುವುದು. ತಾಳೆ ಬೆಳೆ ಅಭಿವೃದ್ಧಿ ಯೋಜನೆಯಡಿ ತಾಳೆ ಬೆಳೆ ಪ್ರದೇಶ ವಿಸ್ತರಣೆಗೆ ಶೇ.90%ರ ಸಹಾಯಧನ ಹಾಗೂ 4 ವರ್ಷಗಳವರೆಗೆ ಅಂತರ ಬೇಸಾಯಕ್ಕೆ ಹಾಗೂ ರಸಗೊಬ್ಬರ ಖರೀದಿಗೆ ಶೇ.50%ರ ಸಹಾಯಧನ ನೀಡಲಾಗುವುದು.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಹಾಗೂ ತಂಬಾಕು ಪರ್ಯಾಯ ಬೆಳೆ ಯೋಜನೆಯಡಿ ತರಕಾರಿ ಹಾಗೂ ಬಾಳೆ ಪ್ರದೇಶ ವಿಸ್ತರಣೆಗೆ ಸಹಾಯಧನ ನೀಡಲಾಗುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಲಘು ಪೋಷಕಾಂಶ, ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿ ಹಾಗೂ ಸೋಲಾರ್ ಪಂಪ್‌ಸೆಟ್ ಅಳವಡಿಸಲು ಅವಕಾಶವಿದ್ದು, ಆಸಕ್ತ ರೈತರು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕಿ ಎಸ್.ನೇತ್ರಾವತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೈಟೆಕ್ ಆಸ್ಪತ್ರೆ ಉದ್ಘಾಟನೆಗೆ ವಿಳಂಬ: ಪ್ರತಿಭಟನೆ



ಹೈಟೆಕ್ ಆಸ್ಪತ್ರೆ ಉದ್ಘಾಟನೆಗೆ ವಿಳಂಬ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಹುಣಸೂರು, ಜೂ.9– ಕೋಟ್ಯಾಂತರ ರೂ. ವೆಚ್ಚದಲ್ಲಿ ನಗರದಲ್ಲಿ ಹೈಟೆಕ್ ಸಾರ್ವಜನಿಕ ಆಸ್ಪತ್ರೆ ನಿರ್ಮಾಣವಾಗಿದ್ದರೂ ಉದ್ಘಾಟಿಸಲು ಮೀನಾಮೇಷ ಎಣಿಸುತ್ತಿರುವ ಸರ್ಕಾರ ಹಾಗೂ ತಾಲೂಕು ಆಡಳಿತದ ವಿರುದ್ಧ ಸೋಮವಾರ ನಗರದಲ್ಲಿ ಸತ್ಯ ಫೌಂಡೇಶನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮುಖಂಡ ಸತ್ಯಪ್ಪ ಮಾತನಾಡಿ, ಹುಣಸೂರು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಕರ್ಮ ಭೂಮಿಯಾಗಿದ್ದು, ತಾಲೂಕಿನಿಂದ ಆಯ್ಕೆಯಾದ ಸಿ.ಹೆಚ್. ವಿಜಯ್‌ಶಂಕರ್ ಮೇಘಾಲಯ ರಾಜ್ಯಪಾಲರಾಗಿದ್ದಾರೆ. ಜಿ.ಟಿ.ದೇವೇಗೌಡ ಸಚಿವರು, ಶಾಸಕರಾಗಿ, ಹೆಚ್.ಪಿ.ಮಂಜುನಾಥ್ 3 ಬಾರಿ ಶಾಸಕ, ಹಾಲಿ ಶಾಸಕ ಜಿ.ಡಿ. ಹರೀಶ್‌ಗೌಡ 2 ವರ್ಷ ಪೂರೈಸಿದ್ದು, ಡಿ. ತಿಮ್ಮಯ್ಯ, ಹೆಚ್.ವಿಶ್ವನಾಥ್, ಮಧು ಮಾದೇಗೌಡ, ಮಂಜೇಗೌಡ ಇವರೆಲ್ಲರೂ ಹುಣಸೂರನ್ನು ಪ್ರತಿನಿಧಿಸಿದ್ದರೂ ಸಹ ನಗರದಲ್ಲಿ 37 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಆಸ್ಪತ್ರೆಗೆ ಅಗತ್ಯ ಸಲಕರಣೆ ಪೂರೈಸಲು ಕಳೆದ 6 ತಿಂಗಳಿಂದ ಟೆಂಡರ್ ಕರೆಯದೇ ವಿಳಂಬ ಮಾಡಿ ಆಸ್ಪತ್ರೆಯನ್ನು ಪಾಳು ಕೊಂಪೆಗೆ ಸೇರಿಸುತ್ತಿರುವುದು ಹಾಗೂ ಯಾರಿಗೂ ಆಸ್ಪತ್ರೆ ಶೀಘ್ರ ಉದ್ಘಾಟನೆ ಯಾಗಲಿ ಎಂಬ ಇಚ್ಛಾಶಕ್ತಿ ಇಲ್ಲದಿರುವುದು ವಿಷಾದನೀಯ. ಕೂಡಲೇ ಹೈಟೆಕ್ ಆಸ್ಪತ್ರೆ ಉದ್ಘಾಟನೆಗೊಳ್ಳುವುದರೊಂದಿಗೆ ಅರಸು ಭವನವು 9.50 ಕೋಟಿ ಅನುದಾನದಿಂದ ನಿರ್ಮಾಣ ಗೊಂಡಿದ್ದು, ಈ ಭವನದ ಕಾಮಗಾರಿ ಸಹ ಪೂರ್ಣಗೊಳಿಸದೆ ನಿರ್ಲಕ್ಷ್ಯವಹಿಸಲಾಗಿದೆ. ಆದಷ್ಟು ಶೀಘ್ರ ಸಾರ್ವಜನಿಕರ ಬಳಕೆಗೆ ಅನುಕೂಲ ಕಲ್ಪಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಉಪವಿಭಾಗಾಧಿಕಾರಿ ಗಳಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿ ಮತನಾಡಿದ ಎಸಿ ವಿಜಯ್ ಕುಮಾರ್, ಸತ್ಯಪ್ಪ ಅವರು ಹಲವು ಬೇಡಿಕೆ ಈಡೇರಿಕೆಗಾಗಿ ಮನವಿ ಸಲ್ಲಿಸಿದ್ದು, ಮುಖ್ಯವಾಗಿ ಹೈಟೆಕ್ ಆಸ್ಪತ್ರೆ ಅಗತ್ಯ ಸಲಕರಣೆಗಳಿಗೆ ಹಣ ಬಿಡುಗಡೆಯಾಗಿದ್ದರೂ ಕಳೆದ 6 ತಿಂಗಳಿಂದ ಟೆಂಡರ್ ಕರೆಯದೆ ವಿಳಂಬವಾಗಿರುವುದು ವಿಷಾದನೀಯ. ಜಿಲ್ಲಾಧಿಕಾರಿಗಳು ಹುಣಸೂರಿಗೆ ಬರುತ್ತಿದ್ದು ಅವರ ಗಮನಕ್ಕೆ ತಂದು ತುರ್ತಾಗಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಉಪವಿಭಾಗಾಧಿಕಾರಿ ಕಚೇರಿಯ ಯದುಗಿರೀಶ್ ಉಪಸ್ಥಿತರಿದ್ದರು. ಈ ವೇಳೆ ನಿವೃತ್ತಿ ಸಿಟಿಆರ್‌ಐ ತಾಂತ್ರಿಕ ಅಧಿಕಾರಿ ಎಂ.ಶಂಭುಗೌಡ, ರೈತ ಮುಖಂಡರಾದ ಎಂ.ಕೃಷ್ಣೇಗೌಡ, ಬಸಪ್ಪ, ಪುರುಷೋತ್ತಮರಾವ್, ತಾಲೂಕು ಮಡಿವಾಳ ಸಂಘದ ಪ್ರಧಾನ ಕಾರ್ಯದರ್ಶಿ ನಾಗಪ್ಪಶೆಟ್ಟಿ, ಗೊಂದಳಿ ಸಮಾಜದ ಅಧ್ಯಕ್ಷ ಆನಂದ, ರಾಕೇಶ್‌ರಾವ್, ಗ್ರಾಪಂ ಸದಸ್ಯರಾದ ಕುಮಾರ್, ಶಿವಶೇಖರ, ಚಂದ್ರೇಗೌಡ, ಸ್ಟಾಲಿನ್, ದೇವರಾಜೇಗೌಡ, ಹೇಮಚಂದ್ರೇಗೌಡ, ಸೋಮಶೇಖರ, ಚಿಕ್ಕನಂಜಯ್ಯ, ಲಕ್ಷ್ಮಮ್ಮ, ರುದ್ರಮ್ಮ ಇತರರಿದ್ದರು.

200ಕ್ಕೂ ಹೆಚ್ಚು ನೀಲಗಿರಿ ಗಿಡಗಳ ಕಳವು



ಚುಂಚನಕಟ್ಟೆ, ಜೂ.9– ಜಮೀನಿನಲ್ಲಿ ಬೆಳೆದಿದ್ದ 200ಕ್ಕೂ ಹೆಚ್ಚು ನೀಲಗಿರಿ ಗಿಡಗಳನ್ನು ಕತ್ತರಿಸಿ ಕಳವು ಮಾಡಿರುವ ಘಟನೆ ಇಲ್ಲಿಗೆ ಸಮೀಪದ ಕುಪ್ಪೆ ಗ್ರಾಮದ ಬಳಿ ನಡೆದಿದೆ.

ದೊಡ್ಡಕೊಪ್ಪಲು ಗ್ರಾಮದ ಶಿವಪ್ಪ ಎಂಬುವರಿಗೆ ಸೇರಿದ ಜಮೀನಿನಲ್ಲಿ ಬೆಳೆದಿದ್ದ ನೀಲಗಿರಿ ಗಿಡಗಳನ್ನು ಕತ್ತರಿಸಿ ಕಳವು ಮಾಡಲಾಗಿದ್ದು, ಭಾನುವಾರ ರಾತ್ರಿ ಇಲ್ಲವೇ ಸೋಮವಾರ ಮುಂಜಾನೆ ಈ ಘಟನೆ ನಡೆದಿದೆ ಎಂದು ಶಂಕಿಸಲಾಗಿದೆ. ಶಿವಪ್ಪ ಅವರು ಬೆಳಗ್ಗೆ ಜಮೀನಿಗೆ ಹೋಗಿ ನೋಡಲಾಗಿ ಘಟನೆ ಬೆಳಕಿಗೆ ಬಂದಿದ್ದು, ಹೊಗೆ ಸೊಪ್ಪು ಹದ ಮಾಡುವವರು ಈ ಕೃತ್ಯ ಎಸಗಿರಬಹುದು ಎಂದು ಶಿವಪ್ಪ ಮಾಹಿತಿ ನೀಡಿದ್ದು, 10 ಸಾವಿರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ರಾತ್ರಿ ವೇಳೆ ಅರಣ್ಯ ಇಲಾಖೆಯವರು ಗಸ್ತು ತಿರುಗುವ ಮೂಲಕ ಮರ ಗಿಡಗಳ ರಕ್ಷಣೆಗೆ ಮುಂದಾಗಬೇಕೆಂದು ಚಿಕ್ಕಕೊಪ್ಪಲು ಡೈರಿ ನಿರ್ದೇಶಕ ಅಂಬರೀಷ್ ಒತ್ತಾಯಿಸಿದ್ದಾರೆ.

ಮೈಸೂರು ಮಿತ್ರ

ಮಂಗಳವಾರ 10 ಜೂನ್ 2025

ಅಸಂಘಟಿತ ಸಮುದಾಯದ ಎಷ್ಟೋ ನಾಯಕರು ದೇವರಾಜ ಅರಸು ಅವರಿಂದ ವಿಧಾನಸೌಧ ಪ್ರವೇಶಿಸುವಂತಾಯಿತು

• ವಿಧಾನ ಪರಿಷತ್ ಸದಸ್ಯ ಡಾ. ತಿಮ್ಮಯ್ಯ ಸ್ಮರಣೆ • ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು.ಜೂ.9(ಎಂಟಿವೈ)– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಮಾರ್ಗದರ್ಶನದಲ್ಲಿ ಅಸಂಘಟಿತ ಸಮುದಾಯಗಳ ಅನೇಕ ನಾಯಕರು ವಿಧಾನಸೌಧ ಪ್ರವೇಶಿಸಲು ಸಾಧ್ಯವಾಯಿತು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಯೋಜಿಸಿದ್ದ 'ಧ್ವನಿ ಕೊಟ್ಟ ಧಣಿ ದೇವರಾಜ ಅರಸರ 43ನೇ ವರ್ಷದ ಪುಣ್ಯ ಸ್ಮರಣೆ ಹಾಗೂ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಆಡಳಿತ ನಡೆಸಿದ ಡಿ.ದೇವರಾಜ ಅರಸರು, ಕಟ್ಟ ಕಡೆಯ ಸಮುದಾಯಕ್ಕೂ ನ್ಯಾಯ ಒದಗಿಸುವ ಪ್ರಯತ್ನ ಮಾಡಿದರು. ಜಾತಿ ತಾರತಮ್ಯ ಮಾಡದೇ ತಳಮಟ್ಟದ ಸಮುದಾಯದವರಿಗೂ ಸ್ಥಾನಮಾನ ಕಲ್ಪಿಸಿಕೊಟ್ಟರು. ಆದರೆ, ಅರಸು ಅವರ ಸ್ಮರಣೆಯನ್ನು ಜನಾಂಗದವರು ಮಾತ್ರ ಮಾಡುತ್ತಿರುವುದು ದುರಂತ ಎಂದು ವಿಷಾದಿಸಿದರು.

ರಾಜ್ಯದ ಮುಖ್ಯಮಂತ್ರಿಯಾಗಿ ದಕ್ಷ ಆಡಳಿತ ನಡೆಸಿದ ಅರಸರು ತಮ್ಮ ಆಡಳಿತದಲ್ಲಿ ಎಲ್ಲ ವರ್ಗದ ಜನರಿಗೆ ನ್ಯಾಯ ದೊರಕುವಂತೆ ಕಟ್ಟೆಚ್ಚರ ವಹಿಸಿದ್ದರು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ತತ್ವದಡಿ ಆಡಳಿತ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಸು ಹಾದಿಯಲ್ಲಿಯೇ ಆಡಳಿತ ನಡೆಸುತ್ತಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳು ಅದಕ್ಕೆ ನಿದರ್ಶನ ಎಂದರು.

ಮೈಸೂರಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣ ಕಾಮಗಾರಿ ಶೀಘ್ರ ಆರಂಭಿಸುವಂತೆ ಡಾ.ಎಂ.ಜಿ.ಆರ್. ಅರಸ್ ಒತ್ತಾಯಿಸಿದ್ದಾರೆ. ಈ ಬೇಡಿಕೆಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ. ಅರಸು ಸಮುದಾಯಕ್ಕೆ ದೊರೆಯಬೇಕಾದ ಸೌಲಭ್ಯಗಳನ್ನು ಕೊಡಿಸಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಅರಸು ಭವನ ನಿರ್ಮಾಣಕ್ಕೆ ಮನವಿ: ಇದೇ ವೇಳೆ ಕರ್ನಾಟಕ ಅರಸು ಮಹಾ ಮಂಡಲಿ ಟ್ರಸ್ಟ್ ಉಪಾಧ್ಯಕ್ಷ ಡಾ.ಎಂ.ಜಿ.ಆರ್.ಅರಸ್ ಮಾತನಾಡಿ, ಮೈಸೂರಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣ ಮತ್ತು ಅರಸು ನಿಗಮ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು. ಪ್ರತಿಮೆ ಕೆತ್ತನೆ ಪೂರ್ಣಗೊಂಡಿದ್ದು, ಅರಸು ಅವರ ಹುಟ್ಟು ಹಬ್ಬದ ದಿನವಾದ ಆ.20ರಂದೇ ಪ್ರತಿಮೆಯನ್ನು ಲೋಕಾರ್ಪಣೆ ಮಾಡಬೇಕು. ಅದೇ ದಿನ ಭವನ ನಿರ್ಮಾಣ ಕಾಮಗಾರಿಗೂ ಶಂಕುಸ್ಥಾಪನೆ ನೆರವೇರಿಸಬೇಕು. ರಾಮಕೃಷ್ಣನಗರದ ರಾಮಕೃಷ್ಣ ಪರಮಹಂಸ ವೃತ್ತದ ಎದುರು ಭವನ ನಿರ್ಮಾಣಕ್ಕೆ ಅರ್ಧ ಎಕರೆ ಜಾಗ ನೀಡಲಾಗಿದೆ. ಸರ್ಕಾರ 1.15 ಕೋಟಿ ಹಣವನ್ನು ಸಹ ಮಂಜೂರು ಮಾಡಿದ್ದರೂ ಯೋಜನೆ ಕಾರ್ಯಗತ ಗೊಂಡಿಲ್ಲ. ಅರಸು ಜನಾಂಗದವರು ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರು. 60 ಸಾವಿರ ಜನಸಂಖ್ಯೆ ಇದೆ. ಅರಸು ಜನಾಂಗಕ್ಕೂ ನಿಗಮ ರಚಿಸಬೇಕು ಎಂದು ಒತ್ತಾಯಿಸಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಬಿಇಎಲ್ ವಿಶ್ರಾಂತ ಜನರಲ್ ಮ್ಯಾನೇಜರ್ ಎಂ. ಮಲ್ಲರಾಜೇ ಅರಸ್, ಪತ್ರಿಕಾ ಛಾಯಾಗ್ರಾಹಕ ಎಸ್.ಉದಯ ಶಂಕರ್, ಚಾಮರಾಜನಗರ ಕೆಆರ್ ಐಡಿಎಲ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಚಿಕ್ಕಲಿಂಗಯ್ಯ, ದಿವ್ಯಾದೀಪ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಎಂ.ಆರ್. ಅನಂತ್‌ಕುಮಾರ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಟಿ.ತ್ಯಾಗರಾಜ್ ಅವರಿಗೆ 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ.ವೆಂಕಟೇಶ್ ವಹಿಸಿದ್ದರು. ಅನ್ವೇಷಣಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಅಮರ್‌ನಾಥ ರಾಜೇ ಅರಸ್ ಅರಸು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ.ಬಿ.ಆರ್. ನಟರಾಜ್ ಜೋಯಿಸ್ ಪುಸ್ತಕ ವಿತರಿಸಿದರು. ಕರ್ನಾಟಕ ಅರಸು ಮಹಾ ಮಂಡಲಿ ಟ್ರಸ್ಟ್ ಉಪಾಧ್ಯಕ್ಷ ಡಾ.ಎಂ.ಜಿ.ಆರ್. ಅರಸ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಲೇಜ್ ಕಲಾವಿದ (ಕ) + ನೀತಿ (ಕ)	2+2 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಮದ್ರಾಸ್ ಮ್ಯಾಟಿನಿ (ತ)	4 ಪ್ರದರ್ಶನಗಳು
ಸಂಗಂ	
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಲಿಡೋ	
ಅಪ್ಪು (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹಾಡಹಗಲೇ ಮನೆ ಬೀಗ ಮುರಿದು ಲಕ್ಷಾಂತರ ಮೌಲ್ಯದ ಚಿನ್ನಾಭರಣ, ನಗದು ಕಳವು

ಮೈಸೂರು, ಜೂ.9– ಹಾಡಹಗಲೇ ಮನೆಯ ಬೀಗ ಮುರಿದು ಲಕ್ಷಾಂತರ ಮೌಲ್ಯದ ಚಿನ್ನಾಭರಣ, ಬೆಳ್ಳಿ ಪದಾರ್ಥ ಹಾಗೂ ನಗದು ದೋಚಿರುವ ಘಟನೆ ಮೈಸೂರಿನ ವರುಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಶ್ರೀರಂಗಪಟ್ಟಣ ತಾಲೂಕು ಕೊಕ್ಕರೆ ಹುಂಡಿ ಗ್ರಾಮದ ಜವರೇಗೌಡ ಅವರು ಮೈಸೂರು ತಾಲೂಕು ವಾಜಮಂಗಲ ಗ್ರಾಮದ ಸರ್ವೆ ನಂ.378ರಲ್ಲಿ ನಿರ್ಮಿಸಿರುವ ಮನೆಗೆ ನುಗ್ಗಿರುವ ಖದೀಮರು, ಸುಮಾರು 18.48 ಲಕ್ಷ ಮೌಲ್ಯದ ಚಿನ್ನಾಭರಣ, 1.20 ಲಕ್ಷ ಮೌಲ್ಯದ ಬೆಳ್ಳಿ ಪದಾರ್ಥಗಳು, 1.50 ಲಕ್ಷ ನಗದು ಹಾಗೂ ಮೊಬೈಲ್ ದೋಚಿದ್ದಾರೆ. ಒಟ್ಟು 21.18 ಲಕ್ಷ ರೂ. ಮೌಲ್ಯದ ವಸ್ತುಗಳು ಕಳುವಾಗಿರುವುದಾಗಿ ಪೊಲೀಸರಿಗೆ ತಿಳಿಸಲಾಗಿದೆ.

ಜವರೇಗೌಡ ಹಾಗೂ ಜಯಮ್ಮ ದಂಪತಿಗೆ ಮೂವರು ಮಕ್ಕಳಿದ್ದು, ಎಲ್ಲರಿಗೂ ವಿವಾಹವಾಗಿದೆ. ಪುತ್ರಿ ಹಾಗೂ ಓರ್ವ ಪುತ್ರ ತಮ್ಮ ಸಂಸಾರದೊಂದಿಗೆ ಕೊಕ್ಕರೆಹುಂಡಿಯಲ್ಲಿ ವಾಸವಾಗಿದ್ದಾರೆ. 2 ವರ್ಷಗಳ ಹಿಂದೆ ವಾಜಮಂಗಲದಲ್ಲಿ ನಿರ್ಮಿಸಿದ ಮನೆಯಲ್ಲಿ ಜವರೇಗೌಡ ದಂಪತಿಯೊಂದಿಗೆ ಮತ್ತೋರ್ವ ಪುತ್ರ ಹಾಗೂ ಸೊಸೆ ನೆಲೆಸಿದ್ದಾರೆ.

ಕಳೆದ ಶುಕ್ರವಾರ ಜವರೇಗೌಡರು ಕಾರ್ಯ ನಿಮಿತ್ತ ಶ್ರೀರಂಗಪಟ್ಟಣಕ್ಕೆ ತೆರಳಿದ್ದರು. ಅಂದು ಕೊಕ್ಕರೆಹುಂಡಿಯ ಪ್ರಭಾಕರ್ ಮನೆಯವರು ಊಟಕ್ಕೆ ಆಹ್ವಾನಿಸಿದ್ದರಿಂದ ಪುತ್ರ ತನ್ನ ಪತ್ನಿಯನ್ನು ಗ್ರಾಮಕ್ಕೆ ಬಿಟ್ಟು, ತಾನು ತಿ.ನರಸೀಪುರಕ್ಕೆ ಕೆಲಸಕ್ಕೆ ತೆರಳಿದ್ದರು. ಮಧ್ಯಾಹ್ನ 12.30ರ ವೇಳೆಗೆ ಮನೆಗೆ ಬೀಗ ಹಾಕಿಕೊಂಡು ಜಯಮ್ಮ ಅವರೂ ಕೊಕ್ಕರೆಹುಂಡಿಗೆ ತೆರಳಿದ್ದರು. ಸಂಜೆ 6.30ರ ಸಮಯದಲ್ಲಿ ಜವರೇಗೌಡರ ಪುತ್ರಿ ಹಾಗೂ ಅಳಿಯ ವಾಜಮಂಗಲದ ಮನೆ ಬಳಿ ಬಂದಾಗ ಖದೀಮರು ಮುಂಬಾಗಿಲಿನ ಬೀಗ ಮುರಿದು ಕಳ್ಳತನ ಮಾಡಿರುವುದು ತಿಳಿದಿದೆ.

ಅದೇ ಸಮಯಕ್ಕೆ ಶ್ರೀರಂಗಪಟ್ಟಣದಿಂದ ವಾಪಸ್ಸಾದ ಜವರೇಗೌಡರು ಮನೆಯನ್ನು ಪರಿಶೀಲಿಸಿದಾಗ ವಾರ್ಡ್ರೋಬ್‌ನಲ್ಲಿದ್ದ ಚಿನ್ನಾಭರಣ, ಬೆಳ್ಳಿ ವಸ್ತುಗಳು, ನಗದು ಹಾಗೂ ಮೊಬೈಲ್ ಅನ್ನು ಖದೀಮರು ದೋಚಿರುವುದು ಗೊತ್ತಾಗಿದೆ. ಈ ಸಂಬಂಧ ವರುಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಶೋಧ ನಡೆಸಿದ್ದಾರೆ.

ಶ್ರೀಗಂಧದ ಮರ ಕಳವು

ಮೈಸೂರು, ಜೂ.9– ಮನೆಯ ಕಾಂಪೌಂಡ್ ಒಳಗಿದ್ದ ಶ್ರೀಗಂಧದ ಮರವನ್ನು ಕತ್ತರಿಸಿ, ಹೊತ್ತೊಯ್ದಿರುವ ಬಗ್ಗೆ ನಗರದ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿವಿ ಮೊಹಲ್ಲಾ, 16ನೇ ಕ್ರಾಸ್‌ನ ನವೀನ್ ಅವರ ಮನೆಯ ಕಾಂಪೌಂಡ್ ಒಳಗಿದ್ದ ಸುಮಾರು 10 ಅಡಿ ಗಂಧದ ಮರದ ಕಾಂಡವನ್ನು ಕಳ್ಳತನ ಮಾಡಲಾಗಿದೆ. ಮೂವರು ಖದೀಮರು ಮೊನ್ನೆ ತಡರಾತ್ರಿ 1 ಗಂಟೆ ಸಮಯದಲ್ಲಿ ಗಂಧದ ಮರ ಕಡಿದು, ಹೊತ್ತೊಯ್ಯುವ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ನವೀನ್ ಅವರ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸಿಸಿಟಿವಿ ಫುಟೇಜ್ ಪರಿಶೀಲಿಸಿ, ಖದೀಮರ ಸೆರೆಗೆ ಕ್ರಮ ಕೈಗೊಂಡಿದ್ದಾರೆ.

ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ತರಬೇತಿ

ಮೈಸೂರು, ಜೂ. 9– ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಯೋಜನೆಯಡಿಯಲ್ಲಿದ ಆರ್‌ಸಿಎಸ್‌ಎಸ್ ಮೈಸೂರು ಶಾಖೆಯು, ಎಲ್‌ಕೆಜಿ, ಯುಕೆಜಿ, ಪ್ರೀಸ್ಕೂಲ್ ಹಾಗೂ ಮಾಂಟೆಸರಿ ಶಾಲಾ ಶಿಕ್ಷಕರ ತರಬೇತಿಗೆ ಅರ್ಜಿಯನ್ನು ಆಹ್ವಾನಿಸಿದೆ. 2025– 26 ನೇ ಸಾಲಿಗೆ ಅನ್ವಯವಾಗುವ ಈ ತರಬೇತಿಯಲ್ಲಿ ನುರಿತ ಅಧ್ಯಾಪಕರಿಂದ ಮಕ್ಕಳ ಮಾನಸಿಕ ಬೆಳವಣಿಗೆಗಳು, ಆಹಾರ, ಪೋಷಕಾಂಶ, ಕ್ರಿಯಾಶೀಲತೆ, ಕೌಶಲ್ಯ ಕುರಿತಂತೆ ವಿಶೇಷ ತರಗತಿಗಳಿರುತ್ತವೆ.

ಎಸ್ ಎಸ್ ಎಲ್ ಸಿ, ಪಿಯುಸಿ ನಂತರದ ವಿದ್ಯಾರ್ಹತೆ ಹೊಂದಿರುವ 18 ರಿಂದ 55ರ ವಯೋಮಾನದ ಎಲ್ಲಾ ಆಸಕ್ತ ವಿದ್ಯಾರ್ಥಿಗಳು, ಗೃಹಿಣಿಯರು,ಉದ್ಯೋಗಾಕಾಂಕ್ಷಿಗಳು, ಇದರ ಫಲಾನುಭವಿಗಳಾಗಿರುತ್ತಾರೆ. ಆನ್‌ಲೈನ್ ತರಬೇತಿ ಬಯಸುವವರೂ ಸಹ ಅರ್ಜಿಯನ್ನು ಪಡೆಯಬಹುದಾಗಿದೆ. ಮಾಹಿತಿಗಾಗಿ 8310306882, 9964790442 ಸಂಪರ್ಕಿಸಬಹುದಾಗಿದೆ.

ಡಾ.ಹೆಚ್.ಎಸ್.ವೆಂಕಟೇಶಮೂರ್ತಿ ಅವರಿಗೆ ನುಡಿನಮನ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿಜಯ ವಿಠಲ ವಿದ್ಯಾ ಸಂಸ್ಥೆ ವತಿಯಿಂದ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಭಾವಜೀವಿ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ ಅವರಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಹಿರಿಯ ಕವಿ ಡಾ.ಜಯಪ್ಪ ಹೊನ್ನಾಳಿ ಮಾತನಾಡಿದರು.

ಮೈಸೂರು, ಜೂ.9(ಜಿಎ)–ಕನ್ನಡ ಇರುವವರೆಗೂ ಡಾ.ಹೆಚ್. ಎಸ್. ವೆಂಕಟೇಶಮೂರ್ತಿ(ಹೆಚ್‌ಎಸ್‌ವಿ) ಇರುತ್ತಾರೆ ಎಂದು ಹಿರಿಯ ಕವಿ ಡಾ.ಜಯಪ್ಪ ಹೊನ್ನಾಳಿ ತಿಳಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿಜಯ ವಿಠಲ ವಿದ್ಯಾ ಸಂಸ್ಥೆ ವತಿಯಿಂದ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಭಾವಜೀವಿ ಡಾ.ಹೆಚ್. ಎಸ್.ವೆಂಕಟೇಶಮೂರ್ತಿ ಅವರಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೆಚ್‌ಎಸ್‌ವಿ ಅವರು ಕನ್ನಡ ಸಾರಸ್ವತ ಲೋಕದ ತೇಜಸ್ವಿಯಾಗಿ ದೊಡ್ಡ ವರ್ಚಸ್ಸಿನಿಂದ ಬದುಕಿದರು. ನನ್ನನೂ ಸೇರಿದಂತೆ ಕವಿಗಳಿಗೆ ಅವರು ಕಾವ್ಯಾಚಾರ್ಯರಾಗಿದ್ದರು. ಈ ಹಿಂದೆ ಕವಿ ಕುಲತಿಲಕ ಎಂದು ಹೇಳುತ್ತಿದ್ದರು. ಅದನ್ನು ಹೆಚ್‌ಎಸ್‌ವಿ ಅವರಿಗೆ ಹೇಳಬಹುದು. ಹಾಗೇ ಅವರು ಕನ್ನಡಕ್ಕೆ ಚೈತನ್ಯ ತುಂಬಿ, ಅಕ್ಷರದ ಮೂಲಕ ಅಮೃತ ನೀಡಿದ್ದಾರೆ ಎಂದರು.

ಆತ್ಮೀಯರನ್ನು ಕಳೆದುಕೊಳ್ಳುವುದು ಅತ್ಯಂತ ಘೋರ ಸಂಗತಿ. ಆದರೆ, ಅವರ ನೆನಪಿನ ನೆರಳಿನಲ್ಲಿ ಸಾಗಬೇಕು. ಅನೇಕರು ಬದುಕಿದಾಗಲೇ ಬದುಕುವುದಿಲ್ಲ. ಆದರೆ ಕೆಲವರು ಸತ್ತ ನಂತರ ಹೆಚ್ಚು ಕಾಲ ಬದುಕುತ್ತಾರೆ ಆ ಸಾಲಿಗೆ ಹೆಚ್‌ಎಸ್‌ವಿ ನಿಲ್ಲುತ್ತಾರೆ. ನಮ್ಮ ಅಂತರಂಗದಲ್ಲಿ ಶಾಶ್ವತವಾಗಿ ನೆಲೆಸಿರುತ್ತಾರೆ ಎಂದು ಸ್ಮರಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಈ ರೀತಿ ಕಾರ್ಯಕ್ರಮಗಳನ್ನು ಪರಿಷತ್ತಿನ ಭವನದಲ್ಲಿ ಆಯೋಜಿಸುವುದು ಸಹಜವಾಗಿತ್ತು. ಆದರೆ, ಶಾಲೆಯಲ್ಲಿ ಆಯೋಜಿಸಿದ್ದಾಗ ಅ ಅನೇಕ ಸಂದೇಶಗಳು ಮಕ್ಕಳಿಗೆ ತಲುಪಲಿದೆ ಎಂಬ ಉದ್ದೇಶದಿಂದ ಆಯೋಜಿಸಲಾಗಿದೆ ಎಂದರು.


ಡಾ.ಹೆಚ್.ಎಸ್.ವೆಂಕಟೇಶಮೂರ್ತಿ ಅವರು ಕನ್ನಡ ಭಾವಗೀತೆಗಳ ಲೋಕವನ್ನು ಶ್ರೀಮಂತಗೊಳಿಸಿದರು. 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ' ಸಾಹಿತ್ಯದ ಮೂಲಕ ಜೀವನದ ಸಂದೇಶ ನೀಡಿದ್ದಾರೆ. ಅವರು ಕವಿ ಮಾತ್ರವಾಗದೇ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದರು ಎಂದರು.

ವಿದ್ಯಾರ್ಥಿಗಳು ಹೆಚ್‌ಎಸ್‌ವಿ ಅವರ ಗೀತೆ ಹಾಡುವ ಮೂಲಕ ಸ್ಮರಿಸಿದರು. ಕಾರ್ಯಕ್ರಮದಲ್ಲಿ ವಿಜಯ ವಿಠಲ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಎ.ವಿಶ್ವನಾಥ್, ಕವಯತ್ರಿ ಡಾ.ಲಾವಣ್ಯ ಪ್ರಭಾ, ಕಸಾಪ ಕಾರ್ಯದರ್ಶಿ ಮ.ನ.ಲತಾ ಮೋಹನ ಉಪಸ್ಥಿತರಿದ್ದರು.

ಡಿವೈಡರ್ ಲೈಟ್‌ಕಂಬಕ್ಕೆ ಬೈಕ್ ಡಿಕ್ಕಿಯಾಗಿ ಸವಾರ ಸಾವು



ಬೈಕ್ ಸವಾರ ಮೃತಪಟ್ಟ ಸ್ಥಳದಲ್ಲಿ ಪೊಲೀಸರು ಪರಿಶೀಲನೆ ನಡೆಸುತ್ತಿರುವುದು.



ಮೈಸೂರು, ಜೂ.9 (ಎಸ್‌ಪಿಎನ್)– ವೇಗವಾಗಿ ಬರುತ್ತಿದ್ದ ಬೈಕ್ ಸವಾರನೊಬ್ಬ ತನ್ನ ನಿಯಂತ್ರಣ ತಪ್ಪಿ ಡಿವೈಡರ್ ನಲ್ಲಿದ್ದ ಲೈಟ್ ಕಂಬಕ್ಕೆ ಡಿಕ್ಕಿ ಹೊಡೆದು ಸಾವನ್ನಪ್ಪಿರುವ ಘಟನೆ ಮೈಸೂರು ದಟ್ಟಗಳ್ಳಿಯ ಸಾ.ರಾ ಕಲ್ಯಾಣ ಮಂಟಪದ ಮುಂಭಾಗ ಸೋಮವಾರ ಮಧ್ಯಾಹ್ನ ನಡೆದಿದೆ. ಮೈಸೂರು ರಾಮಕೃಷ್ಣನಗರದ ನಿವಾಸಿ ಪೂಜಿತ್(27) ಮೃತ ಬೈಕ್ ಸವಾರ. ಈತ ದಟ್ಟಗಳ್ಳಿ ಆದರ್ಶ ಸರ್ಕಲ್ ಕಡೆಯಿಂದ ಕನಕದಾಸ ನಗರ ವೃತ್ತದ ಕಡೆಗೆ ಸುಝುಕಿ ವಿ.ಸ್ಟ್ರೋಮ್(ಕೆಎ 09. ಜೆಯುಚ್ 2513) ಬೈಕ್‌ನಲ್ಲಿ ವೇಗವಾಗಿ ಬಂದು ಸಾ.ರಾ.ಕಲ್ಯಾಣ ಮಂಟಪದ ಮುಂಭಾಗದ ತಿರುವಿನಲ್ಲಿ ಬೈಕ್ ನಿಯಂತ್ರಣ ಮಾಡಲಾಗದೆ, ರಸ್ತೆ ಮಧ್ಯದ ಡಿವೈಡರ್‌ನಲ್ಲಿದ್ದ ಲೈಟ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದಾನೆ. ಈ ರಭಸಕ್ಕೆ ಬೈಕ್ ಸವಾರನ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು ಪ್ರಜ್ಞೆ ಕಳೆದು ಕೊಂಡಿದ್ದಾನೆ. ಈ ವೇಳೆ ಅಕ್ಕ–ಪಕ್ಕದಲ್ಲಿದ್ದ ಸಾರ್ವಜನಿಕರು ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ವಿಷಯ ತಿಳಿದು ಕುವೆಂಪುನಗರ ಸಂಚಾರ ಠಾಣೆಯ ಎಎಸ್‌ಐ ಕೆ.ಆರ್.ಶಾಂತಪ್ಪ, ಪೇದೆ ಚನ್ನಮಲ್ಲಪ್ಪ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ.

ದೃಶ್ಯ ಮಾಧ್ಯಮದ ನಾಲ್ವರು ಕ್ಯಾಮರಾಮನ್‌ಗಳಿಗೆ ಶ್ರದ್ಧಾಂಜಲಿ



ಕಳೆದ ಎರಡ್ಮೂರು ತಿಂಗಳಲ್ಲಿ ನಿಧನರಾದ ಮೈಸೂರಿನ ವಿವಿಧ ದೃಶ್ಯ ಮಾಧ್ಯಮಗಳ ನಾಲ್ವರು ಕ್ಯಾಮರಾಮನ್‌ಗಳಿಗೆ ಮೈಸೂರು ಪತ್ರಕರ್ತರ ಸ್ನೇಹ ಕೂಟದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಜೂ.9(ಎಂಕೆ)– ಕಳೆದ ಎರಡ್ಮೂರು ತಿಂಗಳಲ್ಲಿ ನಿಧನರಾದ ಮೈಸೂರಿನ ವಿವಿಧ ದೃಶ್ಯ ಮಾಧ್ಯಮಗಳ ನಾಲ್ವರು ಕ್ಯಾಮರಾಮನ್‌ಗಳಿಗೆ ಮೈಸೂರು ಪತ್ರಕರ್ತರ ಸ್ನೇಹ ಕೂಟದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕ್ಯಾಮರಾಮನ್‌ಗಳಾದ ಹರ್ಷ, ಮಧುಸೂದನ್, ಸಂತೋಷ್ ಹಾಗೂ ಹೇಮಂತ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಕಳೆದ ಹಲವು ವರ್ಷಗಳಿಂದ ನಮ್ಮ ನಡುವೆ ಇದ್ದ ನಾಲ್ವರು ಕ್ಯಾಮರಾಮ್ಯಾನ್‌ಗಳನ್ನು ಕಳೆದುಕೊಂಡಿರುವುದು ನೋವಿನ ಸಂಗತಿ. ನಮ್ಮನ್ನು ಅಗಲಿರುವ ನಾಲ್ವರೂ ಕೂಡ 40 ವರ್ಷ ಆಸುಪಾಸಿನ ವಯೋಮಾನದವರಾಗಿದ್ದು, ಕರ್ತವ್ಯದ ಭರದಲ್ಲಿ ತಮ್ಮ ಆರೋಗ್ಯವನ್ನು ಕಡೆಗಣಿಸಿದ್ದರ ಪರಿಣಾಮ ಇವತ್ತು ಅವರನ್ನು ಕುಟುಂಬ ಕಳೆದುಕೊಳ್ಳುವಂತಾಗಿದೆ ಎಂದು ವಿಷಾಧಿಸಿದರು.

ಹಾಗಾಗಿ ಪತ್ರಕರ್ತರು ಆರೋಗ್ಯದ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ಈ ನಿಟ್ಟಿನಲ್ಲಿ ಜೂ.25 ರಂದು ಜಯದೇವ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗುವುದು. ಪತ್ರಕರ್ತರು ಹಾಗೂ ಅವರ ಕುಟುಂಬಸ್ಥರು ಶಿಬಿರದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಹಿರಿಯ ಪತ್ರಕರ್ತರಾದ ಸತ್ಯನಾರಾಯಣ, ಸತೀಶ್, ರಾಮ್, ಕೆ.ಪಿ.ನಾಗರಾಜ್, ಸಿ.ಎಂ.ಕಿರಣ್‌ಕುಮಾರ್, ಜಯಂತ್, ಸುಧೀಂದ್ರ, ಕೃಷ್ಣ, ವಾಟಾಳ್ ಆನಂದ್, ಎಸ್.ಆರ್.ಮಧುಸೂದನ್, ರಂಗಸ್ವಾಮಿ ಮಾದಾಪುರ, ಮಹದೇವಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಾಸಿಕ ಸಭೆ

ಮೈಸೂರು, ಜೂ. 9– ರೈಲ್ವೆ ಪಿಂಚಣಿದಾರರ ಸಂಘದ ಮಾಸಿಕ ಸಭೆ ಜೂ. 14 ರಂದು ಬೆಳಗ್ಗೆ 11.30ಕ್ಕೆ ಕಛೇರಿಯಲ್ಲಿ ನಡೆಯಲಿದೆ. ಸಂಘದ ಪ್ರಧಾನ ಕಾರ್ಯದರ್ಶಿ ಸ್ವಾಮಿನಾಥನ್ ಹಾಗೂ ಪಾರ್ಥಸಾರಥಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ.

ಹಿಂದೂ ವಿರೋಧಿಯಾಗಿದ್ದ ಸಿದ್ದರಾಮಯ್ಯ ಈಗ ಪೊಲೀಸ್ ಇಲಾಖೆ ವಿರೋಧಿಯೂ ಎಂಬುದು ಸಾಬೀತು

ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪ



ಮೈಸೂರು, ಜೂ.9(ಬಿಎಲ್‌ಯು)– ಇಷ್ಟು ದಿನ ಹಿಂದೂ ವಿರೋಧಿ ಆಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗ ಪೊಲೀಸ್ ಇಲಾಖೆಯ ವಿರೋಧಿ ಎಂಬುದು ಸಾಬೀತಾಗಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದರು.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಹಿಂದ ವರ್ಗಗಳ ಉದ್ಧಾರಕ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯ ಅವರು ವಾಲ್ಮೀಕಿ ಸಮುದಾಯದ ನಿಷ್ಠಾವಂತ ಪೊಲೀಸ್ ಅಧಿಕಾರಿ ದಯಾನಂದ್ ಅವರನ್ನು ಯಾಕೆ ಟಾರ್ಗೆಟ್ ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ಬೆಂಗಳೂರು ಪೊಲೀಸ್ ಆಯುಕ್ತರಾಗಿ ನಿಷ್ಠೆ ಹಾಗೂ ಸಮರ್ಥವಾಗಿ ಕೆಲಸ ಮಾಡಿದ ದಯಾನಂದ್ ಅವರ ಮೇಲೇಕೆ ನಿಮಗೆ ಇಷ್ಟು ಕೋಪ? ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಪೊಲೀಸ್ ಇಲಾಖೆ ಅನ್ ಫಿಟ್ ಅಲ್ಲ, ಕಾಂಗ್ರೆಸ್ ಸರ್ಕಾರವೇ ಅನ್ ಫಿಟ್ ಎಂದು ಜರಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್ ಅವರನ್ನು ಪದಚ್ಯುತಗೊಳಿಸಿದ ರಹಸ್ಯವನ್ನು ಬಿಚ್ಚಿಡಿ ಎಂದು ಆಗ್ರಹಿಸಿದರು. ಆರ್ ಸಿಬಿ ತಂಡದಿಂದ ನಿಮ್ಮ ಮೊಮ್ಮಗನಿಗೆ ಫೋಟೋಗ್ರಾಫ್ ಹಾಗೂ ಆಟೋಗ್ರಾಫ್ ಕೊಡಿಸುವ ದಾವಂತದಲ್ಲಿರುವ ಕಾರಣ ಕಾಲ್ತುಳಿತ ವಿಚಾರ ನಿಮಗೆ ಗೊತ್ತಾಗಲಿಲ್ಲವೆ ಎಂದು ಗೇಲಿ ಮಾಡಿದರು.

ಆರ್‌ಸಿಬಿ ವಿಜಯೋತ್ಸವದ ಸಂಭ್ರಮಾಚರಣೆ ಮಾಡಲು ಡಿಪಿಎಆರ್ ಕಾರ್ಯದರ್ಶಿ ಸತ್ಯವತಿ ಅವರು ಒತ್ತಡ ಹೇರಿದ ಹಿನ್ನೆಲೆ ಏನು? ಇಷ್ಟೆಲ್ಲಾ ಅನಾಹುತಕ್ಕೆ ಕಾರಣರಾದ ಅವರನ್ನು ಇನ್ನೂ ಅಮಾನತು ಮಾಡಿಲ್ಲ, ಅವರನ್ನು ರಕ್ಷಣೆ ಮಾಡುತ್ತಿರುವ ಕಾರಣವೇನು? ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರಿಗೆ ಸರ್ಕಾರದ ಮೇಲೆ ಲಂಗು ಲಗಾಲು ಇಲ್ಲದ ಕಾರಣ ಇಂತಹ ದುರ್ಘಟನೆಗಳು ನಡೆಯುತ್ತಿದೆ. ನಿಮಗೆ ಆಡಳಿತ ನಡೆಸಲು ಸಾಧ್ಯವಾಗುತ್ತಿಲ್ಲ ಎನ್ನುವುದಾದರೆ ಈ ರಾಜ್ಯವನ್ನು ಅಧಿಕಾರಿಗಳಿಗೆ ಬರೆದುಕೊಡಿ ಎಂದು ಒತ್ತಾಯಿಸಿದರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರಕ್ಕೆ ಶೂನ್ಯ ಅಂಕ ನೀಡಿದ ಸಿದ್ದರಾಮಯ್ಯ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದ ಪ್ರತಾಪ್ ಸಿಂಹ, ಮೋದಿ ಅವರಿಗೆ ಅಂಕ ನೀಡುವ ಅರ್ಹತೆ ಸಿದ್ದರಾಮಯ್ಯ ಅವರಿಗೆ ಇಲ್ಲ ಎಂದು ತಿರುಗೇಟು ನೀಡಿದರು.

ಕೊಲೆಗಳ ಸರಣಿಗೆ ದಾರಿ ಮಾಡಿಕೊಟ್ಟಿರುವ ಸಿದ್ದರಾಮಯ್ಯ ಅವರು ಯೋಜನೆ ಹೆಸರಿನಲ್ಲಿ ರಾಜ್ಯದ ಜನರಿಗೆ ಟೋಪಿ ಹಾಕುತ್ತಿದ್ದಾರೆ. ಜನರಿಗೆ ಟೋಪಿ ಹಾಕುವುದೇ ಇವರ ಮೂಲ ಉದ್ದೇಶವಾದ ಕಾರಣ ಅವರು ಮೋದಿ ಸರ್ಕಾರದ ಸಾಧನೆ ಅಳೆಯುವ ಅರ್ಹತೆ ಹೊಂದಿಲ್ಲ ಎಂದರು.

ನರೇಂದ್ರ ಮೋದಿ ಅವರು ಮೈಸೂರು ನಗರಕ್ಕೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ರಾಜ್ಯದ ಮುಖ್ಯಮಂತ್ರಿಯಾಗಿ ನಿಮ್ಮ ತವರು ಜಿಲ್ಲೆಗೆ ಏನು ಕೊಡುಗೆ ನೀಡಿದ್ದೀರಾ? ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಬೀಗರ ಊಟ, ಮದುವೆ, ಮುಂಜಿಗೆ ಮೈಸೂರಿಗೆ ಬರುವುದು ಮಾಧ್ಯಮದವರ ಮುಂದೆ ಉಡಾಫೆ ಹೇಳಿಕೆ ನೀಡುವುದಷ್ಟೆ ಸಿದ್ದರಾಮಯ್ಯ ಅವರ ಸಾಧನೆಯಾಗಿದೆ ಎಂದು ವಾಗ್ದಾಳಿ ನಡೆಸಿದರು.

ಮುಂಜಿ, ಬೀಗರೂಟವೇ ಸಿದ್ದರಾಮಯ್ಯಗೆ ಈಗ ಹೆಚ್ಚಾಯ್ತು!

ಮದುವೆ, ಮುಂಜಿ ಎಂದು ಓಡಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಲ್ತುಳಿತದಿಂದ ಸಾವನ್ನಪ್ಪಿದ ಕುಟುಂಬದವರನ್ನು ಭೇಟಿ ಮಾಡಿ ಕನಿಷ್ಟ ಸಾಂತ್ವನ ಹೇಳಿಲ್ಲ ಎಂದು ಪ್ರತಾಪ್ ಸಿಂಹ ಟೀಕಿಸಿದರು.

11 ಜನರ ಸಾವಿಗೆ ಕಣ್ಣೀರು ಹಾಕಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಬೇಕಾದ ಸಿದ್ದರಾಮಯ್ಯ ಅವರಿಗೆ ಮದುವೆ ಊಟ, ಬೀಗರ ಔತಣವೇ ಹೆಚ್ಚಾಯಿತೇ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರ ಈ ವರ್ತನೆ ಸಂವೇದನ ರಹಿತ ವ್ಯಕ್ತಿತ್ವವನ್ನು ತೋರಿಸುತ್ತದೆ ಎಂದರು. ಕಾಲ್ತುಳಿತ ವಿಚಾರ ಎರಡು ಗಂಟೆ ತಡವಾಗಿ ನನಗೆ ತಿಳಿಯಿತು ಎನ್ನುವುದಾದರೆ ಮುಖ್ಯಮಂತ್ರಿಯಾಗಿ ಈ ರಾಜ್ಯವನ್ನು ಹೇಗೆ ಸಂಭಾಳಿಸುತ್ತೀರಾ ಎಂದು ಪ್ರಶ್ನಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ರೋಟರಿ ಪಶ್ಚಿಮ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು, ಜೂ.9(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಶಾಲೆಯಲ್ಲಿ ರೋಟರಿ ವೆಸ್ಟ್ ಅಸೋಸಿಯೇಷನ್ ಸಹಯೋಗ ದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು ತೇರ್ಗಡೆ ಯಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಪ್ರೋತ್ಸಾಹಿಸಲಾಯಿತು.

ಇದೇ ವೇಳೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಿಕ್ಷಣ ತಜ್ಞ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಅವರನ್ನು ಸನ್ಮಾನಿಸ ಲಾಯಿತು. ಬಳಿಕ ಮಾತನಾ ಡಿದ ಅವರು, ವಿದ್ಯಾರ್ಥಿಗಳು ಸಾಧಕರಾಗ ಬೇಕಾದರೆ, ಕಠಿಣ ಪರಿಶ್ರಮ ಪಡಬೇಕು. ನಿರಂತರ ಕಲಿಕೆ, ಜ್ಞಾನ ಸಂಪಾದನೆ ಕಡೆಗೆ ಗಮನ ಹರಿಸ ಬೇಕು ಎಂದು ಕಿವಿಮಾತು ಹೇಳಿದರು.

ರೋಟರಿ ಮೈಸೂರು ಪಶ್ಚಿಮ ಮಾಜಿ ಅಧ್ಯಕ್ಷ ಡಾ.ಬಿ.ಚಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವೆಸ್ಟ್‌ನ ಇನ್ನರ್ ವ್ಹೀಲ್ ಕ್ಲಬ್‌ನ ಅಧ್ಯಕ್ಷೆ ಶಶಿಕಲಾ ಸುರೇಶ್, ಭವಾನಿ ಚಂದ್ರ, ಖಜಾಂಚಿ ಸುನಿತಾ ಭಾಸ್ಕರ್, ಆಡಳಿತಾ ಧಿಕಾರಿ ಶಂಕರ್, ಕೆ.ಎಸ್.ಪೂರ್ಣಿಮಾ, ಮಂಜುನಾಥ್ ಮತ್ತಿತರರಿದ್ದರು.


ಸತೀಶ್ ಜಾರಕಿಹೊಳಿಗೆ ಸ್ವಾಗತ...



ಕಾರ್ಯ ನಿಮಿತ್ತ ಮೈಸೂರಿಗೆ ಆಗಮಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಮುಖಂಡ ಎಸ್.ಸಿ.ಬಸವರಾಜು, ಮಾಜಿ ಕಾರ್ಪೊರೇಟರ್ ಲೋಕೇಶ್ ಪಿಯಾ, ಕೃಷ್ಣ, ಸಿದ್ದನಾಯಕ, ನಾಗೇಂದ್ರ ಯಡಕೊಳ, ಶೇಖರ್ ನಾಯಕ್, ರಂಗಸ್ವಾಮಿ, ಕಾಳಿ ಸ್ಮರಣ್, ಗಜ, ಶೇಷಗಿರಿ, ಶ್ಯಾಮ್ ಆತ್ಮೀಯವಾಗಿ ಸ್ವಾಗತಿಸಿದರು.

‘ಪಾಕ್’ ಪರ ಬೇಹುಗಾರಿಕೆ: ಯುಟ್ಯೂಬರ್ ಜ್ಯೋತಿ ಮಲ್ಹೋತ್ರಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ಹಿಸಾರ್: ಪಾಕಿಸ್ತಾನ ಪರ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಲ್ಲಿ ಬಂಧಿಸಲಾಗಿರುವ ಹರಿಯಾಣ ಮೂಲದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಸ್ಥಳೀಯ ನ್ಯಾಯಾಲಯ ಸೋಮವಾರ ವಿಸ್ತರಿಸಿದ್ದು, ಪ್ರಕರಣದ ವಿಚಾರಣೆಯನ್ನು ಜೂನ್ 23ಕ್ಕೆ ನಿಗದಿಪಡಿಸಿದೆ.



33 ವರ್ಷದ ಯೂಟ್ಯೂಬರ್ ಸೋಮವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಹಿಸಾರ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಪ್ರಥಮ ದರ್ಜೆ) ಸುನಿಲ್ ಕುಮಾರ್ ಅವರ ಮುಂದೆ ಹಾಜರಾಗಿದ್ದರು. ನ್ಯಾಯಾಲಯ ಇದೀಗ ಅವರ ನ್ಯಾಯಾಂಗ ಬಂಧನವನ್ನು ಎರಡು ವಾರಗಳವರೆಗೆ ವಿಸ್ತರಿಸಿದೆ.

ನ್ಯಾಯಾಲಯವು ಅವರ ನ್ಯಾಯಾಂಗ ಬಂಧನವನ್ನು ವಿಸ್ತರಿಸಿದೆ ಮತ್ತು ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಜೂನ್ 23ಕ್ಕೆ ನಿಗದಿಪಡಿಸಿದೆ ಎಂದು ಜ್ಯೋತಿ ಮಲ್ಹೋತ್ರಾ ಅವರ ವಕೀಲ ಕುಮಾರ್ ಮುಖೇಶ್ ಹೇಳಿದರು. ಹಿಸಾರ್ ಪೊಲೀಸರು ಮೇ 16ರಂದು ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ಮಲ್ಹೋತ್ರಾ ಅವರನ್ನು ಬಂಧಿಸಿದರು.

ನಂತರ ನ್ಯಾಯಾಲಯವು ಆಕೆಯನ್ನು ಐದು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಿತು. ಕಸ್ಟಡಿ ಅವಧಿ ಪೂರ್ಣಗೊಂಡ ನಂತರ, ಹೆಚ್ಚಿನ ವಿಚಾರಣೆಗಾಗಿ ಪೊಲೀಸರ ಮನವಿಯ ಮೇರೆಗೆ ನ್ಯಾಯಾಲಯವು ಅದನ್ನು ನಾಲ್ಕು ದಿನಗಳವರೆಗೆ ವಿಸ್ತರಿಸಿತು. ಮೇ 26 ರಂದು ನ್ಯಾಯಾಲಯವು ಆಕೆಯನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್‌ನ ಉದ್ಯೋಗಿಯಾಗಿದ್ದ ಎಹ್ಸಾನ್–ಉರ್–ರಹೀಮ್ ಅಲಿಯಾಸ್ ಡ್ಯಾನಿಶ್ ಸೇರಿದಂತೆ ಪಾಕ್ ಪ್ರಮುಖ ಏಜೆಂಟರ್ ಜೊತೆಗೆ ಮಲ್ಹೋತ್ರಾ ನಿರಂತರ ಸಂಪರ್ಕದಲ್ಲಿದ್ದರು. ಕಳೆದ ವರ್ಷ ನವದೆಹಲಿಯ ಪಾಕಿಸ್ತಾನ ಹೈಕಮಿಷನ್‌ನಲ್ಲಿ ನಡೆದ ವಿಶೇಷ ಇಫ್ತಾರ್ ಔತಣಕೂಟದಲ್ಲಿ ಡ್ಯಾನಿಶ್ ಜೊತೆ ಭಾಗವಹಿಸಿದ್ದರು ಎಂದು ವರದಿಯಾಗಿದೆ.

ಸುಪ್ರೀಂನಲ್ಲೂ ಕಮಲ್‌ಗೆ ಮುಖಭಂಗ

ಥಗ್ ಲೈಫ್ ಸಿನಿಮಾ ರದ್ದು, ತುರ್ತು ವಿಚಾರಣೆಗೆ ನಕಾರ

ನವದೆಹಲಿ, ಜೂ.9– ಕನ್ನಡ ಭಾಷೆ ವಿರೋಧಿ ಹೇಳಿಕೆ ಹಿನ್ನೆಲೆಯಲ್ಲಿ ತಮಿಳು ನಟ ಕಮಲ್ ಹಾಸನ್ ನಟನೆಯ 'ಥಗ್ ಲೈಫ್' ಚಿತ್ರವು ಕರ್ನಾಟಕದಲ್ಲಿ ಬಿಡುಗಡೆ ಯಾಗಲಿಲ್ಲ. ಈ ಕಾರಣದಿಂದಾಗಿ ಚಿತ್ರಮಂದಿರಗಳಿಗೆ ಭದ್ರತೆ ಒದಗಿಸುವಂತೆ ಸುಪ್ರೀಂಕೋರ್ಟ್‌ನಲ್ಲಿ ಕಮಲ್ ಪರವಾಗಿ ಅರ್ಜಿ ಸಲ್ಲಿಸಲಾಯಿತು. ಅದನ್ನು ಸುಪ್ರೀಂಕೋರ್ಟ್ ತಕ್ಷಣ ವಿಚಾರಣೆಗೆ ತೆಗೆದುಕೊಳ್ಳಲು ನಿರಾಕರಿಸಿದೆ. ವಿಚಾರಣೆಯ ಸಮಯದಲ್ಲಿ ನ್ಯಾಯಮೂರ್ತಿ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ನ್ಯಾಯಮೂರ್ತಿ ಮನಮೋಹನ್ ಅವರ ಪೀಠವು ಕರ್ನಾಟಕ ಥಿಯೇಟರ್ ಅಸೋಸಿಯೇಷನ್ ಮತ್ತು ಕರ್ನಾಟಕ ಹೈಕೋರ್ಟ್ ಅನ್ನು ಸಂಪರ್ಕಿಸುವಂತೆ ಹೇಳಿತು. ಇದರ ಹೊರತಾಗಿ ತಕ್ಷಣ ವಿಚಾರಣೆಯನ್ನು ನ್ಯಾಯಮೂರ್ತಿ ಪ್ರಶಾಂತ್ ಮಿಶ್ರಾ ನಿರಾಕರಿಸಿದರು. ನಟ ಕಮಲ್ ಹಾಸನ್ ತಮ್ಮ 'ಥಗ್ ಲೈಫ್' ಚಿತ್ರದ ಪ್ರಚಾರದ ಸಮಯದಲ್ಲಿ ಕನ್ನಡ ಭಾಷೆಯ ಬಗ್ಗೆ ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ್ದರು. ನಂತರ ಅವರು ಸಾಕಷ್ಟು ವಿರೋಧವನ್ನು ಎದುರಿಸಿದರು. ಅವರ ಚಿತ್ರವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡದಂತೆ ಪ್ರತಿಭಟನೆ ನಡೆಸಲಾಯಿತು. ಈ ಹಿನ್ನೆಲೆಯಲ್ಲಿ ಕಮಲ್ ಹಾಸನ್ ಅವರ 'ಥಗ್ ಲೈಫ್' ಚಿತ್ರ ಜೂನ್ 5ರಂದು ಕರ್ನಾಟಕ ಹೊರತುಪಡಿಸಿ ಎಲ್ಲೆಡೆ ಬಿಡುಗಡೆಯಾಯಿತು.



ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು, ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದ, ಕುರುಬರ ಬೀದಿ, ಮನೆ ನಂಬರ್ 173 ರ ನಿವಾಸಿಯಾದ, ಶ್ರೀಮತಿ.ಚಿಕ್ಕಹೆಣ್ಣಮ್ಮ ಕೋಂ. ಶ್ರೀ.ನಂಜಯ್ಯ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್


ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದ ಸರ್ವೆ ನಂಬರ್: 16/3 ರಲ್ಲಿನ ಮೂವತ್ತು ಗುಂಟೆ (0.30.00.00) ವಿಸ್ತೀರ್ಣದ ಖುಷ್ಕಿ ಜಮೀನು, ಸದರಿ ಜಮೀನಿಗೆ ಚಕ್ಕುಬಂಧಿ:–

ಪೂರ್ವಕ್ಕೆ: ಸರ್ವೆ ನಂಬರ್: 16/4 ; ಪಶ್ಚಿಮಕ್ಕೆ: ಸರ್ವೆ ನಂಬರ್: 15 ; ಉತ್ತರಕ್ಕೆ: ಸರ್ವೆ ನಂಬರ್: 16/5 ; ದಕ್ಷಿಣಕ್ಕೆ: ಸರ್ವೆ ನಂಬರ್: 16/2.

Sd/- M.N. Prakash Kalappa, KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. E-mail: mnprakashkalappa@gmail.com

ಮೈಸೂರು, ದಿನಾಂಕ: 9–6–2025

12ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 12 ವರ್ಷವಾದರೂ ನಿಮ್ಮ ನೆನಪು ಸದಾ ಹಸಿರಾಗಿದೆ.

ಗೋವಿಂದ ತಿಮ್ಮ

ದುಃಖತಪ್ತರು: ಕಮಲಮ್ಮ (ಹೆಂಡತಿ), ಮೊಮ್ಮಕ್ಕಳು: ಯಶವಂತ, ಗೌತಮಿ, ಛಾಯ, ಅನ್ವಿತಾ, ಮೋನಿತ್

ಭಾವಪೂರ್ಣ ಶ್ರದ್ಧಾಂಜಲಿ



ಕೆ.ಮರಿಚಾಮಯ್ಯ

ನಿವೃತ್ತ ಕೆ.ಎ.ಎಸ್.ಅಧಿಕಾರಿ,
ಕಾನೂನು ಮತ್ತು ಮಾಪನ ಶಾಸ್ತ್ರ ಇಲಾಖೆ, ಅಶೋಕಪುರಂ, ಮೈಸೂರು

ಇವರು ದಿನಾಂಕ: 09.06.2025 ಸೋಮವಾರ ದೈವಾದೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.06.2025 ಮಂಗಳವಾರ ಮಧ್ಯಾಹ್ನ 12.30ಕ್ಕೆ ಅಶೋಕಪುರಂನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗ

ಮೊದಲನೇ ವರ್ಷದ ಪುಣ್ಯಸ್ಮರಣೆ



ಜನನ: 18.07.1959

ಮರಣ: 10.06.2024

ಕೆ.ಕುಮಾರ್

ಸೆಂಥಿಲ್ ಕುಮಾರ್ ಟೆಕ್ಸ್‌ಟೈಲ್ಸ್

ಎಲ್ಲಾ ಕುಟುಂಬವರ್ಗದವರು ಹಾಗೂ ಸಿಬ್ಬಂದಿವರ್ಗದವರು

ಮೈಸೂರು, ತುಮಕೂರು, ಧರ್ಮಪುರಿ

ಮೊದಲ ವರ್ಷದ ಪುಣ್ಯಸ್ಮರಣೆ



ಹೆಚ್.ಎಸ್.ಶಿವರಾಜು (8999)

ಹೆಚ್. ಎಸ್. ಟ್ರಾನ್ ಪೋರ್ಟ್ ಮಾಲೀಕರು.

ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷ ಕಳೆದರೂ ಸಹ ಸದಾ ನಿಮ್ಮ ನೆನಪಿನಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ.

ದುಃಖತಪ್ತರು: ಪ್ರಸನ್ನ ಕುಮಾರ್, ಜಯಲಕ್ಷ್ಮಿ, ಅಮಿತ್, ಅನುಷಾ, ಹೆಚ್.ಎಂ.ಪಿ.ಎಂಟರ್‌ಪ್ರೈಸಸ್, ನಂಜನಗೂಡು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಜಯಮ್ಮ (75 ವರ್ಷ)

ಲೇ|| ಎಂ.ಎಸ್ ನೀಲಕಂಠನ್‌ರವರ ಧರ್ಮಪತ್ನಿ

ಮರಣ: 09.06.2025

ದುಃಖತಪ್ತರು: ಮಗ ಎಂ.ಎನ್.ಮಹೇಶ್, ಉಪಾಧ್ಯಕ್ಷರು ಮೈಸೂರು ಮರ್ಚೆಂಟ್ ಕೋ-ಆಪರೇಟಿವ್ ಬ್ಯಾಂಕ್, ಕುಟುಂಬವರ್ಗದವರು ಮತ್ತು ಶ್ರೀ ಬೆನಕ ಎಂಟರ್‌ಪ್ರೈಸಸ್ & ಗ್ರೂಪ್ಸ್, ಇಟ್ಟಿಗೆಗೂಡು, ಮೈಸೂರು